|| ಶ್ರೀಃ ||

ಶ್ರೀಮತೇ ರಾಮಾನುಜಾಯನಮಃ

# ಶ್ರೀ ಯಾದವಗಿರಿ ಮಾಹಾತ್ಮ್ಯಸಂಗ್ರಹಃ

ಸಟೀಕಃ


ಶ್ರೀ ಯದುಗಿರಿ ಮಹಾಪಾಠಶಾಲಾಧ್ಯಾಪಕೇನ

ಶ್ರೀಮನ್ಮಹೀಶೂರ ಸಂಸ್ಥಾನ ವಿದುಷಾ

**ವಿದ್ವಾನ್ ಜಗ್ಗು ವೆಂಕಟಾಚಾರ್ಯೇಣ**

ವಿರಚಿತಃ ಪ್ರಕಟಿತಶ್ಚ



ಮೈಸೂರು :

ಶ್ರೀ ವೆಂಕಟೇಶ್ವರ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು

1927


---


*(All Rights Reserved)*


ಕ್ರಯ 8 ಆಣೆ] [Price 8 As.

ಶ್ರೀಃ

॥ ಶ್ರೀಮತೇರಾಮಾನುಜಾಯನಮಃ ॥

# ಶ್ರೀ ಯಾದವಗಿರಿ ಮಾಹಾತ್ಮ್ಯ ಸಂಗ್ರಹಃ

## ಸಟೀಕಃ

## ಮಂಗಳಶ್ಲೋಕ

ಶ್ಲೋ॥ ಶ್ರೀ ವೈಕುಂಠಸ್ಥಿತ ಶ್ರೀಪತಿ ರತಿಶಯಿತಜ್ಞಾನಶಕ್ತ್ಯಾದಿಕಾನಾಂ ।
೧ ಬ್ರಹ್ಮಾದೀನಾಮಗಮ್ಯೋನಿರವಧಿಕದಯೋವೈಭವಾನ್ ಸ್ವಾವತಾರಾನ್ ॥
ಕುರ್ವನ್ನಪ್ಯಸ್ತಭಕ್ತೀನ್ವಶಯಿತುಮಿಹಸ್ವಾ ನಾಶ್ರಿತೋರ್ಚಾವತಾರಂ ।
ಯದ್ವದ್ರಾಮಾನುಜೇಂದ್ರೈಃಪರಿಚರಿತಪದಸ್ತ್ರಾಯತೇದ್ಯಾಪಿಸರ್ವಾನ್॥

ಟೀ॥ ಶ್ರೀಯಃಪತಿಯಾದ ಶ್ರೀಮನ್ನಾರಾಯಣನು, ಶ್ರೀ ವೈಕುಂಠಲೋಕದಲ್ಲಿ ಅನಂತ ಗರುಡಾದಿ ನಿತ್ಯರಿಂದಲೂ ಮುಕ್ತರಿಂದಲೂ ಸೇವಿತನಾಗಿದ್ದಾಗ್ಯೂ, ಅಂಡಾಂತರ್ವರ್ತಿಗಳಾದ ಬ್ರಹ್ಮಾದಿಗಳಿಗೂ ವಾಙ್ಮನಸಾಗೋಚರನಾದುದರಿಂದ ಮನುಷ್ಯಾದಿಗಳೂ ತನ್ನ ದರ್ಶನಾದಿಗಳಿಂದ ಕೃತಾರ್ಥರಾಗಬೇಕೆಂಬ ಪರಮ ದಯೆಯಿಂದ ರಾಮ ಕೃಷ್ಣಾದಿ ವಿಭವಾವತಾರಗಳನ್ನು ಮಾಡಿದಾಗ್ಯೂ "ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ" ಎಂಬಂತೆ ಅಂಥವನಲ್ಲಿಯೂ ಭಕ್ತಿಮಾಡದಿರುವ ನಮ್ಮಂಥವರನ್ನೂ ವಶಮಾಡಿಕೊಳ್ಳುವುದಕ್ಕೋಸ್ಕರ ಅರ್ಚಾವತಾರವನ್ನು ಪರಿಗ್ರಹಿಸಿ ಈ ಯಾದವಗಿರಿ (ಮೇಲುಕೋಟೆ) ಯಲ್ಲಿ ಶ್ರೀ ರಾಮಾನುಜಾಚಾರ್ಯರಿಂದ ಸೇವಿಸಲ್ಪಡುತ್ತಾ ಈಗಲೂ ಎಲ್ಲರನ್ನೂ ಕೃತಾರ್ಥರನ್ನಾಗಿ ಮಾಡುತ್ತಾ ಶ್ರೀ ಚಲುವತಿರುನಾರಾಯಣನಾಗಿ ಬಿಜಮಾಡಿಸಿದ್ದಾನೆ.

## ಕಥಾಪ್ರಾರಂಭ.

ಶ್ಲೋ॥ ಜಾತು ವ್ಯಾಸಾದಯಃ ಪ್ರಾಕ್ಕಲಿಬಲರಹಿತಂ ಕ್ಷೇತ್ರಮನ್ವೇಷಮಾಣಾಃ।
೨ ಗತ್ವೋದೀಚೀಂ ಬದರ್ಯಾಂ ಕೃತವಸತಿಮೃಷಿಂ ತಂ ತು ನಾರಾಯಣಾಖ್ಯಮ್ । ಪೃಷ್ಟ್ವಾ ತೇನಾಪಿ ಚೋಕ್ತಾ ಲಘುತರಮಥ ತದ್ವಿಸ್ತರಾಚ್ಛ್ರೋತುಕಾಮಾಃ । ತಸ್ಯಾಜ್ಞಾಪ್ರಾಪ್ತಮೇತೇ ಸುರಮುನಿಮವದನ್ನಾರದಃ ಪ್ರಾಹ ಚೈತಾನ್ ॥

ಟೀ॥ ಪೂರ್ವದಲ್ಲಿ ಕಲಿಯುಗಾರಂಭವಾದಾಗ ವ್ಯಾಸರೇ ಮುಂತಾದ ಅನೇಕ ಮಹರ್ಷಿಗಳು, ಕಲಿಪ್ರವೇಶವಿಲ್ಲದಿರುವ ಕ್ಷೇತ್ರವನ್ನು ತಿಳಿಯುವುದಕ್ಕೋಸ್ಕರ ಉತ್ತರಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ನಾರಾಯಣಮಹರ್ಷಿಯನ್ನು ಪ್ರಶ್ನೆಮಾಡಿ ಅವರಿಂದ ಸಂಗ್ರಹವಾಗಿ ಹೇಳಲ್ಪಟ್ಟ ಯಾದವಗಿರಿ ಮಾಹಾತ್ಮ್ಯವನ್ನು ಕೇಳಿ ಇದನ್ನು ವಿಸ್ತಾರವಾಗಿ ಹೇಳಬೇಕೆಂದು ಪುನಃ ಕೇಳಲು, ಆ ನಾರಾಯಣ ಮಹರ್ಷಿಯು "ನಾರದರು ವಿಸ್ತಾರವಾಗಿ ಹೇಳುತ್ತಾರೆ" ಎಂದು ಹೇಳಿ ಅಂತರ್ಧಾನ ಹೊಂದಲಿಕ್ಕಾಗಿ ಆಗಲೇ ಅಲ್ಲಿಗೆ ಬಂದ ನಾರದರನ್ನು ಕೇಳಿದರು. ಆಗ ನಾರದಮಹರ್ಷಿಯು ವ್ಯಾಸಾದಿಗಳನ್ನು ಕುರಿತು ವಿಸ್ತಾರವಾಗಿ ಯಾದವಗಿರಿ ಮಾಹಾತ್ಮ್ಯವನ್ನು ಹೇಳಲಾರಂಭಿಸಿದರು.

---

### ನಾರಾಯಣನು ಚತುರ್ಮುಖನನ್ನು ಸೃಷ್ಟಿಸಿದುದು

ಶ್ಲೋ॥ ಸೃಷ್ಟ್ಯಾದೌ ಸರ್ವಜೀವಾನ್ಪ್ರಕೃತಿಸಮುದಶಾಂ ಪ್ರಾಪಿತಾನ್ವೀಕ್ಷ್ಯ
೩ ದುಃಖಾದ್ದ್ಯಾಯನ್ಸ್ತ್ವನ್ಯೋಕ್ತುಮಿಚ್ಛನ್ಕರಣತನುಮುಖ್ಯೈರ್ನಾಭಿಪದ್ಮೇ ಸ್ವಕೀಯೇ। ಸೃಷ್ಟ್ವಾ ಬ್ರಹ್ಮಾಣಮಾದೌ ಪ್ರಣವಮಥ ಮನುಂ ಚಾಷ್ಟವರ್ಣಂ ಶ್ರುತೀರಪ್ಯದ್ಯಾಪ್ಯಾದಿಷ್ಟವಾಂ ಸ್ತ್ವಂ ಸೃಜ ಜಗದಿತಿ ತಂ ಶ್ರೀಪತಿಸ್ಸರ್ವಶೇಷೀ॥

ಟೀ॥ ಸರ್ವಸ್ವಾಮಿಯಾದ ಶ್ರಿಯಃಪತಿಯು ಪ್ರಳಯಕಾಲದಲ್ಲಿ ಎಲ್ಲಾ ಜೀವಾತ್ಮವರ್ಗಗಳೂ ಜ್ಞಾನವುಳ್ಳದ್ದಾಗಿದ್ದಾಗ್ಯೂ ಶರೀರೇಂದ್ರಿಯಗಳು ಇಲ್ಲದುದರಿಂದ ಅಚೇತನಗಳಂತಿರುವುದನ್ನು ನೋಡಿ ತನ್ನ ಪರಮಕೃಪೆಯಿಂದ ಅವುಗಳಿ ಶರೀರೇಂದ್ರಿಯಗಳನ್ನು ಕೊಟ್ಟು ಸೃಷ್ಟಿಸುವುದಕ್ಕೋಸ್ಕರ ಮೊದಲು ತನ್ನ ನಾಭಿಕಮಲದಲ್ಲಿ ಚತುರ್ಮುಖಬ್ರಹ್ಮನನ್ನು ಸೃಷ್ಟಿಸಿ ಅವನಿಗೆ ಪ್ರಣವ, ಅಷ್ಟಾಕ್ಷ

ನಾಲ್ಕು ವೇದಗಳು ಇವುಗಳನ್ನೆಲ್ಲಾ ಉಪದೇಶಿಸಿ, "ಇದರಂತೆ ಜಗತ್ತೆಲ್ಲವನ್ನೂ ಸೃಷ್ಟಿಸು" ಎಂದು ಅಪ್ಪಣೆಮಾಡಿದನು.

---

ಚತುರ್ಮುಖನು ದೇವಾದಿಸೃಷ್ಟಿಯನ್ನು ಮಾಡಿ ತಾನು ಆರಾಧಿಸು ವುದಕ್ಕಾಗಿ ಅರ್ಚಾವಿಗ್ರಹವನ್ನು ಅಪೇಕ್ಷಿಸಿದುದು.

ಶ್ಲೋ॥ ಬ್ರಹ್ಮಾಥಾವರ್ತಯನ್ಸ ಪ್ರಣವಮನುಮುಖಾನ್ವೇದರಾಶೀಂ ಸ್ತದರ್ಥಾ
೪ ಸ್ಮನ್ಸ್ವಾನಃ ಪೂರ್ವಕಲ್ಪಂ ಸ್ವಮನಸಿ ಗುಣಯನ್ನಿರ್ಮಮೇ ದೇವ ಪೂರ್ವಾ‌ನ್ ।
ಧ್ಯಾಯನ್ನಾರಾಧನಾರ್ಥಂ ಮಧುಜಿದಭಿಮತಾಂ ಮೂರ್ತಿಮರ್ಚಾಂ
ವಿಮಾನಂ ತ್ವಾನಂದಾಖ್ಯಂ ದದರ್ಶ ಶ್ರುತಿಪಥಸುಸುಖೈರ್ವಾದ್ಯಘೋ
ಷೈಃ ಪ್ರಣುನ್ನಃ ॥

ಟೀ॥ ಅನಂತರ ಚತುರ್ಮುಖನು ಅದೆಲ್ಲವನ್ನೂ ಆವೃತ್ತಿಮಾಡುತ್ತಾ ಆ ವೇದಾರ್ಥಗಳನ್ನು ಭಾವಿಸುತ್ತಾ ಪೂರ್ವಕಲ್ಪದಂತೆಯೇ ಸುರ, ನರ, ತಿರ್ಯಕ್, ಸ್ಥಾವರವೆಂಬ ಚತುರ್ವಿಧ ಪ್ರಾಣಿಗಳನ್ನೂ ಸೃಷ್ಟಿಸಿ, ತಾನು ನಿತ್ಯವೂ ಆರಾಧಿಸು ವುದಕ್ಕಾಗಿ ಭಗವದಭಿಮತವಾದ ಅರ್ಚಾಮೂರ್ತಿಯು ಬೇಕೆಂದು ಧ್ಯಾನಮಾಡು ತ್ತಿರುವಾಗಲೇ ಕಿವಿಗಳಿಗೆ ಇಂಪಾದ ವಾದ್ಯಗಳ ಧ್ವನಿಯನ್ನು ಕೇಳಿ ಕಣ್ಣು ಬಿಟ್ಟು ನೋಡಿದಾಗ ಆನಂದಮಯ ದಿವ್ಯವಿಮಾನವು ಕಾಣಿಸಿತು (ಇದೇ ತಿರುನಾರಾಯ ಣಸ್ವಾಮಿಯವರ ವಿಮಾನ.)

ಶ್ಲೋ॥ ಅಗ್ರೇ ತೂರ್ಯಾಣಿ ಪಶ್ಚಾತ್ಪರಿಷದಮಥ ತಾಂ ವೇಚಯಂತೀ ಶ್ಚ ಯಷ್ಟೀಃ
೫ ಸೌವರ್ಣೀಸ್ಸೂರಿಮುಖ್ಯಾನಹಿ ಖಗ ಪೃತನಾ ನಾಯಕಾ ಸ್ಸ್ಯಂದಿನಶ್ಚ ॥
ಶ್ವೇತಂ ಛತ್ರಂ ಚ ವಾಲವ್ಯಜನಯುಗ ಮಥೋ ಸರ್ವಭೋಗಾನ್ವಿಮಾ
ನಂ ಪಾರ್ಶ್ವದ್ವಂದ್ವೇ ಚ ಚಕ್ರಂ ಶ್ರಿಯಮಥ ಚ ಹರಿಂ ಮಧ್ಯತಸ್ಸಂದದರ್ಶ॥

ಟೀ॥ ಮುಂದೆ ವಾದ್ಯಗಾರರನ್ನೂ, ಅವರ ಹಿಂದೆ ಗೋಷ್ಠಿಯನ್ನೂ, ಅದನ್ನು ವಿಂಗಡಿಸುವ ಚಿನ್ನದ ದೊಣ್ಣೆಗಳನ್ನು ಹಿಡಿದಿರುವ ದಂಡಿಗಳನ್ನೂ ಅವರ ಹಿಂದೆ ಅನನ್ತ, ಗರುಡ, ವಿಷ್ವಕ್ಸೇನ, ಮುಂತಾದ ನಿತ್ಯಸೂರಿಗಳನ್ನೂ, ಛತ್ರ, ಚಾಮರ, ಬೀಸಣಿಗೆ ಮೊದಲಾದ ಉಪಚಾರ ಮಾಡುವವರನ್ನೂ, ಅನಂತರ ಆನಂದ ಮಯದಿವ್ಯವಿಮಾನವನ್ನೂ, ಅದರ ಬಲಪಾರ್ಶ್ವದಲ್ಲಿ ಸುದರ್ಶನ ಮೂರ್ತಿಯನ್ನೂ

ಎಡಪಾರ್ಶ್ವದಲ್ಲಿ ಲಕ್ಷ್ಮೀದೇವಿಯನ್ನೂ ಮಧ್ಯದಲ್ಲಿ ಶ್ರೀ ನಾರಾಯಣಸ್ವಾಮಿಯವರನ್ನೂ, ದರ್ಶನ ಮಾಡಿದನು.

ಶ್ಲೋ|| ದೃಷ್ಟ್ವಾ ಚಿಂತಾಸಮಾನಕ್ಷಣಸಮುಪಗತಾಂ ಮೂರ್ತಿ ಮಾನಂದ
೬ ಸಿಂಧೌ ಮಗ್ನೋ ನೀತ ಸ್ತರಂಗೈ ಸ್ತಟ ಮುಪರಿ ಜಹಾವುತ್ತರೀಯಂ ಜಹಾಸ | ನೃತ್ಯನ್ಬಾಷ್ಪಾವಿಲಾಕ್ಷಃ ಕೃತನುತಿ ರಥ ತತ್ಪ್ರತ್ಯಗೃಹ್ಣಾದ್ವಿಮಾನಂ ಭಾರತ್ಯಾ ಸಾರ್ಧಮರ್ಚಾಂ ವ್ಯತನುತ ಚ ಬಹೂನ್ಕಲ್ಪ ಸಂಘಾ ನ್ವಿಧಾತಾ ||

ಟೀ|| ಬ್ರಹ್ಮನು ಹೀಗೆ ತಾನು ಯೋಚಿಸುತ್ತಿದ್ದಾಗಲೇ ತನ್ನಿಷ್ಟದಂತೆ ವೈಕುಂಠಲೋಕದಿಂದ ದಯಮಾಡಿಸಿರುವ ಆರ್ಚಾಮೂರ್ತಿಯಾದ ನಾರಾಯಣನನ್ನು ದರ್ಶನಮಾಡಿ ಆನಂದಸಮುದ್ರದಲ್ಲಿ ಮುಳುಗಿ ಸ್ವಲ್ಪ ಸಮಾಧಾನಮಾಡಿಕೊಂಡು ಕುಣಿಯುವುದು, ಓಡುವುದು, ಬರುವುದು, ಉತ್ತರೀಯವನ್ನು ಮೇಲಕ್ಕೆ ಎಸೆಯುವುದು, ನಗುವುದು, ಆನಂದಬಾಷ್ಪವನ್ನು ಸುರಿಸುವುದು, ಸ್ತೋತ್ರ ಮಾಡುವುದು, ಹೀಗೆಮಾಡಿ, ಆನಂದಮಯ ದಿವ್ಯವಿಮಾನವನ್ನು ವಿಷ್ವಕ್ಸೇನರಿಂದ ಬಿಜಮಾಡಿಸಿಕೊಂಡು ಆ ನಾರಾಯಣಸ್ವಾಮಿಯನ್ನು ತನ್ನ ಧರ್ಮಪತ್ನಿಯಾದ ಸರಸ್ವತಿಯೊಡನೆ ಕೂಡಿ ಅನೇಕ ಕಲ್ಪಗಳವರಿಗೂ ಆರಾಧಿಸುತ್ತಿದ್ದನು.

ಶ್ರೀ ನಾರಾಯಣಸ್ವಾಮಿಯು ಸತ್ಯಲೋಕದಿಂದ ಭೂಲೋಕಕ್ಕೆ ಬಿಜಮಾಡಿಸಿದುದು.

ಶ್ಲೋ|| ಪುತ್ರಶ್ಶಿಷ್ಯಶ್ಚ ಧಾತು ಸ್ಸನದಿತಿ ಪದವಾನ್ಪೂರ್ವ ಮಾಸೀ ತ್ಕುಮಾರೋ
೭ ಯೋಽಸೌ ದಿವ್ಯಂ ವಿಮಾನಂ ಪರಿಚರಿತುಮನಾ ಭಕ್ತಿಪೂರ್ವಂ ಯಯಾಚೇ | ಲಬ್ಧ್ವೈನಂ ಸತ್ಯಲೋಕಾದನಯದಥ ಗಿರಿಂ ಕಾಂಚನಂ ರಾಜತಂ ಚ ಪ್ರಾಲೇಯಂ ಚ ಕ್ರಮೇಣಾಹಿತನತಿನುತಿರವ್ಯಾಸ್ಥಿತೈಸ್ತತ್ರ ತತ್ರ ||

ಟೀ|| ಹೀಗಿರುವಲ್ಲಿ ಚತುರ್ಮುಖನ ಮಗನಾಗಿಯೂ ಶಿಷ್ಯನಾಗಿಯೂ ಇರುವ ಸನತ್ಕುಮಾರರು ಈ ಆನಂದಮಯದಿವ್ಯವಿಮಾನಮಧ್ಯಸ್ಥರಾದ ನಾರಾಯಣಸ್ವಾಮಿಯನ್ನು ಭೂಲೋಕದಲ್ಲಿ ತಾನು ಆರಾಧಿಸುವುದಕ್ಕೋಸ್ಕರ ಬ್ರಹ್ಮನನ್ನು ಪ್ರಾರ್ಥಿಸಲು, ಆ ನಾರಾಯಣನ ಅಪ್ಪಣೆಯ ಪ್ರಕಾರವೇ ಚತುರ್ಮುಖನು ಬಿಜಮಾಡಿಸಿಕೊಡಲು, ಸನತ್ಕುಮಾರರು, ಆ ಸತ್ಯಲೋಕದಿಂದ ಮೇರುಪರ್ವತಕ್ಕೂ, ಅಲ್ಲಿಂದ ಕೈಲಾಸಪರ್ವತಕ್ಕೂ, ಅಲ್ಲಿಂದ ಹಿಮವತ್ಪರ್ವತಕ್ಕೂ, ಅಲ್ಲಲ್ಲಿರುವ ದೇವತಾದಿಗಳಿಂದ

ಪ್ರದಕ್ಷಿಣ ನಮಸ್ಕಾರಾದಿಗಳಿಂದ ಪೂಜಿಸಲ್ಪಟ್ಟ ವಿಮಾನವನ್ನು ಬಿಜಮಾಡಿಸಿ ಕೊಂಡು ಬಂದರು.

---

## ಶ್ರೀ ನಾರಾಯಣಸ್ವಾಮಿಯು ಯಾದವಗಿರಿಗೆ ಬಿಜಮಾಡಿಸಿದುದು.

ಶ್ಲೋ॥ ತಿಸ್ರೋ ರಾತ್ರೀರ್ಬದರ್ಯಾಶ್ರಮಭುವಿ ನಿವಸನ್ನರ್ಚಯಿತ್ವಾ ವಿಮಾನಂ
೮ ಸಿನ್ನೋऽ ವಾಚ್ಯಾಂ ದಿಶಿ ಪಾಕ್ಸ್ವಜನಕ ಕಥಿತಂ ಪರ್ವತಂ ವೇದಸಂ ಜ್ಞಮ್ । ಯತ್ರಾಸಾವಷ್ಟತೀರ್ಥೀ ಶಮಯತಿ ಕಲುಷಂ ಕಿಂಚ ಕಲ್ಯಾಣತೀರ್ಥಂ ಸಪ್ತಕ್ಷೇತ್ರೀ ಚ ತಸ್ಮಿನ್ನಿಧಿವದಮುಮಸೌ ಸ್ಥಾಪಯಾಮಾಸ ಭೂಮ್ಯಾಮ್ ॥

ಟೀ॥ ಆ ಹಿಮವತ್ಪರ್ವತದಲ್ಲಿ ಉತ್ತರಬದರಿಕಾಶ್ರಮದಲ್ಲಿ ಮೂರು ದಿವಸ ಆರಾಧಿಸುತ್ತಿದ್ದು ಅಲ್ಲಿಂದ ದಕ್ಷಿಣದಿಕ್ಕಿಗೆ ಹೊರಟು, ಚತುರ್ಮುಖನಿಂದ ಮೊದಲು ಹೇಳಲ್ಪಟ್ಟಿದ್ದ ಕಲ್ಯಾಣತೀರ್ಥ, ಅಷ್ಟತೀರ್ಥಗಳು, ಸಪ್ತಕ್ಷೇತ್ರಗಳು ಇವುಗಳಿಂದ ಪಾವನವಾದ ವೇದಪರ್ವತವೆಂದು ಪ್ರಸಿದ್ಧವಾದ ಯಾದವಗಿರಿಯಲ್ಲಿ ಭೂಮಿಯಲ್ಲಿ ಪೂರ್ವಾಭಿಮುಖವಾಗಿ ಶಾಸ್ತ್ರಪ್ರಕಾರ ವಿಮಾನವನ್ನು ಸ್ಥಾಪಿಸಿದರು.

---

## ಯಾದವಗಿರಿಯು ಇರುವ ಸ್ಥಳ, ಇದರ ಮಹಿಮೆ, ಈ ಕ್ಷೇತ್ರದ ಹೆಸರು ಮುಂತಾದುದು.

ಶ್ಲೋ॥ ಸಹ್ಯಾದ್ರೇಃ ಪೂರ್ವತೋವಾ ತದುದಿತ ಸರಿತಶ್ಚೋತ್ತರಸ್ಯಾಂ ಗಿರೀ
೯ ಸ್ಸ್ವೋ ನಾನಾಶೃಂಗಃ ಫಣೀಂದ್ರಾವತರ ಉರುತರಪ್ರೇಮಪಾತ್ರಂ ತು ವಿಷ್ಣೋಃ । ಯೋऽವಾಚೀನೋ ಬದರ್ಯಾಶ್ರಮ ಇತಿ ಕಥಿತೋ ಮಂತ್ರದೈವಾಶ್ರಿತಶ್ಚ ಕ್ಷೇತ್ರಂ ವೈಕುಂಠವೃದ್ಧಿಪ್ರದ ಮಿತಿ ಪರಿತೋ ಯೋಜನೇ ದ್ವೇ ಪ್ರಕ್ಲೃಪ್ತಃ ॥

ಟೀ|| ಯಾವ ಯಾದವಗಿರಿಯು ಸಹ್ಯಪರ್ವತಕ್ಕೆ ಪೂರ್ವದಲ್ಲಿಯೂ ಕಾವೇರೀನದಿಗೆ ಉತ್ತರದಲ್ಲಿಯೂ ಇದ್ದು ಅನೇಕ ಶಿಖರಗಳಿಂದೊಡಗೂಡಿ ಸಾಕ್ಷಾಚ್ಛೇಷರೂಪಿಯಾಗಿದ್ದು, ಭಗವಂತನಿಗೆ ವೈಕುಂಠಕ್ಕಿಂತಲೂ ಅತ್ಯಂತ ಪ್ರೀತಿಪಾತ್ರವಾಗಿಯೂ, ದಕ್ಷಿಣಬದರಿಕಾಶ್ರಮವೆಂತಲೂ ಸುತ್ತಲೂ ಎರಡು ಯೋಜನದವರಿಗೂ ವೈಕುಂಠವರ್ಧನಕ್ಷೇತ್ರವೆಂದೂ ಪ್ರಸಿದ್ಧವಾಗಿಯೂ, ಅಷ್ಟಾಕ್ಷರ ಮಂತ್ರ ಪ್ರತಿಪಾದ್ಯ ದೇವತೆಯಾದ ಶ್ರೀಮನ್ನಾರಾಯಣನಿಗೆ ಆಶ್ರಯವಾಗಿಯೂ ಇದೆಯೋ, ಮತ್ತು

ಶ್ಲೋ|| ದತ್ತಾತ್ರೇಯ ಶ್ರುತೀನಾಂ ಪ್ರವಚನಮತನೋದತ್ರ ತದ್ವೇದಶೈಲೋ
೧೦ ನಾಮ್ನಾ ನಾರಾಯಣಾದ್ರಿ ಸ್ತದನು ಭಗವತ ಸ್ಸನ್ನಿಧಾನಾ ದ್ಬಭೂವ |
ಯದ್ವದ್ರಿರ್ನಾಮತೋ ಭೂದ್ಯದುಕುಲಭಜನಾ ದ್ದ್ವಾಪರಾಂತೇ ಕಲಾ
ವಪ್ಯಂತೋಽನನ್ತಸ್ಯ ಕಶ್ಚಿದ್ಯತಿರಪಿ ಭವಿತಾ ತೇನ ತಚ್ಛೈಲಸಂಜ್ಞಃ ||

ಟೀ|| ಪೂರ್ವದಲ್ಲಿ ದತ್ತಾತ್ರೇಯರು ಈ ಪರ್ವತದಲ್ಲಿ ವೇದಗಳನ್ನು ಪ್ರವಚನ ಮಾಡಿದರಾದ್ದರಿಂದ ವೇದಪರ್ವತವೆಂತಲೂ, ಇಲ್ಲಿ ಶ್ರೀ ನಾರಾಯಣನ ಸಾನ್ನಿಧ್ಯ ಉಂಟಾದಮೇಲೆ ನಾರಾಯಣಾದ್ರಿ ಎಂತಲೂ. ದ್ವಾಪರಯುಗದ ಕೊನೆಯಲ್ಲಿ ಯಾದವರುಗಳು ಬಂದು ಸೇವಿಸುತ್ತಿದ್ದರಾದ್ದರಿಂದ ಯಾದವಗಿರಿ ಎಂತಲೂ, ಈ ಪರ್ವತಕ್ಕೆ ಹೆಸರುಂಟಾಯಿತು ಕಲಿಯುಗದಲ್ಲಿ ಆದಿಶೇಷಾಂಶಭೂತರಾದ ಒಬ್ಬ ಯತಿಯು ಜೀರ್ಣೋದ್ಧಾರಮಾಡಿ ಸೇವಿಸೋಣದರಿಂದ ಯತಿಶೈಲವೆಂಬ ಹೆಸರು ಉಂಟಾಗುವುದು. ಇಂತಹ ಈ ಗಿರಿ (ಮೇಲುಕೋಟೆ) ಯಲ್ಲಿ ಸನತ್ಕುಮಾರರು ಶ್ರೀಮನ್ನಾರಾಯಣನ ವಿಮಾನವನ್ನು ಸ್ಥಾಪಿಸಿದರೆಂದು ನಾರದರು ವ್ಯಾಸಾದಿ ಮಹರ್ಷಿಗಳಿಗೆ ಅಪ್ಪಣೆಕೊಡಿಸಿದರು.

---

ಇನ್ನು ಶ್ರೀ ಚಲುವರಾಯಸ್ವಾಮಿಯವರು ಅವತರಿಸಿದ ಕ್ರಮ.

ಶ್ಲೋ|| ಧಾತ್ರಾ ಪುತ್ರಾಯ ದತ್ತೋ ಹರಿರಪಿ ಚ ಯದಾ ತತ್ರವಿಶ್ಲೇಷಭೀತಾ
೧೧ ಯಾದವನ್ನಾರಾಯಣೋಽಸೌ ಸ್ವಹೃದಯ ಜನಿತಾಂ ಮೂರ್ತಿ ಮನ್ಯಾಂ
ವಿಧಾತ್ರೇ | ಧಾತಾ ತಸ್ಯಾ ಸ್ಸಪರ್ಯಾಂ ವ್ಯತನುತ ಸುಚಿರಂ ಜಾತು

ರಾಮೋಽಕರೋತ್ತಾಂ ಯತ್ರ ಶ್ರೀರಂಗನಾಥೋ ದಶರಥತನಯಾತ್ತಾ
ಪ ಲಂಕಾಧಿನಾಥಮ್ ||

ಟೀ|| ಬ್ರಹ್ಮನು ತನ್ನ ಮಗನಾದ ಸನತ್ಕುಮಾರರಿಗೆ ಶ್ರೀಮನ್ನಾರಾಯಣನನ್ನು ಬಿಜಮಾಡಿಸಿ ಕೊಡುವಾಗ ನಾರಾಯಣನ ಅಗಲಿಕೆಯಿಂದ ಖಿನ್ನನಾಗಲು ನಾರಾಯಣನು ತನ್ನ ಹೃದಯದಿಂದ ಶ್ರೀ ಭೂ ಸಹಿತವಾದ ಮತ್ತೊಂದು ಮೂರ್ತಿಯನ್ನು (ಚಲುವರಾಯಸ್ವಾಮಿಯನ್ನು) ಸೃಷ್ಟಿಸಿ ಬ್ರಹ್ಮನಿಗೆ ಆರಾಧಿಸಲು ಬಿಜಮಾಡಿಸಿಕೊಟ್ಟನು. ಅದು ಮೊದಲು ಬ್ರಹ್ಮನು ಆ ಚಲುವರಾಯಸ್ವಾಮಿಯನ್ನೇ ಬಹಳ ದಿವಸ ಆರಾಧಿಸಿಕೊಂಡಿದ್ದು ಒಂದು ಕಾಲದಲ್ಲಿ (ಅಂದರೆ) ಶ್ರೀ ರಾಮನು ವಿಭೀಷಣನಿಗೆ ತನ್ನ ಮನೆದೇವರಾದ ಶ್ರೀ ರಂಗನಾಥನನ್ನು ಆರಾಧನಕ್ಕೆ ಬಿಜಮಾಸಿಕೊಟ್ಟು ತನಗೆ ಆರಾಧನಕ್ಕೆ ಅರ್ಚಾಮೂರ್ತಿಯಿಲ್ಲದೆ ಖಿನ್ನನಾದಾಗ ಈ ಚಲುವರಾಯಸ್ವಾಮಿಯನ್ನು ಶ್ರೀ ರಾಮನಿಗೆ ಬ್ರಹ್ಮನು ಬಿಜಮಾಡಿಸಿಕೊಟ್ಟನು. ಅದು ಮೊದಲು ಚಲುವರಾಯಸ್ವಾಮಿಗೆ ರಾಮಪ್ರಿಯನೆಂದು ಹೆಸರು ಪ್ರಸಿದ್ಧವಾಯಿತು.

## ಶ್ರೀ ಚಲುವರಾಯಸ್ವಾಮಿಯು ಶ್ರೀರಾಮನಿಂದ ಶ್ರೀಕೃಷ್ಣನ ಮನೆಗೆ ಬಂದು ಸೇರಿದುದು

ಶ್ಲೋ|| ಸೋಯಂ ರಾಮೇಣ ಮೂರ್ತಿಃ ಪವನತನುಭುವೇ ತೇನರಾಜ್ಞೇ ಕುಶಾಯ
೧೨ ಸ್ವಸ್ಯೈ ಪುತ್ರ್ಯೈ ಕುಶೇನ ಪ್ರಥಿತ ಕನಕಮಾಲಾಭಿಧಾಯೈ ವಿತೀರ್ಣಾ|
ತಸ್ಮಾತ್ತಾಂ ಕಂ ತಯಾಪ್ತಾ ಯದುಕುಲ ಮಗಮದ್ವಾಸುದೇವಂ ಕ್ರಮೇಣ
ಪ್ರತ್ಯಕ್ಷಾಣ್ಯಸ್ಯ ಕುರ್ವನ್ನತಿಸರಚರಿತಾನ್ಯಾಸ ತಸ್ಯೈವ ಗೇಹೇ ||

ಟೀ|| ಶ್ರೀರಾಮನು ಸರಯೂನದಿಯ ಮೂಲಕ ಅಯೋಧ್ಯಾವಾಸಿಗಳಾದ ಸಕಲ ಚರಾಚರಗಳೊಡನೆ ಪರಂಧಾಮವನ್ನು ಹೊಂದಿದಾಗ ಈ ಚಲುವರಾಯಸ್ವಾಮಿಯನ್ನು ಆಂಜನೇಯನ ಕೈಯಲ್ಲೂ, ಆಂಜನೇಯನು ಕುಶಮಹಾ

ರಾಜನಿಗೂ, ಕುಶಮಹಾರಾಜನು ತನ್ನ ಮಗಳಾದ "ಕನಕಮಾಲಿನೀ" ಎಂಬ ವಳಿಗೆ ಬಲುವಳಿಯಾಗಿಯೂ ಬಿಜಮಾಡಿಸಿ ಕೊಟ್ಟರು. ಆ ಕನಕಮಾಲಿನಿಯು ಯದುಕುಲದ ಯದುಶೇಖರನಿಗೆ ಮದುವೆಯಾದ್ದರಿಂದ ಈ ಚಲುವರಾಯಸ್ವಾಮಿಯು ಆ ಯದುಕುಲದ ಧೊರೆಗಳಿಂದ ಕ್ರಮವಾಗಿ ಆರಾಧಿಸಲ್ಪಡುತ್ತಿದ್ದು, ಆ ವಂಶದಲ್ಲಿ ಅವತರಿಸಿದ ಶ್ರೀ ಕೃಷ್ಣನಿಂದಲೂ ಆರಾಧಿಸಲ್ಪಡುತ್ತಾ ಶ್ರೀ ಕೃಷ್ಣನ ಅತಿಮಾನುಷವಾದ ಚರಿತ್ರಗಳನ್ನು ನೋಡುತ್ತಾ ಶ್ರೀ ಕೃಷ್ಣನ ಮನೆಯಲ್ಲೇ ಬಿಜಮಾಡಿಸಿದ್ದರು.

---

## ಇನ್ನು ವೈರಮುಡೀ ಕಿರೀಟ ವೃತ್ತಾಂತ.

ಶ್ಲೋ|| ಜಾತು ಪ್ರಹ್ಲಾದಪುತ್ರಃ ಪರಿಚರಣರತೈಸ್ಸೂರಿಭಿರ್ದುಗ್ಧಸಿಂಧಾ ವಾಸೀ
೧೩ ತ್ಸಾಕಂ ಶಯಾಳೋಃ ಪರಿಸರಮಿಳಿತಸ್ವಾತವಿಸ್ರಂಭಗಂಧಾತ್ | ರಂಧ್ರೇ
ತಸ್ಯಾಪಜಹ್ರೇ ಮಣಿಮಕುಟವರಂ ನಾಗಲೋಕಂ ಚ ನಿನ್ಯೇ ನುನ್ನಸ್ತೈ
ತ್ರತ್ಯ ಭಕ್ತೈಃ ಖಗಪತಿ ರಥ ತಂ ಪ್ರಾಪ್ಯಜಿತ್ವಾಽಜಗಾಮ ||

ಟೀ|| ಒಂದು ಕಾಲದಲ್ಲಿ ಪ್ರಹ್ಲಾದನ ಮಗನಾದ ವಿರೋಚನನು ತನ್ನ ತಂದೆಯಲ್ಲಿದ್ದ ವಿಶ್ವಾಸದಿಂದ ನಿತ್ಯಸೂರಿಗಳೊಡಗೂಡಿ ಕ್ಷೀರಾಬ್ಧಿಶಾಯಿಯಾದ ಅನಿರುದ್ಧ ಭಗವಂತನನ್ನು ಸೇವಿಸುತ್ತಿದ್ದು, ಭಗವಂತನ ಯೋಗನಿದ್ರಾಕಾಲದಲ್ಲಿ ಯಾರೂ ಇಲ್ಲದ ಸಮಯದಲ್ಲಿ ಆ ಭಗವಂತನ ಕಿರೀಟವನ್ನು ಅಪಹರಿಸಿಕೊಂಡು ಪಾತಾಳಕ್ಕೆ ಹೊರಟು ಹೋದನು. ಅನಂತರ ಬಂದು ನೋಡಿದ ಅಂತರಂಗ ಭಕ್ತರು ಭಗವಂತನ ಕಿರೀಟವನ್ನು ಕಾಣದೆ "ಇದು ವಿರೋಚನನ ಕೆಲಸವೇ ಸರಿ" ಎಂದು ಊಹಿಸಿ ಗರುಡನೊಡನೆ ಹೇಳಲು, ಗರುಡನು ಪಾತಾಳಕ್ಕೆ ಹೋಗಿ ವಿರೋಚನನ್ನು ಜಯಿಸಿ ಅನಿರುದ್ಧ ಕಿರೀಟವನ್ನು ತೆಗೆದುಕೊಂಡು ಮಹಾವೇಗದಿಂದ ಬರುತ್ತಿದ್ದನು.

---

## ಗರುಡನು ವೈರಮುಡೀ ಕಿರೀಟವನ್ನು ಶ್ರೀ ಕೃಷ್ಣನಿಗೆ ಸಮರ್ಪಿಸಿದುದು.

ಶ್ಲೋ॥ ಆಗಚ್ಛನ್ವ್ಯೋಮಮಾರ್ಗೇ ಪ್ರತಿಹತಗಮನ ಶ್ಚಿಂತಯಿತ್ವಾ ಸುಪರ್ಣೋ
೧೪ ಬೃಂದಾವನ್ಯಾಮಟಂತಂ ಕರ ಧೃತ ಮುರಳಿಂ ಪಿಂಛ ಗುಂಜಾ ವಿಭೂಷಮ್ । ಗೋಪಾಲಂ ನಂದಸೂನುಂ ಗತಿಹತಿಜನನೇ ಹೇತುಮಾಲೋಕ್ಯ ಹರ್ಷಾತ್ ತನ್ಮೂರ್ಧ್ನಿ ನ್ಯಸ್ಯ ಹೈರಂ ಮಕುಟಮನುಗುಣಂ ಸೂರಿಭಿಃ ಶ್ಲಾಘಿತೋಽಭೂತ್ ॥

ಟೀ॥ ಗರುಡನು ಹೀಗೆ ಆಕಾಶಮಾರ್ಗದಲ್ಲಿ ಬರುತ್ತಿರುವಾಗ ಅಂತಹ ತನ್ನ ವೇಗವೂ ನಿಂತುಹೋದುದನ್ನು ನೋಡಿ ಆಶ್ಚರ್ಯಪಟ್ಟು ಎಲ್ಲಾ ಕಡೆಯಲ್ಲೂ ನೋಡಿ ಏನೂಕಾಣದೆ, ಭೂಭಾಗದಲ್ಲಿ ನೋಡಿದಾಗ ನವಿಲುಗರಿಗಳಿಂದಲೂ, ಗುಲಗಂಜಿಮಣಿಗಳ ಸರಗಳಿಂದಲೂ ಅಲಂಕೃತನಾಗಿ ವೇಣುಗಾನ ಮಾಡುತ್ತಾ ಬೃಂದಾವನದಲ್ಲಿ ಗೋವುಗಳನ್ನು ಕಾಯುತ್ತಿದ್ದ ಶ್ರೀ ಕೃಷ್ಣನನ್ನು ದರ್ಶನಮಾಡಿ ಬಹಳ ಹರ್ಷದಿಂದ " ಈ ಕಾರಣದಿಂದಲೇ ತನ್ನ ಗತಿ ಭಂಗವಾಯಿತು " ಎಂದು ನಿಶ್ಚೈಸಿ ಭಗವದಭಿಪ್ರಾಯದಂತೆ ಆ ಕಿರೀಟವನ್ನು ಶ್ರೀ ಕೃಷ್ಣನ ಶಿರಸ್ಸಿನಲ್ಲಿ ಧಾರಣೆ ಮಾಡಿ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡಿ ಕ್ಷೀರಾಬ್ಧಿಗೆ ಹೋಗಿ ನಡದ ವೃತ್ತಾಂತವೆಲ್ಲವನ್ನೂ ಹೇಳಲು ಭಗವಂತನೂ, ನಿತ್ಯಸೂರಿಗಳೂ ಶ್ಲಾಘಿಸಿದರು. ಆದರೆ ಆ ಅನಿರುದ್ಧಭಗವಂತನ ಬಹಳ ದೊಡ್ಡದಾದ ಆ ಕಿರೀಟವು ಶ್ರೀ ಕೃಷ್ಣನಿಗೆ ಸಮರ್ಪಿಸಲ್ಪಟ್ಟಾಗ ಅವನಿಗೆ ತಕ್ಕ ಅಳತೆಯುಳ್ಳದ್ದಾಗಿ ಆಯಿತು. ಇದು ಭಗವಂತನ ಇಚ್ಛೆ. ಆ ಕಿರೀಟದ ಮಹಿಮೆ.

---

## ಶ್ರೀ ಕೃಷ್ಣನು ವೈರಮುಡಿಯನ್ನು ಚಲುವರಾಯಸ್ವಾಮಿಗೆ ಧರಿಸಿದುದು. ಬಲರಾಮನು ನಾರಾಯಣಾದ್ರಿಗೆ ಬಂದುದು.

ಶ್ಲೋ॥ ಕೃಷ್ಣೋಽಪಿ ಸ್ವಾರ್ಚ್ಯ ರಾಮಪ್ರಿಯಶಿರಸಿ ನಿಧಾಯಾದ್ಭುತಂ ತತ್ಕಿರೀಟಂ
೧೫ ನಿತ್ಯಂ ಪೂಜಾ ಮಕಾರ್ಷೀ ದ್ಧಲಭೃದಥ ಯಯೌ ಜಾತು ನಾರಾಯಣಾದ್ರಿಮ್॥ತೀರ್ಥಸ್ನಾನಪ್ರಸಂಗೇ ಹರಿರಪಿ ದದೃಶೇ ತೇನ ನಾರಾಯಣಾಖ್ಯಃ ಕಲ್ಯಾಣೀತೀರ ಭೂಮಾ ವಮನುತ ಸದೃಶಂ ತಂ ಸ ರಾಮಪ್ರಿಯಸ್ಯ ॥

ಟೀ|| ಶ್ರೀಕೃಷ್ಣನೂಕೂಡ ತನ್ನ ಮನೆದೇವರಾದ ಚಲುವರಾಯಸ್ವಾಮಿಯು ಶಿರಸ್ಸಿಗೆ ಧಾರಣೆ ಮಾಡಲು ಅವರ ಶಿರಸ್ಸಿಗೆ ತಕ್ಕಂತೆ ಒಪ್ಪಲು ನಿತ್ಯವೂ ಪೂಜೆಮಾಡುತ್ತಿದ್ದನು. ಹೀಗಿರುವಾಗ ಒಂದು ಕಾಲದಲ್ಲಿ ಬಲರಾಮನು ತೀರ್ಥ ಯಾತ್ರಾ ಪ್ರಸಂಗದಿಂದ ಈ ನಾರಾಯಣಾದ್ರಿಗೆ ಬಂದು ಕಲ್ಯಾಣೀ ತೀರದಲ್ಲಿ ಆನಂದಮಯದಿವ್ಯವಿಮಾನಮಧ್ಯಸ್ಥರಾದ ತಿರುನಾರಾಯಣಸ್ವಾಮಿಯವರನ್ನು ದರ್ಶನಮಾಡಿ ತಮ್ಮ ಮನೆದೇವರಾದ ಚಲುವರಾಯಸ್ವಾಮಿಯು ಹಾಗೆಯೇ ಇಧಾರೆಂದು ತಿಳಿದನು.

ಶ್ಲೋ|| ಕೃಷ್ಣಾಯಾ ಚಷ್ಟ ಗತ್ವಾ ಸು ಸದೃಶ ಇತಿ ತಂ ಸ್ವಸ್ಯ ರಾಮಪ್ರಿಯಸ್ಯೇ
೧೬ ತ್ಯೇತನ್ನೈವಾನುಮೇನೇ ಮುರಭಿ ದಥ ಬಲಃ ಕೃಷ್ಣ ಪೂರ್ವೈ ಸ್ಸ್ವವರ್ಗ್ಯೈಃ|
ನೀತ್ವಾ ರಾಮಪ್ರಿಯಂ ತಂ ಪುರ ಇಹ ನಿದಧೇ ತಸ್ಯ ನಾರಾಯಣಸ್ಯ
ಪ್ರತ್ಯಕ್ಷೀಚಕ್ರು ರೇತತ್ಸುಸದೃಶ ತನುತಾಂ ಸರ್ವ ವೃಷ್ಣಿ ಪ್ರವೀರಾಃ||

ಟೀ|| ಅನಂತರ ಬಲರಾಮನು ದ್ವಾರಕಿಗೆ ಹೋಗಿ "ದಕ್ಷಿಣದೇಶದಲ್ಲಿ ನಾರಾಯಣಾದ್ರಿ ಎಂಬಲ್ಲಿ ನಮ್ಮ ಚಲುವರಾಯಸ್ವಾಮಿಯು ಹಾಗೆಯೇ ಒಬ್ಬ ನಾರಾಯಣಮೂರ್ತಿಯು ಇಧಾರೆ" ಎಂದು ಹೇಳಿದನು. ಕೃಷ್ಣನು ಅದನ್ನು ಒಪ್ಪಲಿಲ್ಲ. ಅನಂತರ ಬಲರಾಮನು ಕೃಷ್ಣನನ್ನೂ ಇತರ ಯಾದವರನ್ನೂ ಕರೆದುಕೊಂಡು ಚಲುವರಾಯಸ್ವಾಮಿಯವರನ್ನೂ ಬಿಜಮಾಡಿಸಿಕೊಂಡು ಬಂದು ನಾರಾಯಣಾದ್ರಿಯಲ್ಲಿ ಶ್ರೀ ನಾರಾಯಣಸ್ವಾಮಿಯವರ ಮುಂದುಗಡೆ ಬಿಜಮಾಡಿಸಿ ಎಲ್ಲರೂ ದರ್ಶನ ಮಾಡಿದಾಗ ಈ ಎರಡು ಮೂರ್ತಿಗಳೂ ಒಂದೇರೂಪವುಳ್ಳವರೆಂದು ಎಲ್ಲರೂ ಒಪ್ಪಿದರು.

---

ನಾರಾಯಣಾದ್ರಿಗೆ ಯಾದವಾದ್ರಿ ಎಂಬ ಹೆಸರು ಬಂದುದು. ನಾರಾಯಣಸ್ವಾಮಿಯೂ ಚಲುವರಾಯಸ್ವಾಮಿಯೂ ಮೂಲ ಬಿಂಬವಾಗಿಯೂ ಉತ್ಸವ ಬಿಂಬವಾಗಿಯೂ ಒಂದು ಕಡೆ ಸೇರಿದ್ದು.

ಶ್ಲೋ|| ತತ್ರೈವಾಸ್ಥಾಪ್ಯ ರಾಮಪ್ರಿಯಮನೆಕ್ಯದಮಿಾ ತತ್ರ ಗತ್ವಾ ಯಥಾ
೧೭ ರ್ಹಂ ಕಾಲೇಕಾಲೇ ವಿಧಾಯೋತ್ಸವ ವಿಧಿ ಮತುಲಂ ಮೋದಮಾ

ಪೇದಿರೇ ಯತ್। ತೇನಾಸೌ ಯಾದವಾದ್ರಿಃ ಕಥಿತ ಇಹ ಜನೈ ರೇವ ಮೇಕತ್ರ ಮೂರ್ತೀ ಮೂಲತ್ವೇನೋತ್ಸವತ್ವೇನ ಚ ಪುನರಪಿ ತೇ ಸಂಗತೇ ಲೋಕಭಾಗ್ಯಾತ್ ॥

ಟೀ ॥ ಅನಂತರದಲ್ಲಿ ಸಕಲ ಯಾದವರುಗಳೂ ಚಲುವರಾಯ ಸ್ವಾಮಿಯನ್ನು ಅಲ್ಲಿಯೇ ಬಿಜಮಾಡಿಸಿ ಆಯಾಯ ಕಾಲಗಳಲ್ಲಿ ಅಲ್ಲಿಗೇನೇ ಹೋಗಿ ಆಯಾಯ ಉತ್ಸವಗಳನ್ನು ಅತ್ಯಂತ ವಿಜೃಂಭಣೆಯಿಂದ ನಡಿಸಿ ದರ್ಶನ ಮಾಡಿ ಕೃತಾರ್ಥ ರಾಗುತ್ತಾ ಬರುತ್ತಿದ್ದರಾದುದರಿಂದ ಇದಕ್ಕೆ "ಯಾದವಾದ್ರಿ" ಎಂದು ಅದು ಮೊದಲು ಹೆಸರಾಯಿತು. ಹೀಗೆ ನಾರಾಯಣಸ್ವಾಮಿಯೂ, ಚಲುವರಾಯಸ್ವಾಮಿಯೂ, ಮೂಲ ವಿಗ್ರಹವಾಗಿಯೂ, ಉತ್ಸವ ವಿಗ್ರಹವಾಗಿಯೂ ಒಂದು ಕಡೆ ಬಿಜಮಾಡಿಸಿದ್ದು ನಮ್ಮಂಥವರ ಭಾಗ್ಯಾತಿಶಯದಿಂದ.

---

## ಇಲ್ಲಿರುವ ಕಲ್ಯಾಣೀತೀರ್ಥದ ಮಹಿಮೆ.

---

ಶ್ಲೋ ॥ ಧಾತ್ರೀಮುದ್ಧೃತ್ಯ ಪೋತ್ರೀ ಶ್ರಮಜಲ ಮಸೃಜತ್ಸ್ವಸ್ಯ ಸರ್ವಾಂ
೧೮ ಗಜಾತಂ ಕಲ್ಯಾಣಂ ನಾಮ ತೀರ್ಥಂ ತದಭವದಿಹ ಸಾ ಸರ್ವಪಾಪಾಪಹರ್ತ್ರೀ । ಗಂಗಾ ಸರ್ವೈಶ್ಚ ತೀರ್ಥೈ ಸ್ಸಹ ವಸತಿ ನಿಜಂ ಪಾಪ ಮುನ್ಮೋಚಯಂತೀ ಪ್ರತ್ಯಬ್ದಂ ಫಾಲ್ಗುನೇ ಮಾಸ್ಯಪಿಚ ಶತಗುಣಂ ಯತ್ರ ಪುಣ್ಯಂ ಕೃತಂ ಸ್ಯಾತ್ ॥

ಟೀ ॥ ಆದಿವರಾಹಮೂರ್ತಿಯು ಭೂದೇವಿಯನ್ನು ಎತ್ತಿಕೊಂಡು ಬಂದಾಗ ಶ್ರಮದಿಂದ ತನ್ನ ಸರ್ವಾಂಗಗಳಿಂದಲೂ ಸ್ರವಿಸಿದ ಬೆವರು ನೀರು "ಕಲ್ಯಾಣ" ಎಂಬ ತೀರ್ಥವಾಯಿತು. ಮತ್ತು ಸ್ನಾನಾದಿಗಳಿಂದ ಎಲ್ಲರ ಪಾಪವನ್ನೂ ಪರಿಹರಿಸುವ ಗಂಗಾನದಿಯು ಸಕಲ ತೀರ್ಥಗಳೊಡನೆ ಕೂಡಿ ತನ್ನ ಪಾಪವನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಪ್ರತಿವರ್ಷವೂ ಫಾಲ್ಗುನ ಮಾಸದಲ್ಲಿ ಈ ಕಲ್ಯಾಣ ತೀರ್ಥದಲ್ಲಿ ವಾಸಮಾಡುವಳು. ಮತ್ತು ಇದರ ತೀರದಲ್ಲಿ ಮಾಡಿದ ತಪೋ ದಾನಾದಿ ಪುಣ್ಯ ಕಾರ್ಯಗಳು ಇತರ ಕಡೆಗಳಲ್ಲಿ ತಾವು ಕೊಡತಕ್ಕ ಫಲಕ್ಕಿಂತಲೂ ಬಹಳ ಭಾಗ ಅಧಿಕವಾಗಿ ಕೊಡುವುದು,

## ಈ ತೀರ್ಥ ಕ್ಷೇತ್ರಗಳ ಮಹಿಮೆಯನ್ನು ತೋರಿಸುವುದಕ್ಕೆ ಸುಚರಿತನೆಂಬ ಬ್ರಾಹ್ಮಣನ ಕಥೆ.

---

ಶ್ಲೋ || ತೀರ್ಥ ಕ್ಷೇತ್ರಾದಿ ನಿಷ್ಠ ಸ್ಸುಚರಿತ ಇತಿ ಯಃ ಕಶ್ಚಿ ದಾಸೀದ್ದ್ವಿ
೧೯ ಜಾಗ್ರ್ಯಃ ಪುತ್ರಾಭ್ಯಾಂ ಭಾರ್ಯಯಾ ಚ ಸ್ವಯಮತಿ ಜರಠೋ
ದುರ್ವಿಧಾಗ್ರೇಸರಶ್ಚ | ಸೋಽಯಂ ಕಲ್ಯಾಣತೀರ್ಥಂ ಯದುಗಿರಿ ಮಪಿ
ವಾ ಶುಶ್ರುವಾ ನ್ನೈವ ಪೂರ್ವಂ ಗಂಗಾ ಸ್ನಾನಾರ್ಥ ಮಾಗಾ ತ್ಸಾಥ
ಸರಿದಪಿ ತದ್ದೃಷ್ಟಿಮಾರ್ಗಂ ನ ಲೇಭೇ ||

ಟೀ || ಯಾವಾಗಲೂ ತೀರ್ಥ ಕ್ಷೇತ್ರಾದಿ ಯಾತ್ರಾಪರನಾಗಿಯೂ ಮುದುಕನಾಗಿಯೂ ದರಿದ್ರನಾಗಿಯೂ ಇದ್ದ ಸುಚರಿತನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ಯದುಗಿರಿಯನ್ನೂ ಕಲ್ಯಾಣಿಯನ್ನೂ ನೋಡಿಯೂ ಕೇಳಿಯೂ ಇರಲಿಲ್ಲ. ಇಂತಹ ಬ್ರಾಹ್ಮಣನು ಇಬ್ಬರು ಗಂಡುಮಕ್ಕಳೊಡನೆಯೂ ಹೆಂಡತಿಯೊಡನೆಯೂ ಸ್ನಾನಾರ್ಥವಾಗಿ ಗಂಗಾನದಿಗೆ ಹೋದನು. ಆದರೆ ಗಂಗಾನದಿಯು ಇವನ ಕಣ್ಣಿಗೆ ಗೋಚರವಾಗಲಿಲ್ಲ.

ಶ್ಲೋ || ನಿರ್ದಿಷ್ಟಾಂ ಸ್ನಾತಪೀತೈಸ್ತ್ವವ ಪುರತ ಇಯಂ ಸೇತಿ ಗಂಗಾಂ
೨೦ ತತೋ ಸಾ ನಾಪಶ್ಯದ್ದುಃಖಿತಸ್ಸನ್ವ್ಯಲಪದತಿತರಾಂ ಕಿಂತು ಕನ್ಯಾಂ
ದದರ್ಶ | ಸ್ನಾತಂ ಕಲ್ಯಾಣತೀರ್ಥೇ ನ ಹಿ ವಿದಿತ ಮಭೂತ್ತಸ್ಯ ನಾ
ಮಾಪಿ ಸೋ ಚೇತ್ ತತ್ರ ತ್ವಂ ಗಚ್ಛ ಶಕ್ತೋ ನ ಹಿ ಯದಿ ಪಠ ವಾ
ನಾಮ ತಸ್ಯ ತ್ರಿವಾರಮ್ ||

ಶ್ಲೋ || ಉಕ್ತಿ ಪ್ರತ್ಯುಕ್ತಿ ಭಂಗ್ಯಾ ನಿಯಮಿತ ಇತಿ ತತ್ತೀರ್ಥನಾಮ ತ್ರಿವಾ
೨೧ ರಂ ಪ್ರೋಚ್ಯಾ ಸಾ ಮಜ್ಜತಿ ಸ್ಮ ತ್ರಿಭುವನತಟಿನೀ ವಾರಿಣಿ ಪ್ರಾಪ್ತ
ಮೋದಃ | ಕಲ್ಯಾಣೀತೀರ್ಥಮಧ್ಯಾದುದಪತದಥ ಸ ಬ್ರಾಹ್ಮಣೋ
ವಿಸ್ಮಿತ ಸ್ಸ್ವೈ ಸ್ಸ್ವಪುತ್ರೈಃ ಪೃಷ್ಟ ಏಷ ಪ್ರಕಟಿತ ಚರಿತ ಸ್ತತ್ರ ವಾಸಂ
ಪ್ರಚಕ್ರೆ ||

ಟೀ|| ಗಂಗಾನದಿಯಲ್ಲಿ ಸ್ನಾನ ಪಾನಾದಿಗಳನ್ನು ಮಾಡುತಿದ್ದವರು "ಇಗೋ ಇದೇ ಗಂಗಾನದಿ" ಎಂದು ಹೇಳಿದಾಗ್ಯೂ ಈ ಸುಚರಿತನು ಗಂಗೆಯನ್ನು ಕಾಣದೆ ಇದ್ದುದರಿಂದ ಬಹಳ ದುಃಖದಿಂದ ಅತ್ತನು. ಆಗ ಒಬ್ಬ ಕನ್ಯಕೆಯು ಬಂದು "ಎಲೈ ಬ್ರಾಹ್ಮಣನೇ! ಕಲ್ಯಾಣೀತೀರ್ಥದಲ್ಲಿ ಸ್ನಾನಮಾಡಿದೆಯಾ?" ಎಂದು ಕೇಳಿದಳು. ಅದಕ್ಕೆ ಬ್ರಾಹ್ಮಣನು "ಅದರ ಹೆಸರನ್ನೇ ಕೇಳಲಿಲ್ಲ" ಎಂದನು. ಕನ್ಯಕೆಯು "ಆದರೆ ಅಲ್ಲಿಗೆ ಹೋಗಿ ಸ್ನಾನಮಾಡಿ ಬಾ" ಎಂದಳು. ಬ್ರಾಹ್ಮಣನು, "ನನಗೆ ಶಕ್ತಿಯೂ ಇಲ್ಲ. ಅಲ್ಲಿಗೆ ಹೋಗಿ ಪುನಃ ಇಲ್ಲಿಗೆ ಬರುವುದಕ್ಕೆ ಏನು ಭರವಸ" ಎಂದನು. ಕನ್ಯಕೆಯು. ಆದರೆ "ಕಲ್ಯಾಣಿ" ಎಂದು ಮೂರಾವರ್ತಿ ನೀವು ನಾಲ್ಕು ಮಂದಿಯೂ ಹೇಳಿ ಈ ಗಂಗಾನದಿಯಲ್ಲಿ ಸ್ನಾನ ಮಾಡಿರಿ" ಎಂದಳು. ಹೀಗೆ ಕನ್ಯಾರೂಪಿಣಿಯಾದ ಗಂಗಾನದಿಯು ಸಂಭಾಷಣವಾದಮೇಲೆ ಗಂಗಾನದಿಯನ್ನು ಕಂಡು ಹೃಷ್ಟನಾಗಿ "ಕಲ್ಯಾಣಿ" ಎಂದು ಮೂರಾವರ್ತಿ ಹೇಳಿಕೊಂಡು ಸಕುಟುಂಬನಾಗಿ ಆ ಗಂಗಾನದಿಯಲ್ಲಿ ಮುಳುಗಿದನು. ಎದ್ದು ನೋಡಿದರೆ ಕಲ್ಯಾಣಿಯಾಗಿತ್ತು. ಅಲ್ಲಿದ್ದವರೆಲ್ಲರೂ ಕಲ್ಯಾಣಿಯಿಂದೆದ್ದು ಬರುವ ಈ ನಾಲ್ಕು ಜನಗಳನ್ನೂ ನೋಡಿ ಆಶ್ಚರ್ಯಪಟ್ಟು ಕೇಳಿದ್ದಕ್ಕೆ ಆ ಸುಚರಿತನು ತನ್ನ ವೃತ್ತಾಂತವೆಲ್ಲವನ್ನೂ ಹೇಳಿ, "ಇದು ಯಾವ ಸ್ಥಲ? ಯಾವ ತೀರ್ಥ?" ಎಂದು ಕೇಳಲು ಅಲ್ಲಿದ್ದವರು, "ಇದು ಯಾದವಗಿರಿ, ಇದು ಕಲ್ಯಾಣತೀರ್ಥ" ಎಂದು ಹೇಳಲು, ಆ ಮಹಿಮೆಗೆ ಅತ್ಯಾಶ್ಚರ್ಯಪಟ್ಟು ಅಲ್ಲಿಯೇ ನಿತ್ಯವಾಸ ಮಾಡಿಕೊಂಡಿದ್ದನು.

ಶ್ಲೋ|| ತಾರ್ತೀಯೀಕ ಸ್ಸುತೋ ಭೂ ದಿಹ ಸತ ಇತರ ಸ್ತಸ್ಯ ನಾರಾಯಣಾ
೨೨ ಖ್ಯ ಸ್ತಂ ಹಿತ್ವಾ ರಿಕ್ತಭಾವಾ ನ್ನರಪತಿ ಮಗಮ ತ್ಪ್ರೇರಿತಶ್ಚ ಸ್ವಪತ್ನ್ಯಾ | ಇಚ್ಛಾಭಾವೇಪಿ ಮಾಸಾ ನ್ನಗರವಸತಿಜಂ ದುಃಖ ಮಾಸಾದ್ಯ ಕಾಂಕ್ಷಿತ್ಕೃಚ್ಛ್ರಾದೃಷ್ಟ್ವಾ ಚ ಭೂಪಂ ಧನ ಮಲಭತ ಚಾತ್ಯಲ್ಪಮೇವಾತಿಯತ್ನಾತ್ ||

ಟೀ || ಈ ಯಾದವಗಿರಿಯಲ್ಲಿ ಈ ಸುಚರಿತನು ವಾಸಮಾಡುತ್ತಿರುವಾಗ ಮೂರನೇ ಗಂಡುಮಗುವು ಒಂದು ಹುಟ್ಟಿತು. ಅದಕ್ಕೆ ನಾರಾಯಣನೆಂದು ಹೆಸರಿಟ್ಟನು. ಏಳೆಂಟು ವರ್ಷಗಳಲ್ಲಿ ದುರ್ಭಿಕ್ಷ ಉಂಟಾಗಿ ದಾರಿದ್ರ್ಯದಿಂದ

ಅತ್ಯಂತ ಪೀಡಿತನಾಗಿ ಖೇದಪಡುತ್ತಿರುವಾಗ ಇವನ ಹೆಂಡತಿಯು ಬಲಾತ್ಕಾರ ಮಾಡಿದ್ದರಿಂದ ತನ್ನ ಹೆಂಡತಿಯನ್ನೂ ಮೂರನೇ ಮಗ ನಾರಾಯಣನನ್ನೂ ಇಲ್ಲಿ ಬಿಟ್ಟು ಇಬ್ಬರು ಗಂಡುಮಕ್ಕಳನ್ನೂ ಕರದುಕೊಂಡು ದ್ರವಿಡದೇಶದ ಒಬ್ಬ ದೊರೆಯ ಸಮೀಪಕ್ಕೆ ಹೋಗಿ, ಮನಸ್ಸಿಲ್ಲದಿದ್ದರೂ ನಾಲ್ಕಾರು ತಿಂಗಳು ನಗರವಾಸ ದುಃಖವನ್ನು ಅನುಭವಿಸುತ್ತಾ ಕೊನೆಗೆ ಮಹಾಪ್ರಯತ್ನಗಳನ್ನು ಮಾಡಿ ರಾಜದರ್ಶನದಿಂದ ಸ್ವಲ್ಪವೇ ಧನವನ್ನು ಹೊಂದಿ ಹಿಂದಿರುಗಿ ಬರುತ್ತಿದ್ದನು.

ಶ್ಲೋ || ಏತಾವತ್ಯೇವಕಾಲೇ ಯದುಗಿರಿನಿಲಯ ಸ್ತಸ್ಯ ಬಾಲೋ ಯಯಾಚೇ
೨೩ ಕ್ಷುತ್ಕ್ಷಾಮೋಽನ್ನಂ ಸ್ವಮಾತು ಸ್ಸವಿಧಮುಪಗತೋ ದೇಹಿ ಮಾತರ್ಮಮೇತಿ | ಸಾದಾತ್ಪಾತ್ರಸ್ಥ ಮನ್ನಂ ಸ ತು ನಹಿ ಬುಭುಜೇ ನೇತಿ ತದ್ದೇವಶೇಷಂ ಕಿಂ ತ್ವಗ್ರೇ ಸ್ವಸ್ಯ ಭಕ್ತ್ಯಾಽವದದಸಕೃದಿದಂ ಭುಂಕ್ಷ್ವ ನಾರಾಯಣೇತಿ ||

ಟೀ || ಇಷ್ಟರಲ್ಲಿಯೇ ಯಾದವಗಿರಿಯಲ್ಲಿದ್ದ ಇವನ ಮೂರನೇ ಮಗ ನಾರಾಯಣನೆಂಬ ಹುಡುಗನು ಹಸಿವಿನಿಂದ ಬಾಧಿತನಾಗಿ ತನ್ನ ತಾಯಿಯನ್ನು ಅನ್ನವನ್ನು ಯಾಚಿಸಲು ಅವಳು ಒಂದು ಪಾತ್ರದಲ್ಲಿ ಅನ್ನವನ್ನು ಹಾಕಿಕೊಡಲು ಅದು ಭಗವನ್ನಿವೇದಿತವಾದುದಲ್ಲವೆಂದು ಹೇಳಿ ತಿನ್ನದೆ ಶ್ರೀನಾರಾಯಣಸ್ವಾಮಿಯವರ ಮುಂದಿಟ್ಟು ಅತ್ಯಂತ ಭಕ್ತಿಯಿಂದ "ದೇವರೇ ಇದನ್ನು ಊಟಮಾಡು" ಎಂದು ಪದೇ ಪದೇ ಹೇಳುತ್ತಾ ಹೊರಗೆ ನಿಂತಿದ್ದನು.

ಶ್ಲೋ || ಲಕ್ಷ್ಮ್ಯಾ ಶ್ರೀ ನಾರಾಯಣೋಽಪಿ ಸ್ವಯ ಮಥ ಬುಭುಜೇ ಪಾತ್ರಗಂ
೨೪ ಸರ್ವ ಮನ್ನಂ ಹೃಷ್ಟೋ ಬಾಲೋ ಯಯಾಚೇ ಪುನರಪಿ ಜನನೀಂ ಸಾ ಕ್ರುಧಾ ತರ್ಜಯನ್ತೀ | ಮನ್ನಾಪಾನಾ ತ ದ್ವಿಡಾಲೈರಪಹೃತಮವದದ್ಭುಂಕ್ಷ್ವ ಭಿಕ್ಷಾಮಟಿತ್ವೇ ತ್ಯೇಕಂ ಪಾತ್ರಂ ದದೌ ತತ್ಸಮುದಿತಮನಸ್ಸ್ವಾದಾಯ ಗೇಹಾನ್ಯವಾಪ ||

ಟೀ || ಶ್ರೀಮನ್ನಾರಾಯಣನು ಲಕ್ಷ್ಮೀದೇವಿಯ ಸಂಗಡ ಆ ಪಾತ್ರದಲ್ಲಿದ್ದ ಅನ್ನವೆಲ್ಲವನ್ನೂ ಅಂಗೀಕರಿಸಿದ್ದರಿಂದ ಬರೀಪಾತ್ರವನ್ನು ನೋಡಿ ಆ ಹುಡುಗನು ಬಹಳ ಸಂತೋಷದಿಂದ ತಾಯಿಯ ಸಮೀಪಕ್ಕೆ ಹೋಗಿ "ಅಮ್ಮಾ ನೀನು ಕೊಟ್ಟ ಅನ್ನವನ್ನು ದೇವರು ಊಟಮಾಡಿಬಿಟ್ಟರು. ನನಗೆ ಬಹಳ ಹಸಿವು, ಅನ್ನ

ವನ್ನು ಕೊಡು" ಎಂದು ಕೇಳಿದನು. ಅದಕ್ಕೆ ಅವಳು, "ಅರ್ಚಾರೂಪಿಯಾದ ದೇವರು ಅನ್ನವನ್ನು ತಿನ್ನುವುದೆಂದರೇನು? ಎಲ್ಲೋ ಬೆಕ್ಕು ತಿಂದಿರುವುದು. ಈ ದುರ್ಭಿಕ್ಷದಲ್ಲಿ ಹೀಗೆ ಮಾಡಿದರೆ ಅನ್ನವನ್ನು ಎಲ್ಲಿಂದ ತರುವುದು, ನೀನು ಭಿಕ್ಷೆ ಮಾಡಿ ತಂದು ತಿನ್ನು" ಎಂದು ಹೇಳಿ ಒಂದು ಪಾತ್ರವನ್ನು ಕೈಯಲ್ಲಿ ಕೊಟ್ಟಳು. ಆಗ ಅವನು ಅದನ್ನು ತೆಗೆದುಕೊಂಡು ಅಲ್ಲಿದ್ದ ಮನೆಗಳಿಗೆ ಭಿಕ್ಷಕ್ಕಾಗಿ ಹೋದನು,

ಶ್ಲೋ || ಭಿಕ್ಷಾಯೈ ಯದ್ಯದೇಷ ಪ್ರವಿಶತಿ ಚ ಗೃಹಂ ತತ್ರ ದೇಶ್ಯಾ ಶು
೨೫ ಲಕ್ಷ್ಮೀ ರ್ದಿವ್ಯಾ ಭಿಕ್ಷಾಂ ದದೌ ತತ್ಸುಚರಿತತನುಭೂಹಸ್ತಗಂ
ಪಾತ್ರ ಮಾಸೀತ್। ಪೂರ್ಣಂ ರತ್ನೈ ಸ್ಸಚಾ ಗಾ ದ್ಗೃಹ ಮಥ ಜನನೀ
ಭಾಜನಂ ಸಪ್ತವಾರಂ ಪ್ರಾಹಿಣೋತ್ಸತ್ಸ್ಪೃಹಾ ಪುಪೂರೇ ತದಪಿ ಸಮಭವ
ಚ್ಚಾಷ್ಟಮೇ ಪೂರ್ಣಮನ್ನೈಃ ||

ಟೀ || ಆಗ ಇವನು ಭಿಕ್ಷೆಗಾಗಿ ಯಾವ ಯಾವ ಮನೆಗೆ ಹೋದನೋ ಆಯಾಯ ಮನೆಗಳಿಗೆ ಲಕ್ಷ್ಮೀದೇವಿಯು ಬಂದು ಸಂತೋಷದಿಂದ ಅನ್ನದ ಭಿಕ್ಷೆಯ ನ್ನಿತ್ತಳು. ಅದೆಲ್ಲವೂ ಮನೆಗೆ ಹೋಗುವಾಗ ರತ್ನಗಳಾದುವು. ಅದನ್ನು ನೋಡಿ ತಾಯಿಯು ಆಸೆಯಿಂದ ಪುನಃ ಕಳುಹಿಸಿದಳು. ಹೀಗೆ ಏಳಾವರ್ತಿ ಭಿಕ್ಷೆಗೆ ಕಳುಹಿಸಿದಳು. ಲೋಕಮಾತೆಯು ಏಳಾವರ್ತಿಯೂ ರತ್ನಭಿಕ್ಷೆಯನ್ನು ಕೊಟ್ಟಳು. ಎಂಟನೇ ಆವರ್ತಿ ಹೋದಾಗ ಅನ್ನದಭಿಕ್ಷೆಯೇ ಆಗಿತ್ತು. ಆಗ ಇಬ್ಬರೂ ಅದನ್ನು ಊಟಮಾಡಿ ತೃಪ್ತರಾದರು, (ಏಳಾವರ್ತಿ ಬಂದ ರತ್ನಭಿಕ್ಷೆಯಿಂದ ತೃಪ್ತಿಯಾಗಲಿಲ್ಲ) ಅದುವರಿಗೂ ನಿಶ್ಚಿಂತರಾಗಿ ಮಲಗುತ್ತಿದ್ದವರು ಅದುಮೊದಲು ಸ್ವಲ್ಪವೂ ನಿದ್ರೆಯಿಲ್ಲದೆ ಕಾದುಕೊಂಡಿದ್ದರು.

ಶ್ಲೋ||ತಾವದ್ದ್ವಾಭ್ಯಾಂ ಸುತಾಭ್ಯಾಂ ಸಹ ಸ ಸುಚರಿತಶ್ಚೋರಮುಷ್ಟಸ್ವರಿಕ್ಥೋ
೨೬ ದಂಡಾಘಾತಾರ್ದಿತಾಂಗೋ ನಿಜಮತಿಮಥ ತಾಂ ಕುತ್ಸಯನ್ನಾಜಗಾ
ಮ। ದೃಷ್ಟ್ವಾರತ್ನೌಘಪೂರ್ಣಂ ಗೃಹಮಥ ಚರಿತಂ ತತ್ಸುತಸ್ಯಾಪಿ ಶೃಣ್ವ
ನ್ನೋದಾನ್ನಾರಾಯಣಂ ತದ್ಭಜನರತಜನಾಂಸ್ತೈಸ್ಸಿಷೇವೇ ಧನೈಸ್ಸಃ ||

ಟೀ || ಅಷ್ಟರೊಳಗೆ ರಾಜಾಸ್ಥಾನದಿಂದ ಯತ್ಕಿಂಚಿದ್ದ್ರವ್ಯವನ್ನು ಯಾಚನೆ ಮಾಡಿತಂದ ಆ ಸುಚರಿತನು ತನ್ನಿಬ್ಬರು ಮಕ್ಕಳೊಡನೆ ಮಾರ್ಗದಲ್ಲಿ ಬರುತ್ತಿರು

ವಾಗ ಕಳ್ಳರು ಇವರನ್ನು ಹೊಡದು ಇವರ ಕೈಯಲ್ಲಿದ್ದುದನ್ನೆಲ್ಲಾ ಅಪಹರಿಸಿ ಕೊಂಡು ಹೋದರು. ಆಗ ಸುಚರಿತನು "ದಿವ್ಯಕ್ಷೇತ್ರದಲ್ಲಿ ಪುರುಷೋತ್ತಮ ನಿಂದ ಬರುವ ಪರಮ ಪುರುಷಾರ್ಥವನ್ನು ಬಿಟ್ಟು ನರಾಧಮನಿಂದ ಅನರ್ಥವನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ನರಕವಾಸವನ್ನು ಮಾಡಿದ ನನ್ನಂತಹ ಪಾತಕಿಗೆ ಈ ಶಿಕ್ಷೆಯು ಸಾಲದು" ಎಂದು ಅಂದುಕೊಂಡು ಬಂದು ನೋಡಿದಾಗ ಮನೆ ಯೆಲ್ಲಾ ರತ್ನಪೂರ್ಣವಾಗಿದ್ದುದನ್ನು ನೋಡಿ, ತನ್ನ ಮಗನಾದ ನಾರಾಯಣನ ವೃತ್ತಾಂತವನ್ನು ಕೇಳಿ, ನಿರ್ಹೇತುಕವಾದ ಭಗವತ್ಕಟಾಕ್ಷಕ್ಕೆ ಅತ್ಯಾಶ್ಚರ್ಯಪಟ್ಟು ಆ ದ್ರವ್ಯಗಳಿಂದ ಭಗವದ್ಭಾಗವತಾರಾಧನವನ್ನು ವಿಶೇಷವಾಗಿ ನಡಿಸುತ್ತಾ ಇದ್ದನು.

ಶ್ಲೋ || ಶ್ರುತ್ವಾ ದೃಷ್ಟ್ವಾ ಚ ಕೇಚಿತ್ಸುಚರಿತಚರಿತಂ ತದ್ಧನಂ ಹರ್ತುಕಾಮಾ
೨೭ ವೇಷೇಣಾಗತ್ಯ ತಸ್ಥುಃ ಕತಿಚನ ದಿವಸಾಂಸ್ತದ್ಗೃಹೇ ವೈಷ್ಣವಾನಾಮ್ |
ತೇಽಪಿ ಪ್ರಾಪ್ಯಾತಿಶುದ್ಧಾಂ ಧಿಯಮನುಸರಣಾತ್ತಸ್ಯ ಮುಕ್ತಿಂ ಚ ಜಗ್ಮುಃ
ಯದ್ಯೇವಂ ಚೋರಮುಕ್ತಿಸ್ಸುಚರಿತಸುಗತಿಃ ಕಿಂಪುನರ್ನ್ಯಾಯಸಿದ್ಧಾ ||

ಟೀ || ಹೀಗೆ ನಿತ್ಯವೂ ಅನೇಕಜನ ಸಂತರ್ಪಣೆ ಮಾಡುತ್ತಿರುವ ಈ ಸುಚರಿತನ ಔದಾರ್ಯಾದಿಗಳನ್ನು ಕೇಳಿಯೂ ಬಂದು ನೋಡಿಯೂ ಇರುವ ಕೆಲವು ಕಳ್ಳರು ವೈಷ್ಣವ ವೇಷವನ್ನು ಹಾಕಿಕೊಂಡು ಕಲ್ಯಾಣೀ ತೀರ್ಥದಲ್ಲಿ ನಿತ್ಯಸ್ನಾನಮಾ ಡುತ್ತಾ ದ್ವಾದಶೋರ್ಧ್ವಪುಂಡ್ರ ತುಲಸೀನಳಿನಾಕ್ಷಮಾಲಿಕಾದಿ ಧಾರಣಮಾಡಿ ಶ್ರೀನಾರಾಯಣಸ್ವಾಮಿಯವರನ್ನು ನಿತ್ಯಸೇವೆ ಮಾಡುತ್ತಾ ಸುಚರಿತನ ಮನೆ ಯಲ್ಲಿ ಶ್ರೀಪಾದತೀರ್ಥ ಪ್ರಸಾದ ಸ್ವೀಕಾರಗಳನ್ನು ಮಾಡುತ್ತಾ ಕದಿಯುವುದಕ್ಕೆ ಸಮಯನಿರೀಕ್ಷಣೆ ಮಾಡುವಷ್ಟರೊಳಗಾಗಿ ಇವರು ಮಾಡಿದ ಈ ಸತ್ಕಾರ್ಯ ಗಳಿಂದಲೂ ಆ ಸುಚರಿತನ ಸಹವಾಸದಿಂದಲೂ, ಅವರ ಮನಸ್ಸು ಶುದ್ಧ ಸತ್ವಗುಣ ಮಯವಾಗಿ ಪಶ್ಚಾತ್ತಾಪಹುಟ್ಟಿ, ಸುಚರಿತನ ಪಾದಗಳಿಗೆರಗಿ "ನಿಮ್ಮ ಧನ ವನ್ನು ಅಪಹರಿಸುವುದಕ್ಕಾಗಿ ಬಂದ ಮಹಾ ಪಾಪಿಗಳಾದ ನಮಗೆ ತಕ್ಕ ಪ್ರಾಯ ಶ್ಚಿತ್ತವನ್ನು ಅಪ್ಪಣೆಕೊಡಿಸಿ ಕಾಪಾಡಬೇಕು" ಎಂದು ಪ್ರಾರ್ಥಿಸಿದಾಗ ಆ ಸುಚರಿ ತನು "ಧನಂ ಮದೀಯಂ ತವ ಪಾದಪಂಕಜಂ" ಎಂಬಂತೆ "ನಾರಾಯಣಪಾದಾರ ವಿಂದ ರೂಪವಾದ ನನ್ನ ಧನವು ಯಾರಿಗೂ ಕದಿಯಲು ಸಾಧ್ಯವಲ್ಲ" ಎಂದು

ಮೊದಲಾಗಿ ಜ್ಞಾನೋಪದೇಶ ಮಾಡಿ ಅವರಿಗೆಲ್ಲಾ ಮೋಕ್ಷೈಶ್ವರ್ಯವನ್ನು ಕೊಡಿಸಿದನು. ಹೀಗೆ ಕಳ್ಳರಿಗೇನೇ ಮೋಕ್ಷ ಬಂದಾಗ ಆ ಸುಚರಿತನಿಗೆ ಮೋಕ್ಷ ಬಂತೆಂಬ ವಿಚಾರವನ್ನು ಹೇಳಬೇಕಾದುದೇ ಇಲ್ಲ.

---

ಈ ಯದುಗಿರಿಯ ನಿವಾಸಿಗಳಲ್ಲಿ ಅಪಚಾರಪಟ್ಟವರಿಗೆ ಆಗುವ ಅನರ್ಥಗಳೇನು ?
ಅವರನ್ನು ಆದರಿಸಿದವರಿಗೆ ಆಗುವ ಆನುಕೂಲ್ಯಗಳೇನೆಂದು ವ್ಯಾಸಾದಿಗಳು
ಕೇಳಿದ್ದಕ್ಕೆ ನಾರದರು ಚತುರ್ವೇದಿಯ (ಉಪಾಖ್ಯಾನ)
ಕಥೆಯನ್ನು ಹೇಳುತ್ತಾರೆ.

---

ಶ್ಲೋ || ರಾಜ್ಞಃ ಕಶ್ಚಿತ್ಪುರೋಧಾ ಧನಹರಣರತೋ ದಾಂಭಿಕೋ ನಾಸ್ತಿಕೋ
೨೮ ಭೂತ್ಸರ್ವಾತಿಥ್ಯಸ್ಸನಾಮ್ನಾ ಸ್ವಗುಣ ಸಮುಗುಣೈಶ್ಶ್ರಾದ್ಧಕರ್ಮ ಪ್ರಚಕ್ರೇ|
ಕಶ್ಚಿದ್ವೃದ್ಧದ್ರಿವಾಸೀ ದ್ವಿಜಉಪಶಮವಾನಧ್ವನಾ ಚಕ್ಷುಧಾ ಚ ಶ್ರಾಂತೋ
ವೃದ್ಧಸ್ಸಬಾಲಸ್ತತಉಪಗತವಾಂಸ್ತದ್ಗೃಹಂ ತದ್ಗುಣಾಜ್ಞಃ ||

ಟೀ || ನಾಲ್ಕು ವೇದಗಳನ್ನೂ ಓದಿದ್ದರಿಂದ "ಚತುರ್ವೇದಿ" ಎಂದೂ ಖ್ಯಾತಿಗೋಸ್ಕರ ಬಂದವರಿಗೆಲ್ಲಾ ಅನ್ನ ಹಾಕುತ್ತಿದ್ದುದರಿಂದ, "ಸರ್ವಾತಿಥ್ಯ" ಎಂದು ಹೆಸರುಳ್ಳವನಾಗಿಯೂ, ದ್ರವ್ಯಾರ್ಜನದಲ್ಲಿ ಚತುರನಾದುದರಿಂದ, ದಂಭಾರ್ಥವಾಗಿ ಯಜ್ಞ ಮಾಡುವನಾಗಿಯೂ, ಶುದ್ಧ ನಾಸ್ತಿಕನಾಗಿಯೂ ಇದ್ದ ಒಬ್ಬ ರಾಜಪುರೋಹಿತನಿದ್ದನು. ಅವನು ತನ್ನಂತಿರುವ ನಾಲ್ಕು ಬ್ರಾಹ್ಮಣರನ್ನಿಟ್ಟುಕೊಂಡು ಶ್ರಾದ್ಧವನ್ನು ಮಾಡುವ ಸನ್ನಾಹದಲ್ಲಿರುವಾಗ, ಯದುಗಿರಿವಾಸಿಯಾದ ಹರಿತಾತನೆಂಬ ಒಬ್ಬ ವೃದ್ಧಬ್ರಾಹ್ಮಣನು ತನ್ನ ಬಾಲಕನನ್ನೂ ಕರದುಕೊಂಡು ಮಾರ್ಗಶ್ರಮದಿಂದಲೂ ಹಸಿವು ಬಾಯಾರಿಕೆಗಳಿಂದಲೂ ಬಹಳ ಕಂಗೆಟ್ಟು ಈ ಚತುರ್ವೇದಿಯ ದುರ್ಗುಣಗಳನ್ನು ತಿಳಿಯದೆ ಇವನ ಮನೆಗೆ ಬಂದನು.

ಶ್ಲೋ|| ದಿತ್ಸನ್ನಸ್ಮೈ ದ್ವಿಜಾಗ್ರ್ಯೋ ಹರಿಪದತುಲಸೀಂ ಯಾಚಮಾನಸ್ಸುತಾರ್ಥೇ
೨೯ ಭಕ್ತಂ ವಾ ತಂಡುಲಾನ್ ವಾ ಶ್ರಮಪರಿಹೃತಯೇ ತತ್ರ ಕಿಂಚಿತ್ ಸ್ಥಲಂ
ವಾ | ಲೇಭೇ ಕಿಂಚಿನ್ನ ಚಾಸಾವವಮತಿಮತುಲಾಂ ಕಿಂತು ಲೇಭೇ ಥ ಬಾ
ಲಃ ಕ್ರೋಧಾನ್ನಿಷ್ಕಾಸಿತೋಭೂದರರ ಹತಪದಃ ಪಾತಿತಸ್ತಂ ಶಶಾಪ ||

ಟೀ || ಈ ಹರಿರಾತನು ಆ ಚತುರ್ವೇದಿಗೆ ನಾರಾಯಣಶ್ರೀಪಾದ ತುಲಸಿಯನ್ನು ಕೊಡಲು "ನಮ್ಮ ಮನೆಯಲ್ಲೇ ಬೇಕಾದಷ್ಟು ತುಲಸೀಗಿಡಗಳಿವೆ. ಹಾಗಿಷ್ಟವಿದ್ದಲ್ಲಿ ಅನುಪನೀತನಾದ ಈ ನನ್ನ ಹುಡುಗನ ಕೈಯಲ್ಲಿ ಕೊಡು" ಎಂತಲೂ, "ಬಹಳ ಹಸಿದಿರುವ ಈ ನನ್ನ ಹುಡುಗನಿಗೆ ಸ್ವಲ್ಪ ಅನ್ನವನ್ನು ಕೊಡು" ಎನಲು "ನಮ್ಮ ಮನೆಯಲ್ಲಿ ಶ್ರಾದ್ಧವೆಂಬುದನ್ನು ಕಾಣೆಯಾ? ನೀನು ಬ್ರಾಹ್ಮಣನಲ್ಲವೇ" ಎಂತಲೂ, "ಸ್ವಲ್ಪ ಅಕ್ಕಿಯನ್ನಾದರೂ ಕೊಡಿಸು" ಎನಲು, ಏತಕ್ಕೆ ಪಿಶಾಚದಂತೆ ಬಾಧಿಸುವೆ" ಎಂತಲೂ, ಆ ಹುಡುಗನು ಕಾಲು ಸೋತು ಯತ್ನವಿಲ್ಲದೆ ಅಂಗಳದಲ್ಲಿ ಕುಳಿತುಕೊಳ್ಳಲು "ಯಾರೋ ಅದು? ಕತ್ತು ಹಿಡಿದು ಆಚೆಗೆ ತಳ್ಳಿ ಕದವನ್ನು ಹೊಚ್ಚು" ಎಂತಲೂ ಆ ಚತುರ್ವೇದಿಯು ಹೇಳಿ ತನ್ನ ಮಗನ ಕೈಯಿಂದ ತಳ್ಳಿಸಿ ಕದಹಾಕಿಸುವಾಗ, ಕದವು ಆ ಹುಡುಗನ ಕಾಲಿಗೆ ತಗಲಿ ಹುಡುಗನು ಕೆಳಗೆ ಬೀಳುವಾಗ ಅಳುತ್ತಾ "ನಾಶವಾಗಿ ಹೋಗಲಿ" ಎಂದು ಶಪಿಸಿದನು.

ಶ್ಲೋ||ತಸ್ಮಾದ್ಗ್ರಾಮಾತ್ಪ್ರಯಾಸ್ಯನ್ ಪಥಿ ಸತು ಹರಿರಾತಾಖ್ಯ ವಿಪ್ರಸ್ಸಪುತ್ರೋ
೩೦ ನೀತಃ ಪ್ರೀತ್ಯಾ ಸುತದ್ವಾದಶಕಯುತಮಹಾರಿಕ್ತಸದ್ವೈಷ್ಣವೇನ | ಗೇ
ಹಂ ಸ್ವಂ ತತ್ರ ಭಿಕ್ಷಾಟನಸಮುಪಹೃತೈಸ್ತಂಡುಲೈಃ ಪಾಚಯಿತ್ವಾಪ
ತ್ನ್ಯಾ ವಿಷ್ಣೋರ್ನಿವೇದ್ಯ ಪ್ರಮುದಿತಮನಸಾ ಭೋಜಿತಸ್ತೃಪ್ತಿಮಾಪ||

ಟೀ|| ಆ ಹರಿರಾತನೆಂಬ ಬ್ರಾಹ್ಮಣನು "ಹೀಗೆ ಶಪಿಸಬಾರದಪ್ಪಾ" ಎಂದು ತನ್ನ ಮಗನಿಗೆ ಬುದ್ಧಿವಾದ ಹೇಳಿ ಏಳಾವರ್ತಿ ಗೋವಿಂದನಾಮೋಚ್ಚಾರಣವನ್ನು ಮಾಡಿ ಆ ಗ್ರಾಮವನ್ನು ಬಿಟ್ಟು ಮತ್ತೊಂದು ಗ್ರಾಮಕ್ಕಾಗಿ ತನ್ನ ಮಗನೊಡನೆ ಪ್ರಯಾಣಹೊರಡಲು ಮಾರ್ಗದಲ್ಲಿ ಉಪಾದಾನಮಾಡುತ್ತಿದ್ದ ಹನ್ನೆರಡು ಗಂಡುಮಕ್ಕಳುಳ್ಳ ವಿಷ್ಣುರಾತನೆಂಬ ಒಬ್ಬ ದರಿದ್ರಬ್ರಾಹ್ಮಣನು ಇವರಿಬ್ಬರ ದುರ್ದೆಶೆಯನ್ನು ನೋಡಿ ಸಹಿಸಲಾರದೆ ತನ್ನ ಮನೆಗೆ ಕರದುಕೊಂಡು ಹೋಗಿ ತನ್ನ ಹೆಂಡತಿಯಿಂದ ಅಡಿಗೆಮಾಡಿಸಿ ದೇವರಿಗೆ ನಿವೇದನಮಾಡಿ ಬಹಳ ಸಂತೋಷದಿಂದ ಊಟಮಾಡಿಸಿದನು.

ಶ್ಲೋ|| ಶಿಷ್ಯೈಸ್ಸಾಕಂ ಚತುರ್ಭಿರ್ಯತಿರಪಿ ಬುಭುಜೇ ತೇನ ಸಾಕಂ ದ್ವಿಜೇನಾ
೩೧ ಪ್ಯೈಕ್ಷ್ಯಯ್ಯಾಸ್ಸೈಸ್ಸುಪೂರ್ಣಾಸ್ಯನುದಿನಮಭವನ್ಭಾಜನಾನ್ಯಸ್ಯಗೇಹೇ |
ತೈರ್ಭುಕ್ತಂ ಯತ್ರ ತತ್ರಾಲಭತ ನಿಧಿಮಸೌ ಮಸ್ಕರೀ ಸೋಪಿ ವಿಷ್ಣು
ಶ್ರೀಪ್ಯಾವೇದಾಸ್ತತಸ್ತತ್ಸಮಭವದನುಯಾತ್ಯೇವ ವಿಷ್ಣುಸ್ಸ್ವಭಕ್ತಾನ್ ||

ಟೀ|| ಈ ಹರಿರಾತನು ತನ್ನ ಮಗನೊಡನೆ, ಊಟಕ್ಕೆ ಕುಳಿತಿರಲು ಒಬ್ಬ ತ್ರಿದಂಡಸನ್ಯಾಸಿಯೂ ಅವನ ನಾಲ್ವರು ಶಿಷ್ಯರೂ ಸಹ ಬಂದು ಕುಳಿತುಕೊಂಡರು. ಏಳು ಜನರೂ ಊಟಮಾಡಿದರು. ಅಂದಿನಿಂದ ಆ ಬಡಬ್ರಾಹ್ಮಣನ ಮನೆಯ ಪಾತ್ರೆಗಳೆಲ್ಲಾ ಭಕ್ಷ್ಯಭೋಜ್ಯಾದಿಗಳಿಂದ ಅಕ್ಷಯಗಳಾದುವು. ಅವರು ಊಟ ಮಾಡಿದ ಜಾಗದಲ್ಲಿ ಬೇಕಾದಷ್ಟು ನಿಧಿಗಳು ದೊರಕಿದವು. ಆ ಸನ್ಯಾಸಿಯು ದತ್ತಾತ್ರೇಯಾವತಾರಿಯಾದ ವಿಷ್ಣುವು. ಆ ಶಿಷ್ಯರು ನಾಲ್ಕುವೇದಗಳು. ಆದುದರಿಂದ ಇವೆಲ್ಲವೂ ಉಂಟಾಯಿತು. ವಿಷ್ಣುವು ತನ್ನ ಭಕ್ತರ ಹಿಂದೆಯೇ ಯಾವಾಗಲೂ ಇಥಾಸೆಯಲ್ಲವೆ? ಹೀಗೆ ಯದ್ವದ್ರಿವಾಸಿಯಾದ ಹರಿರಾತನನ್ನು ಆರಾಧಿಸಿದ ವಿಷ್ಣುರಾತನಿಗೆ ಮಹದೈಶ್ವರ್ಯವುಂಟಾಯಿತು.

ಶ್ಲೋ|| ಯಸ್ಮಾದ್ಗೇಹಾನ್ನಿರಸ್ತೋ ಯದುಗಿರಿನಿಲಯೋ ಬ್ರಾಹ್ಮಣೋಯಂ ತ
೩೨ ತಸ್ಯದ್ಗೇಹೇ ಕ್ಷೀರೇ ವಿಷಂ ದ್ರಾಗುದಗಿರದಹಿರಗ್ರಾನ್ನಭುಕ್ತಾಃ ಪ್ರಣಷ್ಟಾಃ | ತದ್ಬಂಧ್ವಾಕ್ರೋಶರುಷ್ಟೈರ್ನರಪತಿಸುಭಟೈರ್ಮಾರಿತೋ ದಂಡಘಾತೈಸ್ಸರ್ವಾತಿಥ್ಯಸ್ಸುತಾಸ್ತತ್ಪ್ರಹರಣಚಕಿತಾಃ ಪ್ರಾವುರುಗ್ರಂತ್ವರಣ್ಯಮ್ ||

ಟೀ|| ಈ ಹರಿರಾತನನ್ನು ಮನೆಯಿಂದೋಡಿಸಿದ ಚತುರ್ವೇದಿಯ ಮನೆಯಲ್ಲೋ ಅಂದರೆ ನಿಮಂತ್ರಣದ ಬ್ರಾಹ್ಮಣರು ಅಗ್ರಭೋಜನಮಾಡುವುದಕ್ಕೆ ಮೊದಲೇ ಒಂದುಹಾವು ಹಾಲಿನಲ್ಲಿ ಯಾರಿಗೂ ತಿಳಿಯದಂತೆ ವಿಷವನ್ನು ಕಕ್ಕಿತ್ತು. ಆ ಬ್ರಾಹ್ಮಣರು ಅದನ್ನು ಕುಡಿದು ಸತ್ತರು. ಅವರ ಮಕ್ಕಳು ರಾಜನಿಗೆ ತಿಳಿಸಿದರು. ರಾಜಭಟರು ಚತುರ್ವೇದಿಯನ್ನು ಮರ್ಮಸ್ಥಾನಗಳಲ್ಲಿ ಹೊಡದರು. ಅವನು ಸತ್ತನು. "ತಮ್ಮನ್ನೂ ಹೀಗೆಯೇ ಕೊಲ್ಲುವರು" ಎಂಬ ಭಯದಿಂದ ಅವನ ನಾಲ್ಕು ಜನ ಮಕ್ಕಳೂ ಅರಣ್ಯಕ್ಕೆ ಓಡಿಹೋದರು.

ಶ್ಲೋ|| ಕೂಪೋ ವೃಕ್ಷಃ ಕರೀ ದ್ವೀಪ್ಯಭವದತಿ ಮೃತೌ ಕಾರಣಂ ತತ್ರ ತೇ
೩೩ ಷಾಂ ಪತ್ನೀಚೋದ್ಧೃತ್ಯ ಕನ್ಯಾದ್ವಯಮಪಿ ಸದನೇ ನ್ಯಸ್ಯ ವಹ್ನಿಂ ಮಮಾರ | ನಧ್ರ್ಯಾ ಬದ್ಧ್ವಾಽಥ ಪಾದೌ ಯಮಸವಿಧಮಸೌ ತದ್ಭಟೈಃ ಪ್ರಾಪಿತೋ ಭೂದನ್ಯಾಯ್ಯಂ ಮೇ ತ್ವಯೇದಂ ಕೃತಮಿತಿ ಚ ಮುಹುಃ ಪ್ರಾಹ ನೈವಸ್ವತಂ ಸಃ||

ಟೀ|| ಆ ನಾಲ್ವರಲ್ಲಿ ಒಬ್ಬನು ಭಾವಿಯಲ್ಲಿ ಬಿದ್ದೂ, ಮತ್ತೊಬ್ಬನು ಮರವನ್ನೇರಿ ಬಿದ್ದೂ, ಇನ್ನೊಬ್ಬನು ಕಾಡಾನೆಯ ಕೈಗೆ ಸಿಲುಕಿಯೂ, ಮತ್ತೊಬ್ಬನು ಹುಲಿಯ ಬಾಯಿಗೆ ತುತ್ತಾಗಿಯೂ ಸತ್ತರು. ಚತುರ್ವೇದಿಯ ಹೆಂಡತಿಯು ಮನೆಯೊಳಗೆ ನೇಣು ಹಾಕಿಕೊಂಡಳು. ಇಬ್ಬರು ಹೆಣ್ಣುಹುಡುಗಿಯರು ಬಾಗಲಿಗೆ ಬೆಂಕಿ ಹಚ್ಚಿ ಕದಾತಾಳುಹಾಕಿಕೊಂಡು ಮನೆಯೊಳಗೆ ಮಲಗಿಕ್ಕೊಂಡವು. ಹೀಗೆ ಎಲ್ಲವೂ ಸ್ವಲ್ಪಕಾಲದಲ್ಲೇ ಆ ಬ್ರಾಹ್ಮಣನ ಹುಡುಗನ ಶಾಪದಂತೆಯೇ ನಿರ್ಮೂಲವಾಯಿತು. ಅನಂತರ ಯಮಭಟರು ಚತುರ್ವೇದಿಯ ಕಾಲುಗಳಿಗೆ ಮಿಣಿಯನ್ನು ಕಟ್ಟಿ ಯಮನ ಸಮೀಪಕ್ಕೆ ಎಳದುಕ್ಕೊಂಡು ಹೋಗಿ ನಿಲ್ಲಿಸಲು, ಈ ಚತುರ್ವೇದಿಯು ಯಮನನ್ನು ಕುರಿತು "ನೀನು ಬಹಳ ಅನ್ಯಾಯವನ್ನು ಮಾಡಿದೆ. ನಾನು ಸಾಂಗವಾಗಿ ನಾಲ್ಕು ವೇದಗಳನ್ನೂ ಓದಿದೆನು. ಪ್ರತಿವರ್ಷವೂ ಯಜ್ಞಗಳನ್ನು ಮಾಡಿದೆನು. ಬಂದ ಅತಿಥಿಗಳಿಗೆಲ್ಲಾ ಅನ್ನಹಾಕಿದೆನು. ಇಂಥಾ ಧಾರ್ಮಿಕನಾದ ನನಗೆ ಇಂಥಾ ಯಮಯಾತನೆಗಳನ್ನು ನೀನು ಕೊಡಬಹುದೇ?" ಎಂದನು.

ಶ್ಲೋ|| ಏತನ್ನಾಲಂ ಭವತ್ವಂ ಸಪರಿಜನ ಇಹ ಬ್ರಹ್ಮರಕ್ಷೋ ಯಮೋನೇತ್ಯೇ
೩೪ ವಂ ಶಪ್ತೋ ಯಯಾಚೇsವಧಿಮಥ ಸ ಜಗಾದೇಕ್ಷಣಂ ವೈಷ್ಣವಾನಾಮ್ | ರಕ್ಷೋರೂಪೇಣ ತಸ್ಮಿನ್ನಿವಸತಿ ಸುಚಿರಂ ವಿಂಧ್ಯಭೂಮೌ ಸಬಂಧೌ ಕಾಶ್ಮೀರಂ ಗಂತುಕಾಮೌ ಯದುಶಿಖರಿತಟಾದ್ವೈಷ್ಣವೌ ಸಂದದರ್ಶ ||

ಟೀ|| ಅದಕ್ಕೆ ಯಮಧರ್ಮರಾಜನು "ಎಲೈ ಬ್ರಾಹ್ಮಣನೇ ನೀನು ಮಾಡಿದ್ದೆಲ್ಲವೂ ನಿಜ. ಆದರೆ ದ್ರವ್ಯಸಂಪಾದನೆಗೋಸ್ಕರವಾಗಿಯೂ ದಂಭಕ್ಕಾಗಿಯೂ ಮಾಡಿದೆಯೇ ಹೊರ್ತು ಭಗವತ್ಸೇವಾರೂಪವಾಗಿ ಮಾಡಿದೆಯೋ? ಹೇಳು ಅದಿರಲಿ ಆ ಯಾದವಗಿರಿವಾಸಿಯಾದ ಬ್ರಾಹ್ಮಣನು ನಿನ್ನ ಮನೆಗೆ ಬಂದಿದ್ದಾಗ ನಡೆದುದೆಲ್ಲವನ್ನೂ ಸ್ಮರಿಸಿಕೋ? ನಿನಗೆ ಇಷ್ಟುಸಾಲದು. ಅನೇಕ ನರಕಗಳನ್ನು ಅನುಭವಿಸಬೇಕಾಗಿತ್ತು. ಆದರೆ ಆ ಬ್ರಾಹ್ಮಣನು ನಿನ್ನ ಮನೆಯಿಂದ ಹೊರಗೆ ಹೋಗುವಾಗ ಏಳಾವರ್ತಿ ಗೋವಿಂದನಾಮೋಚ್ಚಾರಣವನ್ನು ಮಾಡಿದುದರ ಮಹಿಯಿಂದ ನಿನಗೆ ನರಕಬಾಧೆಯು ತಪ್ಪಿತು. ನೀವೆಲ್ಲರೂ ಬ್ರಹ್ಮರಕ್ಷಸ್ಸಾಗಿ ಹೋಗಿರಿ, ನಿನ್ನಲ್ಲಿ ಅಗ್ರಭೋಜನ ಮಾಡಿದವರು ರಣಹದ್ದುಗಳಾಗಲಿ" ಎಂದು ಶಪಿ

ಸಿದ ಒಡನೆಯೇ ಚತುರ್ವೇದಿಯು ಯಮನಿಗೆ ನಮಸ್ಕಾರಮಾಡಿ "ನನ್ನ ಅಪರಾಧವನ್ನು ಎಲ್ಲವನ್ನೂ ಮನ್ನಿಸಿ ಶಾಪಕ್ಕೆ ಅವಧಿಯನ್ನೂ ಅಪ್ಪಣೆಕೊಡಿಸಬೇಕು" ಎಂದು ಪ್ರಾರ್ಥಿಸಲು, ನಿನಗೆ ಕೆಲವು ವಿಷ್ಣುಭಕ್ತರ ಸಂದರ್ಶನವಾಗುವುದೇ ಅವಧಿ" ಎಂದು ಯಮನು ಹೇಳಲು, ತತ್ಕ್ಷಣವೇ ಸಪರಿವಾರನಾದ ಚತುರ್ವೇದಿಯು ತಕ್ಕ ವೇಷಭಾಷಾರೂಪವುಳ್ಳ ಬ್ರಹ್ಮರಕ್ಷಸ್ಸಾಗಿ ವಿಂಧ್ಯಪರ್ವತದ ಕಾಡಿನಲ್ಲಿ ಬಿದ್ದನು. ಹೀಗೆ ಬಹಳ ದಿವಸ ಅಲ್ಲಿರುವಾಗ ಕಾಶ್ಮೀರದೇಶದಿಂದ ದಕ್ಷಿಣದೇಶ ಯಾತ್ರೆಮಾಡಿಕೊಂಡು ಯಾದವಗಿರಿಯಲ್ಲಿ ಕಲ್ಯಾಣೀಸ್ನಾನಮಾಡಿಕೊಂಡು ಹಿಂದಿರುಗಿ ತಮ್ಮ ದೇಶಕ್ಕೆ ಬರುತ್ತಿದ್ದ ಇಬ್ಬರು ವಿಷ್ಣುಭಕ್ತರನ್ನೂ ಅವರ ಜೊತೆಯಲ್ಲಿ ಮತ್ತೆ ಕೆಲವರು ವೈಷ್ಣವರನ್ನೂ ನೋಡಿದನು.

ಶ್ಲೋ|| ತತ್ಪಾದಾಂಭಸ್ಸಪೀತ್ವಾ ಜನಿತಪರಜನುಸ್ಸಂಸ್ಮೃತಿಸ್ಸ್ವೇತಿವೃತ್ತಂತಾ
೩೫ ಭ್ಯಾಂ ವಿಜ್ಞಾಪ್ಯ ತದ್ವಾಕ್ಕಥಿತಶರಣಿತಃ ಪ್ರಾಪ್ಯ ನಾರಾಯಣಾದ್ರಿಮ್।
ತದ್ವಾಸಾತ್ಸುಪ್ರಸನ್ನೇ ಭಗವತಿ ವಿಜಹೌ ಬ್ರಹ್ಮರಕ್ಷಸ್ತ್ವಮೇಷ ಪ್ರಾಪ್ಯ
ಶ್ರೀವೈಷ್ಣವತ್ವಂ ಜಯವಿಜಯಮುಖಾನ್ಮೋಕ್ಷಸಾಮ್ರಾಜ್ಯಮಾಪ||

ಟೀ|| ಆ ವೈಷ್ಣವರು ಪಾದಪ್ರಕ್ಷಾಳನಮಾಡಿಕೊಂಡ ಜಾಗದಲ್ಲಿ ಸ್ವಲ್ಪ ನಿಂತಿದ್ದ ಅವರ ಶ್ರೀಪಾದತೀರ್ಥವನ್ನು ಪಾನಮಾಡಿದ್ದರಿಂದಲೂ ಅವರು ಊಟಮಾಡಿ ಚೆಲ್ಲಿದ ಎಗಲುಗಳನ್ನು ತಿಂದದ್ದರಿಂದಲೂ, ಆ ಬ್ರಹ್ಮರಕ್ಷಸ್ಸಿಗೆ ಪೂರ್ವಜನ್ಮಸ್ಮರಣೆಯುಂಟಾಗಿ "ಇವರೇ ನಮ್ಮ ಶಾಪವಿಮೋಚನಕ್ಕೆ ಕಾರಣಭೂತರು" ಎಂದು ತಿಳಿದು ದೂರದಲ್ಲಿಯೇ ನಮಸ್ಕಾರಮಾಡಿ ತನ್ನ ವೃತ್ತಾಂತವೆಲ್ಲವನ್ನೂ ತಿಳಿಸಲು ಪರಮದಯಾಳುಗಳಾದ ಅವರು ಇವನಿಗೆ ಜ್ಞಾನೋಪದೇಶಮಾಡಿ "ನೀನು ಯಾದವಾದ್ರಿನಿವಾಸಿಯಲ್ಲಿ ಅಪಚಾರಪಟ್ಟದಿಂದ ಬಂದ ಕಷ್ಟವು ಆ ಯಾದವಾದ್ರಿವಾಸದಿಂದಲೇ ಹೋಗಬೇಕು. ನೀನು ಅಲ್ಲಿಗೆ ಹೋಗಿ ಗಿರಿಪ್ರದಕ್ಷಿಣಮಾಡು. ಭಗವದ್ಭಕ್ತರುಗಳ ಶ್ರೀಪಾದಧೂಳಿಯನ್ನು ನಿತ್ಯವೂ ಶಿರಸಾವಹಿಸು. ಶ್ರೀನಾರಾಯಣನ ಕೃಪೆಯಿಂದ ಕ್ರಮೇಣ ಶಾಪವಿಮೋಚನವಾಗುವುದು" ಎಂದು ಹೇಳಿ ತಮ್ಮ ದೇಶಕ್ಕೆ ಹೊರಟುಹೋದರು. ಅನಂತರ ಈ ಬ್ರಹ್ಮರಕ್ಷಸ್ಸು ಸಪರಿವಾರವಾಗಿ ಯಾದವಾದ್ರಿಗೆ ಬಂದು ಹಾಗೆಯೇ ಮಾಡಿಕೊಂಡಿರಲು ಶ್ರೀನಾರಾಯಣನು ದ್ವಾರಪಾಲಕರಾದ ಜಯವಿಜಯರನ್ನು ಕಳದು ಬ್ರಹ್ಮರಕ್ಷಸ್ಸಾದ ಚತು

ರ್ವೇದಿಯನ್ನು ಅಷ್ಟತೀರ್ಥಗಳಲ್ಲಿ ಸ್ನಾನಮಾಡಿಸಿ ಪೂರ್ವದಂತೆ ಬ್ರಾಹ್ಮಣಜನ್ಮ ಬಂದಮೇಲೆ ಕಲ್ಯಾಣಿಯಲ್ಲಿ ಸ್ನಾನಮಾಡಿಸಿ ತಪ್ತಚಕ್ರಾಂಕನವನ್ನು ಮಾಡಿ ವೈಷ್ಣವರನ್ನಾಗಿ ಮಾಡಿ ನಮ್ಮ ಸಾನ್ನಿಧ್ಯಕ್ಕೆ ಕರತರತಕ್ಕದ್ದೆಂದು ಅಪ್ಪಣೆಮಾಡಿದನು. ಜಯವಿಜಯರುಗಳೂ ಹಾಗೆಯೇ ಮಾಡಲು, ಶ್ರೀಮನ್ನಾರಾಯಣನು ಸಪರಿವಾರನಾದ ಚತುರ್ವೇದಿಯನ್ನು ದಯೆಯಿಂದ ಕಟಾಕ್ಷಿಸಿ ಮೋಕ್ಷೈಶ್ವರ್ಯವನ್ನು ದಯಪಾಲಿಸಿದನು ಹೀಗೆ ಯಾದವಾದ್ರಿನಿವಾಸಿಗಳಲ್ಲಿ ಅಪರಾಧಮಾಡಿದವರಿಗೆ ಕಷ್ಟಗಳು ಬರುವುವು ಅದೂ ಅವರ ಸಹವಾಸದಿಂದಲೇ ಸುಪರಿಣಾಮವಾಗುವುದು ಎಂದು ನಾರದರು ವ್ಯಾಸಾದಿಮಹರ್ಷಿಗಳಿಗೆ ಅಪ್ಪಣೆ ಕೊಡಿಸಿದರು.

---

ಅನಂತರ ಶರಣಾಗತಸಂರಕ್ಷಣಧರ್ಮವಿಚಾರವನ್ನು ನಾರದರು ಪ್ರಕಟಿಸುತ್ತಾರೆ.

---

ಶ್ಲೋ॥ ಶಾಸ್ತ್ರಂ ಮೀಮಾಂಸಮಾನೇ ಸತಿ ಸಹ ಮುನಿನಾ ತತ್ರ ಶಾಂಡಿಲ್ಯನಾ
೩೬ ಮ್ನಾ ದತ್ತಾತ್ರೇಯೇಽಸ್ಯ ಶಿಷ್ಯಾಃ ಕೃತಭುವನಜಯಾಃ ಪ್ರಾಪ್ಯ ಕಲ್ಯಾಣತೀರಮ್ । ಚಿತ್ರಂ ಕಿಂಚಿಚ್ಚರಿತ್ರಂ ಸ್ವನಯನವಿಷಯಃ ಕುತ್ರಚಿತ್ಕಾನನೇ ಯತ್ತತ್ಪ್ರಾಹುಸ್ಸ್ಮೇರಚಿತ್ತಾಃ ಪುರತ ಇಹ ತಯೋರ್ವಕ್ಷ್ಯಮಾಣಪ್ರಕಾರಮ್ ॥

ಟೀ॥ ಒಂದು ಸಮಯದಲ್ಲಿ ದತ್ತಾತ್ರೇಯರೂ ಶಾಂಡಿಲ್ಯಮಹರ್ಷಿಯೂ ಕಲ್ಯಾಣೀತೀರದಲ್ಲಿ ಕುಳಿತುಕೊಂಡು ಶಾಸ್ತ್ರಾರ್ಥವಿಚಾರಗಳನ್ನು ಮಾಡುತ್ತಿರುವಾಗ, ದಿಗ್ವಿಜಯವನ್ನು ಮಾಡಿಕೊಂಡು ಬಂದ ದತ್ತಾತ್ರೇಯಶಿಷ್ಯರು, ತಾವು ಬರುವಾಗ ಅರಣ್ಯದಲ್ಲಿ ನೋಡಿದ ಒಂದು ಆಶ್ಚರ್ಯವಾದ ಚರಿತ್ರವನ್ನು ಅವರಿಬ್ಬರ ಮುಂದೆ ಮೇಲೆ ಹೇಳುವಂತೆ ಹೇಳಿದರು.

ಶ್ಲೋ॥ ವ್ಯಾಘ್ರೋ ವಿದ್ರಾವ್ಯ ಕಂಚಿನ್ಮೃಗಮುಮನುಯಯೌ ಸೋಽಪಿ ಕಂ
೩೭ ಚಿತ್ತರುಂ ದ್ರಾಗಾರೂಢಸ್ತತ್ರ ಕಶ್ಚಿತ್ಕಪಿರಭವದಮುಂ ವ್ಯಾಘ್ರ ಏವಂ ಯಯಾಚೇ । ಮದ್ಭಕ್ಷ್ಯಂ ಪಾತಯೈನಂ ತ್ವಿತಿ ಶರಣಗತಂ ನೈವ ದದ್ಯಾಮಿತಿದ್ರಾಗ್ಜ್ಞಿದ್ರಾಣೇ ವಾನರೇಸೌ ಕಪಿಮಪನುನುದೇ ವ್ಯಾಘ್ರ ವಾಕ್ಯಾತ್ಕೃತಘ್ನಃ ॥

ಟೀ|| ಒಂದು ದೊಡ್ಡಹುಲಿಯು ಒಬ್ಬ ಬೇಡರವನನ್ನು ಹಿಡಿದು ತಿನ್ನಲು ಓಡಿಸಿಕೊಂಡು ಹೋಯಿತು ಅವನು ಒಂದು ಮರವನ್ನು ಹತ್ತಿದನು. ಆ ಮರದಲ್ಲಿ ಒಂದು ಕಪಿ ಇತ್ತು. "ಈ ಮನುಷ್ಯನನ್ನು ತಳ್ಳಿಬಿಡು" ಎಂದು ಹುಲಿಯು ಕಪಿಯನ್ನು ಕೇಳಿತು. "ನನ್ನ ಮನೆಗೆ ಬಂದವನನ್ನು ನಾನು ತಳ್ಳುವುದಿಲ್ಲ" ಎಂದು ಕಪಿಯು ಹೇಳಿ, ನಿದ್ರೆಯಿಂದ ತೂಕಡಿಸುತ್ತಿರಲು ಹುಲಿಯು "ಕಪಿಯನ್ನು ತಳ್ಳಿಬಿಡು, ನಿನ್ನನ್ನು ಬಿಟ್ಟು ಹೋಗುವೆನು" ಎಂದು ಬೇಡರವನನ್ನು ಕುರಿತು ಹೇಳಿತು. ಕೃತಘ್ನನಾದ ಬೇಡರವನು ಕಪಿಯನ್ನು ಮರದಿಂದ ತಳ್ಳಿಬಿಟ್ಟನು.

ಶ್ಲೋ|| ವ್ಯಾಘ್ರೇಣಾಧೋಗೃಹೀತ್ವಾ ಕಪಿರಭಿಜಗದೇ ಪಾತಯಾದ್ಯಾಪಿ ವೈನಂ
೩೮ ಮುಂಚಾಮಿ ತ್ವಾಮಿತೀತ್ಥಂ ಭವತು ಕಪಿರಿತಿ ಪ್ರಾಹ ಸೋಪಿ ವ್ಯಮುಂಚತ್ | ಆರುಹ್ಯಾಥೋ ಕಪಿಸ್ತಂ ತರುಮವದದಮುಂ ವ್ಯಾಘ್ರಮೇನಂ ನ ದದ್ಯಾಂ ಮದ್ಗೇಹಾಯಾಗತಂ ತ್ವಂ ವ್ರಜ ನಿಜಸದನಂ ತ್ವಿತ್ಯಹೋ ಧರ್ಮಸಾರಃ ||

ಟೀ|| ಆಗ ಹುಲಿಯು ಕಪಿಯನ್ನು ಹಿಡಿದುಕೊಂಡು "ಈಗಲೂ ನಿನ್ನನ್ನು ಬಿಟ್ಟುಬಿಡುವೆನು ಉಪಕಾರಮಾಡಿದ ನಿನಗೇ ದ್ರೋಹಮಾಡಿದ ಈ ಕೃತಘ್ನನನ್ನು ಈಗಲಾದರೂ ತಳ್ಳುವಿಯಾ? ಎಂದು ಕೇಳಿತು. ಕಪಿಯು "ಇಂಥಾ ಪಾಪಿಯನ್ನು ಈಗ ತಳ್ಳದಿರುವೆನೇ" ಎಂದು ಹೇಳಿ ಹುಲಿಯ ಕೈಯಿಂದ ಬಿಡಿಸಿಕೊಂಡು ಮರದ ಮೇಲಕ್ಕೆ ಹೋಗಿ ಕುಳಿತುಕೊಂಡು "ನನ್ನ ಮನೆಗೆ ಬಂದವನನ್ನು ನಾನೆಂದಿಗೂ ತಳ್ಳುವದಿಲ್ಲ. ನಿನ್ನ ಹಾದಿ ಹಿಡಿದು ನೀನು ಹೋಗು" ಎಂದು ಹೇಳಿಬಿಟ್ಟಿತು. "ತಿರ್ಯಕ್ಕುಗಳಲ್ಲಿಯೂ ಇಂಥ ಧರ್ಮವುಂಟೇ? ಇದೇನಾಶ್ಚರ್ಯ ಎಂದು ದತ್ತಾತ್ರೇಯ ಶಿಷ್ಯರು ಅವರಿಬ್ಬರೊಡನೆಯೂ ಹೇಳಿದರು. ದತ್ತಾತ್ರೇಯಶಿಷ್ಯರು ಹೇಳಿದುದನ್ನು ಕೇಳಿ ಶಾಂಡಿಲ್ಯರು, 'ಇದು ಶರಣಾಗತರಕ್ಷಣ ಧರ್ಮವೆಂಬುದು. ಸರ್ವಧರ್ಮಗಳಿಗಿಂತಲೂ ಉತ್ತಮವಾದುದು. ಇದು ಪಶುಪಕ್ಷ್ಯಾದಿಗಳಲ್ಲೂ ಇರತಕ್ಕುದು. ಆದರೆ ಇದಕ್ಕಿಂತಲೂ ವಿಶೇಷವಾದ ಮತ್ತೊಂದು ವೃತ್ತಾಂತವನ್ನು ಹೇಳುವೆನು ಕೇಳಿರಿ" ಎಂದು ಹೇಳತೊಡಗಿದರು.

ಶ್ಲೋ|| ನಾಳೀಜಂಘಾಖ್ಯಹಂಸಸ್ತರುವಸತಿ ರಭೂತ್ಕುತ್ರಚಿತ್ಕಾನನೇಮುಂ
೩೯ ವೃಕ್ಷಂ ವಿಪ್ರೋಽತಿದೀನಶ್ರಮಲುಲಿತತನುಃ ಪ್ರಾಪ ವಿಶ್ರಾಂತಿಹೇತೋಃ|

ದೃಷ್ಟ್ವೈವ ಶ್ರುತ್ವಾಸ್ಯದೈನ್ಯಂ ಸ ತು ವಿಹಗವರ ಸ್ಸ್ವಸ್ಯ ಕಂಚಿತ್ಸಖಾ
ಯಂ ಕ್ರವ್ಯಾದಂ ಪ್ರೋಚ್ಯ ಗತ್ವಾ ತಮನುಹರ ಧನಂ ಯಾವದಿಷ್ಟಂ
ತವೇತಿ ||

ಶ್ಲೋ|| ಪ್ರಾಹಾಸೌ ಬ್ರಾಹ್ಮಣೋಪಿ ಪ್ರಮುದಿತಹೃದಯಸ್ತತ್ರ ಗತ್ವಾ ಯ
೪೦ ಥೇಷ್ಟಂ ದ್ರವ್ಯಂ ಲಬ್ಧ್ವಾ ಯಯೌ ತಂ ಖಗವಸತಿತರುಂ ಸೋಪಿ ತಸ್ಮಿನ್ನಿ
ದದ್ರೌ | ತಂ ಹತ್ವಾಽಭುಙ್ಕ್ತ ಪಕ್ತ್ವಾ ಕ್ಷುಧಉಪಶಮನಾಯಾತು ವಿ
ಪ್ರಃ ಕೃತಘ್ನಸ್ತಾವ ತ್ಕ್ರವ್ಯಾದ ಭೃತ್ಯಾಃ ಖಗಮಿಹ ದದೃಶುರ್ನೈವ ತ
ತ್ರಾಗತಾಸ್ತಮ್ ||

ಟೀ|| ಒಂದು ಅರಣ್ಯದಲ್ಲಿ ಒಂದು ಮರದಮೇಲೆ "ನಾಳೀಜಂಘ" ನೆಂಬ ಒಂದು ಹಂಸಪಕ್ಷಿಯು ವಾಸವಾಗಿತ್ತು. ಅಲ್ಲಿಗೆ ಬಹಳ ದರಿದ್ರನಾದ ಒಬ್ಬ ಬ್ರಾಹ್ಮಣನು, ಹಸಿವು, ಬಾಯಾರಿಕೆ, ಮಾರ್ಗಶ್ರಮ ಇವುಗಳಿಂದ ಬಹಳ ಕಂಗೆಟ್ಟು ವಿಶ್ರಮಿಸಿಕೊಳ್ಳುವುದಕ್ಕೆ ಬಂದನು. ಆತನಿಗೆ ಆ ಹಂಸವು ಸರ್ವೋಪಚಾರಗಳನ್ನೂ ಮಾಡಿ ಆವನ ದುರ್ದಶೆಗಳನ್ನೆಲ್ಲಾ ವಿಚಾರಿಸಿ ದಯೆಯಿಂದ "ಎಲೈ ಬ್ರಾಹ್ಮಣನೇ ಇಂತಹ ಸ್ಥಳದಲ್ಲಿ ನನ್ನ ಸ್ನೇಹಿತನಾದ ರಾಕ್ಷಸರಾಜನಿಧಾನೆ. ಅವನಲ್ಲಿ ಹೋಗಿ ನಾನು ಹೇಳಿದ್ದಾಗಿ ಹೇಳಿ ನಿನ್ನಿಷ್ಟಬಂದಷ್ಟು ದ್ರವ್ಯವನ್ನು ತೆಗೆದುಕ್ಕೊಂಡು ಹೋಗು" ಎಂದು ಹೇಳಿತು. ಈ ಬ್ರಾಹ್ಮಣನು ಬಹಳ ಸಂತುಷ್ಟನಾಗಿ ಅಲ್ಲಿಗೆ ಹೋಗಿ ತಾನು ಹೊರುವಷ್ಟು ದ್ರವ್ಯವನ್ನು ಹೊತ್ತುಕೊಂಡು ಈ ಮರದ ಹತ್ತಿರ ಬಂದು ನೋಡಿದಾಗ ಆ ಪಕ್ಷಿಯು ಮರದಮೇಲೆ ನಿದ್ರೆಮಾಡುತ್ತಿತ್ತು. ಅದನ್ನು ಹಿಡಿದು ಕೊಂದು ಬೇಯಿಸಿ ತಿಂದು ಹೋಗುತ್ತಿರುವಾಗ, ಆ ರಾಕ್ಷಸಭೃತ್ಯರು ಬಂದು ಮರದಮೇಲೆ ಆ ಪಕ್ಷಿಯನ್ನು ಕಾಣಲಿಲ್ಲ.

ಶ್ಲೋ|| ವೃಕ್ಷಾಧಸ್ತಸ್ಯ ಪತ್ರಾಣ್ಯಥ ಧನನಿವಹಂ ತಂ ವಹಂತಂ ಚ ವಿಪ್ರಂ ದೃ
೪೧ ಷ್ಟ್ವಾ ತಾರ್ಕೈರ್ವಿದಿತ್ವಾ ಖಗನಿಧನಕರಂ ತಂ ನಿಜಘ್ನುಃ ಕ್ರುಧಾ ತೇ| ನಾ
ಳೀಜಂಘಸ್ತು ನಾಕಂ ನಿರಯಮಪಿ ಯಯೌ ಬ್ರಾಹ್ಮಣಸ್ಸ್ವಸ್ಯಕೃತ್ಯಾ
ನ್ನಾಳೀಜಂಘಸ್ತು ವಿಪ್ರಂ ದಿವಮನಯದಹೋ ದೇವತಾಃ ಪ್ರಾರ್ಥ
ಯಿತ್ವಾ ||

ಟೀ|| ಆ ಮರದ ಕೆಳಗೆ ಬಿದ್ದಿದ್ದ ಆ ಪಕ್ಷಿಯ ರೆಕ್ಕೆ ಪುಕ್ಕಗಳನ್ನು ನೋಡಿ "ಈಗ ಬಂದಿದ್ದವನೇ ಈ ಕೆಲಸವನ್ನು ಮಾಡಿರಬಹುದು" ಎಂದು ಊಹಿಸಿ ಅವನನ್ನು ಹುಡುಕಿ ಹಿಡಿದು ಅವನ ಮುಖವಿಕಾರ, ಭಯ, ಮಾಂಸಶೇಷ, ಇವು ಗಳಿಂದ ಅವನೇ ಹಂಸವನ್ನು ಕೊಂದವನೆಂದು ನಿಶ್ಚಯಿಸಿ ಅವನನ್ನು ಕೊಂದರು. ತಮ್ಮ ತಮ್ಮ ಕೃತ್ಯಗಳಿಂದ ನಾಳೀಜಂಘನು ಸ್ವರ್ಗಕ್ಕೆ ಹೋದನು, ಬ್ರಾಹ್ಮಣನು ನರಕಕ್ಕೆ ಹೋದನು. ಅಲ್ಲಿಯೂ ನಾಳೀಜಂಘನು ದೇವತೆಗಳನ್ನು ಪ್ರಾರ್ಥಿಸಿ ಬ್ರಾಹ್ಮಣನನ್ನು ನರಕದಿಂದ ಸ್ವರ್ಗಕ್ಕೆ ಕರಿಸಿಕೊಂಡನು. ಇಬ್ಬರೂ ಸ್ವರ್ಗಸುಖ ವನ್ನು ಅನುಭವಿಸಿದರು. ನೀವು ನೋಡಿ ಹೇಳಿದ ಕಪಿವೃತ್ತಾಂತದಲ್ಲಿ ಕಪಿಯು ಸಾಯಲಿಲ್ಲ. ತನ್ನನ್ನು ತಳ್ಳಿದರೂ ಆಗಲೇ ಅವನನ್ನು ಕಾಪಾಡಿತು. ನಾನು ಹೇಳಿದ್ದರಲ್ಲಿ ಆ ಪಕ್ಷಿಗೆ ಪ್ರಾಣವೇ ಹೋಯಿತು. ಲೋಕಾನ್ತರ ದೇಹಾನ್ತರ ಗಳಲ್ಲೂ ಆ ಬ್ರಾಹ್ಮಣನನ್ನು ಕಾಪಾಡಿತು. ಅದು ವಾನರ ಇದು ಪಕ್ಷಿ. ಶರಣಾಗತ ಸಂರಕ್ಷಣ ಧರ್ಮವಿಂಥಾದ್ದು. ಹೀಗಿರುವಲ್ಲಿ ಸರ್ವಜ್ಞನಾಗಿ ಸರ್ವಶಕ್ತನಾಗಿ ಸರ್ವ ಸ್ವಾಮಿಯಾದ ಶ್ರಿಯಃಪತಿಯಲ್ಲಿ ಚೇತನನು ಸ್ವರೂಪಜ್ಞಾನಪುರಸ್ಸರವಾಗಿ ಶರ ಣಾಗತಿಯನ್ನು ಮಾಡಿದರೆ ಫಲದಲ್ಲಿ ಸಂದೇಹವುಂಟೇ? ಎಂದು ಶಾಂಡಿಲ್ಯರು ಹೇಳಿದರು.

ಶ್ಲೋ || ಶಾಂಡಿಲ್ಯೇನೈವಮುಕ್ತೇತ್ವಿಹ ಸಮುಪಯಯೌ ಶಕ್ತಿಪುತ್ರಸ್ಸಶಿಷ್ಯೋ
೪೨ ನ್ಯಸ್ತೋ ನಾರಾಯಣೇನ ಪ್ರಕಟಯತು ಭವಾನ್ದಕ್ಷಿಣಸ್ಯಾಂ ಬದರ್ಯಾ
ಮ್ | ತತ್ವಾನಾಂ ಬೋಧಕಂ ತತ್ಸಕಲಮತಿಕರಂ ವೈಷ್ಣವಂ ಸತ್ಪುರಾ
ಣಂ ತ್ವಿತ್ಯೇವಂ ಸೋಪಿ ಹೇತುಂ ಸಮವದದಿಹ ತ್ವಾಗಮೇ ಪೃಷ್ಟ
ಹೇತುಃ ||

ಟೀ|| ಶಾಂಡಿಲ್ಯರು ಹೀಗೆ ಹೇಳುತ್ತಿರುವಾಗ ವ್ಯಾಸರ ತಂದೆಯಾದ ಪರಾಶರಮಹರ್ಷಿಯೂ ಅವರ ಶಿಷ್ಯರಾದ ಮೈತ್ರೇಯಮಹರ್ಷಿಯೂ ಅಲ್ಲಿಗೆ ಬಂದು ಅವರಿಗೆ ನಮಸ್ಕಾರಮಾಡಿ ಅವರಿಂದ ಸತ್ಕರಿಸಲ್ಪಟ್ಟು ಕುಳಿತುಕೊಳ್ಳಲು "ನೀವು ಇಲ್ಲಿಗೆ ಬಂದ ಕಾರಣವೇನು" ಎಂದು ದತ್ತಾತ್ರೇಯರು ಕೇಳಿದ್ದಕ್ಕೆ ಪರಾಶರರು ಹೇಳಿದ್ದೇನೆಂದರೆ ನಾನು ಉತ್ತರಬದರಿಕಾಶ್ರಮಕ್ಕೆ ಹೋಗಿದ್ದೆನು. ಅಲ್ಲಿ ನಾರಾಯಣ ಮಹರ್ಷಿಯು "ಎಲೈ ಪರಾಶರರೇ ? ದಕ್ಷಿಣಬದರಿಕಾಶ್ರಮ

ವೆಂದು ಪ್ರಸಿದ್ಧವಾದ ನಾರಾಯಣಗಿರಿಯಲ್ಲಿ ನೀವು ತಪ್ಪ ಹಿತ ಪುರುಷಾರ್ಥಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸುವ ಪುರಾಣರತ್ನವಾದ ಸರ್ವಪ್ರಮಾಣಭೂತವಾದ ವಿಷ್ಣುಪುರಾಣವನ್ನು ಮೈತ್ರೇಯರಿಗೆ ಪ್ರವಚನಮಾಡಿರಿ" ಎಂದು ನನಗೆ ಅಪ್ಪಣೆ ಕೊಡಿಸಿದರು. ಅದಕ್ಕಾಗಿ ಇಲ್ಲಿ ಬಂದೆನೆಂದು ಹೇಳಿದರು.

ಇನ್ನು ನಾರದರು ಸಪ್ತಕ್ಷೇತ್ರಗಳನ್ನು ಹೇಳುವರು.

ಶ್ಲೋ || ಕಲ್ಯಾಣೀತೀರ್ಥತಃ ಪ್ರಾಗ್ಗಿರಿವರಶಿಖರೇ ಪ್ರಾದುರಾಸೀನ್ನೃಸಿಂಹಃ
೪೩ ಪ್ರಹ್ಲಾದಪ್ರಾರ್ಥಿತಸ್ಸನ್ನಥ ಇಹ ತು ಗಿರೇಃ ಪ್ರಾಕ್ತಟೇಸ್ಯಾಸ್ಸರಸ್ಯಾಃ |
ವಾರಾಹಂ ಕ್ಷೇತ್ರಮುಕ್ತಂ ಬಹುವಿಧಪದವೀಸಿದ್ಧಿದಂ ಸರ್ವಪುಂಸಾಂ ಯತ್ರಾನ್ತಶ್ಲೋಕಯುಗ್ಮಂ ಸಮದಿಶದತುಲಂ ಕ್ರೋಡರೂಪಃ ಪೃಥ್ವ್ಯೈ ||

ಟೀ|| ಶ್ರೀಕಲ್ಯಾಣೀತೀರ್ಥದ ಪೂರ್ವದಿಕ್ಕಿನಲ್ಲಿ ಪರ್ವತಶಿಖರದ ಮೇಲೆ ಶ್ರೀಯೋಗಾನೃಸಿಂಹನು ಪ್ರಹ್ಲಾದನಿಗೆ ಪ್ರತ್ಯಕ್ಷವಾಗಿ ಸಾನ್ನಿಧ್ಯವನ್ನು ಮಾಡಿ ಈಗಲೂ ಎಲ್ಲರಿಗೂ ಅವರವರ ಇಷ್ಟಫಲಗಳನ್ನು ಕೊಡುತ್ತಿದ್ದಾನಾದ್ದರಿಂದ ಇದು ನಾರಸಿಂಹಕ್ಷೇತ್ರವು. ಈ ಪರ್ವತದ ಕೆಳಗೆ ಕಲ್ಯಾಣಿಯ ಪೂರ್ವದಿಕ್ಕಿನ ತೀರದಲ್ಲಿ ವಾರಾಹಕ್ಷೇತ್ರವು. ಇಲ್ಲಿ ವ್ರತ ಜಪ ದಾನಾದಿಗಳಿಂದ ಶೀಘ್ರಸಿದ್ಧಿಯುಂಟಾಗುವುದು. ಈ ವಾರಾಹಕ್ಷೇತ್ರದಲ್ಲಿ ಭೂದೇವಿಯನ್ನುದ್ಧಾರಮಾಡಿದ ಆದಿವರಾಹಮೂರ್ತಿಯು ತನ್ನ ಎಡತೊಡೆಯಮೇಲೆ ಭೂದೇವಿಯನ್ನು ಕುಳ್ಳಿರಿಸಿಕೊಂಡು ವರಾಹಚರಮಶ್ಲೋಕವನ್ನು ಉಪದೇಶಮಾಡಿದರು.

ಶ್ಲೋ || ಕೂಲೇ ಭೂದ್ದಕ್ಷಿಣೇsಸ್ಯಾ ರಘುಪತಿವಸತಿಃ ಪರ್ಣಶಾಲಾಪುರಾತ
೪೪ ಸ್ಸೀತಾರಣ್ಯಂ ಪ್ರಚಷ್ಟೇ ಸ್ಥಲಮಿಹ ಹಿ ಜನಃ ಪಶ್ಚಿಮೇಸ್ಯಾಸ್ತಟೇಪಿ |
ಜ್ಞಾನಾಶ್ವತ್ಥಸ್ತತೋಧಃ ಪ್ರಣಿಹಿತಮನಸಃ ಪಂಚಭಕ್ತಾಹ್ವಯಾತ್ಸುಸ್ತೇನೇದಂ ಕ್ಷೇತ್ರವರ್ಯಂ ತದತಿಶಯಪದಃ ಪಂಚಭಕ್ತಾಖ್ಯಮಾಹುಃ ||

ಟೀ || ಈ ಕಲ್ಯಾಣತೀರ್ಥದ ದಕ್ಷಿಣತೀರದಲ್ಲಿ ಲಕ್ಷ್ಮಣ ರಚಿತವಾದ ಪರ್ಣಶಾಲೆಯಲ್ಲಿ ಶ್ರೀರಾಮನು ವಾಸಮಾಡುತ್ತಿದ್ದನಾದ್ದರಿಂದ ಈ ಕ್ಷೇತ್ರಕ್ಕೆ

"ಸೀತಾರಣ್ಯ" ವೆಂದು ಹೆಸರು. ಇಲ್ಲಿನ ತುಲಸೀಕಾಷ್ಠದಿಂದ ಮಣಿಗಳನ್ನು ಮಾಡಿ ಆ ಮಾಲಿಕೆಯನ್ನು ಧರಿಸುವುದು ಅತಿಪ್ರಶಸ್ತ. ಈ ಕಲ್ಯಾಣೀತೀರ್ಥದ ಪಶ್ಚಿಮತೀರದಲ್ಲಿ ಅಜ್ಞಾನವಾರಕವೆಂಬ "ಜ್ಞಾನಾಶ್ವತ್ಥ" ವಿರುವುದು. ಅದರ ಕೆಳಗೆ ಶುಕ, ಪುಂಡರೀಕ, ರುಕ್ಮಾಂಗದ, ಅಂಬರೀಷ, ಪ್ರಹ್ಲಾದ, ಈ ಐದು ಭಾಗವತರುಗಳು ನಾರಾಯಣಧ್ಯಾನದಲ್ಲಿ ನಿರತರಾಗಿದ್ದರಾದ್ದರಿಂದ ಇದಕ್ಕೆ ಪಂಚ ಭಾಗವತಕ್ಷೇತ್ರವೆಂದು ಹೆಸರು.

ಶ್ಲೋ|| ಕಿಂಚಿದ್ದೂರೇಸ್ಯ ಪಶ್ಚಾತ್ ಖಗಪತಿನಿಹಿತಾಶ್ವೇತಮೃತ್ಸ್ನಾಕ್ಷಯಾ ಽಽಸ್ತೇ
ಽಽ ಶ್ವೇತದ್ವೀಪಾಹೃತಾ ಽಜಾಜ್ಞಾವಶತ ಇಹ ಹರೇಃ ಕ್ಷೇತ್ರಮೇತತ್ತು ತಾ
ರ್ಕ್ಷ್ಯಂ | ಅತ್ರತ್ಯ ಶ್ವೇತಮೃತ್ಸ್ನಾ ಕೃತ ನಿಟಿಲಮುಖದ್ವಾದಶೋ
ರ್ಧ್ವಪ್ರಪುಂಡ್ರಾ ಯೇ ತೇ ಸೂರಿಪ್ರದೃಶ್ಯಂ ಪದಮನುಭವಿತುಂ ಬದ್ಧದೀ
ಕ್ಷಾ ಹ್ಯಪುತ್ನಾತ್ ||

ಟೀ|| ಈ ಪಂಚಭಾಗವತಕ್ಷೇತ್ರಕ್ಕೆ ಪಶ್ಚಿಮದಿಕ್ಕಿನಲ್ಲಿ ಸ್ವಲ್ಪವೇ ದೂರ ದಲ್ಲಿ "ತಾರ್ಕ್ಷ್ಯ" ಕ್ಷೇತ್ರವೆಂಬದೊಂದು ಕ್ಷೇತ್ರವುಂಟು. ಇಲ್ಲಿ ವಿಷ್ಣುವಿನ ಅಪ್ಪಣೇಪ್ರಕಾರ ಗರುಡನು ಶ್ವೇತದ್ವೀಪದಿಂದ ಶ್ವೇತಮೃತ್ತಿಕೆಯನ್ನು ತಂದು ಇರಿಸಿದನು. ಅದು ಭಗವದಾಜ್ಞೆಯಿಂದ ಅಕ್ಷಯವಾಗಿದೆ. ಆ ಶ್ವೇತಮೃತ್ತಿಕೆ ಯಿಂದ ಲಲಾಟ ಮುಂತಾದ ಹನ್ನೆರಡು ಸ್ಥಾನಗಳಲ್ಲಿ ದ್ವಾದಶೋರ್ಧ್ವಪುಂಡ್ರಗಳ ನ್ನು ಧರಿಸತಕ್ಕವರು ಸೂರಿದೃಶ್ಯವಾದ ವೈಕುಂಠಲೋಕವನ್ನು ಹೊಂದುವದಕ್ಕೆ ಸಿದ್ಧರಾಗಿಧಾರೆ.

ಈಗ ಐದು ಕ್ಷೇತ್ರಗಳು ಹೇಳಲ್ಪಟ್ಟವು. ಇನ್ನೆರಡು, ಪರಿಧಾನ ಶಿಲಾಕ್ಷೇತ್ರ,
ನೃಮುನಕ್ಷೇತ್ರಂ ಇವೆರಡೂ, ವೇದಪುಷ್ಕರಿಣೀ, ನಾರಾಯಣತೀರ್ಥ
ಇವುಗಳ ಸಮೀಪದಲ್ಲಿವೆಯಾದ್ದರಿಂದ ಆ ಎರಡುತೀರ್ಥ
ಗಳನ್ನು ಹೇಳುವಾಗ ಹೇಳಲ್ಪಡುತ್ತೆ.

ಇನು ಅಷ್ಟತೀರ್ಥಗಳು ಹೇಳಲ್ಪಡುತ್ತವೆ.

---

ಶ್ಲೋ || ನಗ್ನೈರ್ಭಗ್ನಾಂಸ್ತು ವೇದಾನವಿತುಮಿಹ ಹರಿಸ್ತಾನ್ವಿಧಾಯ ಸ್ವಶಿಷ್ಯಾ
೪೭ ಸ್ತತ್ರಾತ್ರೇಯಶ್ಚ ಭೂತ್ವಾ ಸ್ವಯಮುದಿಶದಿಮಾನಂಗಪೂರ್ವಾದಿ ಪೂರ್ಣಾನ್ | ತೇನೇದಂ ವೇದತೀರ್ಥಂ ವಿದು ರಿಹ ದೃಷದಿ ನ್ಯಸ್ಯ ಕಾಷಾಯವಾಸೋ ಧತ್ತಾತತ್ಕ್ಷೇತ್ರಮೇತದ್ವಿದುರಪಿ ಪರಿಧಾನಾಶ್ಮ ನಾಮ್ನಾಥ ತದಾಜ್ಞಾಃ ||

ಟೀ || ನಾಸ್ತಿಕರು, ವೇದಬಾಹ್ಯರು, ಕುದೃಷ್ಟಿಗಳು, ಇವರೆಲ್ಲರೂ ವೇದವನ್ನು ದೂಷಿಸಲು, ಆ ವೇದೋದ್ಧಾರಕ್ಕಾಗಿ ವಿಷ್ಣುವು ದತ್ತಾತ್ರೇಯಾವತಾರವನ್ನು ಮಾಡಿ ನಾಲ್ಕು ವೇದಗಳನ್ನೂ ನಾಲ್ಕು ಶಿಷ್ಯರನ್ನಾಗಿಯೂ, ಅಂಗೋಪಾಂಗಗಳನ್ನು ಪ್ರಶಿಷ್ಯರನ್ನಾಗಿಯೂ ಮಾಡಿಕೊಂಡು ಎಲ್ಲರಿಗೂ ಎಲ್ಲವನ್ನೂ ಈ ತೀರ್ಥದ ತೀರದಲ್ಲಿ ಉಪದೇಶಮಾಡಿದರಾದುದರಿಂದ ಈ ತೀರ್ಥಕ್ಕೆ. "ವೇದಪುಷ್ಕರಿಣೀ" ಎಂದು ಹೆಸರಾಯಿತು. ಈ ಪುಷ್ಕರಿಣೀತೀರದಲ್ಲಿ ಒಂದು ಶಿಲೆಯು ಇದೆ. ಅದರ ಮೇಲೆ ಕಾಷಾಯವನ್ನಿಟ್ಟು ದತ್ತಾತ್ರೇಯರು ಪರಿಗ್ರಹಿಸಿದರಾದುದರಿಂದ ಈ ಶಿಲೆಗೆ "ಪರಿಧಾನಶಿಲೆ" ಎಂದು ಹೆಸರಾಗಿ ಈ ಕ್ಷೇತ್ರಕ್ಕೆ "ಪರಿಧಾನಶಿಲಾಕ್ಷೇತ್ರ" ಎಂದು ಹೆಸರಾಯಿತು. ಪರಿಧಾನವೆಂದರೆ ಉಡುವ ವಸ್ತ್ರ.

ಶ್ಲೋ || ದತ್ತಾತ್ರೇಯಸ್ಯ ದರ್ಭಗ್ರಹಣಮಿಹ ಪುರಾ ನಿತ್ಯಮಾಸೀನ್ಮಹರ್ಷೇಃ
೪೭ ತೇನೇದಂ ದರ್ಭತೀರ್ಥಂ ವಿದುರಿಹಜಕುಶಾನಾಸ್ತೃಣಾನಾಃ ಪ್ರಯಾಣೇ | ಮುಕ್ತಿಂ ಯಾಸ್ಯಂತಿ ಮರ್ತ್ಯಾಃ ಪುನರಿಹ ಹಿ ಪರಂ ಪಾಂಚರಾತ್ರಂ ತು ಶಾಸ್ತ್ರಂ ಶಾಂಡಿಲ್ಯಃ ಪ್ರಾಹ ನಾರಾಯಣಪದಯುಗಳಾರಾಧನೈಕಪ್ರಮಾಣಂ ||

ಟೀ|| ದತ್ತಾತ್ರೇಯರು ಈ ತೀರ್ಥದಲ್ಲಿ ಬೆಳದಿದ್ದ ದರ್ಭೆಗಳನ್ನು ತಮ್ಮ ನಿತ್ಯಾನುಷ್ಠಾನಕ್ಕಾಗಿ ತೆಗೆದುಕೊಳ್ಳುತ್ತಿದ್ದರಾದುದರಿಂದ ಇದಕ್ಕೆ "ದರ್ಭತೀರ್ಥ" ಎಂದು ಹೆಸರು. ಯಾರು ಪ್ರಾಣಪ್ರಯಾಣ ಕಾಲದಲ್ಲಿ ಇಲ್ಲಿನ ದರ್ಭೆಗಳನ್ನು ಹಾಸಿಕೊಂಡು ಪ್ರಾಣಬಿಡುವರೋ ಅವರಿಗೆ ಮುಕ್ತಿಯುಂಟಾಗುವುದು. ಮತ್ತು ಇಲ್ಲಿ ಶಾಂಡಿಲ್ಯ ಮಹರ್ಷಿಯು ಭಗವದಾರಾಧನಕ್ಕೆ ಮುಖ್ಯ ಪ್ರಮಾಣಭೂತವಾದ ಪಾಂಚರಾತ್ರ ಶಾಸ್ತ್ರವನ್ನು ಪ್ರವಚನ ಮಾಡಿದರು.

ಶ್ಲೋ|| ತಸ್ಮೋದೀಚ್ಯಾಂ ಪಲಾಶೈಸ್ತರುಭಿ ರಭಿವೃತಂ ತೀರ್ಥಮಾಹುಃ ಪಲಾಶಂ
೪೮ ವಾಸಿಷ್ಠಾ ಯತ್ರ ಮುಕ್ತಾಃ ಕುಶಿಕತನುಭವಪ್ರಾಪ್ತ ಚಂಡಾಲಭಾವಾತ್ | ಪಶ್ಚಾತ್ತಸ್ಯಾಪಿ ಕಾಚಿತ್ಪ್ರವಹತಿ ತಟಿನೀ ಯಾದವೀತಿ ಸ್ವನಾಮ್ನಾ ಯತ್ರೇಷ್ಟ್ವಾ ಯಾದವೇನ್ದ್ರೋ ನರಪತಿರಭಜತ್ಸ್ವರ್ಗಸಾಮ್ರಾಜ್ಯಭೋಗಾನ್ ||

ಟೀ || ಈ ದರ್ಭತೀರ್ಥದ ಉತ್ತರದಿಕ್ಕಿನಲ್ಲಿ "ಪಲಾಶತೀರ್ಥ" ಎಂದು ಒಂದು ತೀರ್ಥವಿದೆ. ಇಲ್ಲಿ ವಿಶೇಷವಾಗಿ ಪಲಾಶ (ಮುತ್ತುಗ) ವೃಕ್ಷಗಳಿರುವುದರಿಂದ ಇದಕ್ಕೆ ಈ ಹೆಸರು. ವಿಶ್ವಾಮಿತ್ರರ ಶಾಪದಿಂದ ಚಂಡಾಲರಾದ ವಸಿಷ್ಠಪುತ್ರರುಗಳಿಗೆ ಇಲ್ಲಿ ಸ್ನಾನದಿಂದ ಶಾಪವಿಮೋಚನವಾಯಿತು. ಈ ತೀರ್ಥದ ಪಶ್ಚಿಮದಲ್ಲಿ "ಯಾದವೀ" ಎಂಬ ಒಂದು ನದಿ ಇರುವುದು. ಇದರ ತೀರದಲ್ಲಿ ಯಾದವೇಂದ್ರನೆಂಬ ದೊರೆಯು ಯಾಗಮಾಡಿ ಸ್ವರ್ಗವನ್ನು ಹೊಂದಿದನಾದುದರಿಂದ ಇದಕ್ಕೆ "ಯಾದವೀ" ಎಂದು ಹೆಸರಾಯಿತು.

ಶ್ಲೋ || ತಸ್ಮಾತ್ತೀರ್ಥಾದುದೀಚ್ಯಾಂ ದಿಶಿ ಕಮಲಸರಃ ಪದ್ಮತೀರ್ಥಾಭಿಧಾನಂ
೪೯ ಯಸ್ಮಿನ್ನುಚ್ಚಿತ್ಯ ಪದ್ಮಾನ್ಯನುದಿನಮಭಜದ್ಬ್ರಹ್ಮಸೂನುಃ ಕುಮಾರಃ | ಶ್ರೀಮನ್ನಾರಾಯಣಾಂಘ್ರೀಕಮಲಮಣಿವರೈರತ್ರಜಾತೈಃ ಕೃತಾಂ ಯೇ ಮಾಲಾಂ ಬಿಭ್ರತ್ಯಹೋ ತೇ ಸ್ರಜಮುಮರವಧೂಸಂಯುತಾಂ ದಿವ್ಯಧಾಮ್ನಿ ||

ಟೀ || ಆ ಪಲಾಶ ತೀರ್ಥದ ಉತ್ತರದಿಕ್ಕಿನಲ್ಲಿ "ಪದ್ಮತೀರ್ಥ" ಎಂಬ ತೀರ್ಥವಿದೆ. ಇದರಲ್ಲಿ ಬೆಳದ ಕಮಲಗಳಿಂದ ಸನತ್ಕುಮಾರರು ಶ್ರೀಮನ್ನಾರಾಯಣನನ್ನು ನಿತ್ಯಾರ್ಚನೆ ಮಾಡುತ್ತಿದ್ದರು. ಆದುದರಿಂದ ಇದು "ಪದ್ಮತೀರ್ಥ" ಇಲ್ಲಿಯ ಕಮಲಮಣಿಗಳ ಸರವನ್ನು ಯಾರು ಕಂಠದಲ್ಲಿ ಧರಿಸುವರೋ ಅವರು ವೈಕುಂಠಲೋಕದಲ್ಲಿ ದಿವ್ಯಾಪ್ಸರಸ್ಸುಗಳ ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಡುವರು.

ಶ್ಲೋ || ಕಲ್ಯಾಣ್ಯಾ ಉತ್ತರಸ್ಯಾಂ ದಿಶಿ ಸತು ಭಗವಾನ್ವ್ಯಾಸತಾತಃ ಪುರಾಣಂ
೫೦ ಮಿತ್ರಾಪುತ್ರಾಯ ಯಸ್ಮಾತ್ಸಮದದದಿಹ ತದ್ವೈಷ್ಣವಂ ತೇನ ತೀರ್ಥಮ್ | ಮೈತ್ರೇಯಂ ಕುಂಡಮಾಹುಃ ಕತಿಚನ ವಿಬುಧಾ ದಾಕ್ಷಿಣಾ

ತ್ಯಾ ಉದೀಚ್ಯಾಃ ಕೇಚಿತ್ಪಾರಾಶರಂ ತಜ್ಜಗದುರಥ ಗುರೋಸ್ಸಂಜ್ಞಯಾ ದೇಶಭೇದಾತ್ ||

ಟೀ|| ಶ್ರೀಕಲ್ಯಾಣೀ ತೀರ್ಥಕ್ಕೆ ಉತ್ತರದಿಕ್ಕಿನಲ್ಲಿ "ಮೈತ್ರೇಯತೀರ್ಥ" ಇರುವುದು. ಇಲ್ಲಿಯೇ ಶ್ರೀಪರಾಶರಮಹರ್ಷಿಯು, ಮೈತ್ರೇಯರಿಗೆ ಶ್ರೀವಿಷ್ಣುಪುರಾಣವನ್ನು ಉಪದೇಶ ಮಾಡಿದರು. ಆದುದರಿಂದ ದಕ್ಷಿಣದೇಶದವರು ಶಿಷ್ಯರ ಹೆಸರನ್ನಿಟ್ಟು "ಮೈತ್ರೇಯಕುಂಡ" ಎನ್ನುವರು. ಉತ್ತರ ದೇಶದವರು ಆಚಾರ್ಯರ ಹೆಸರನ್ನಿಟ್ಟು "ಪರಾಶರತೀರ್ಥ" ಎನ್ನುವರು.

ಶ್ಲೋ || ತಸ್ಯೋದೀಚ್ಯಾಂ ದಿಶೀಯಂ ವಿಲಸತಿ ಸರಸೀ ಸ್ಪಷ್ಟನಾರಾಯಣಾಖ್ಯಾ ಯತ್ರಾಂತೇ ಸಂಸ್ಕೃತಾಂಗಾಸ್ತದವಧಿತನವಸ್ಸೂರಿಸಂಘೇ ವಿಶಂತಿ| ಯಸ್ತತ್ಪ್ರಾಪ್ಯ ನೈಮಿಶೇ ಪ್ರಾಗವಮತ ನೃಪತಿಬ್ರಹ್ಮರುದ್ರೇಸ್ಸ್ವವರ್ಗಸ್ಸೋಽಭೂನ್ಮೋಕ್ಷೋತ್ರ ಪರ್ಣೀ ಸಪರಿಚರ ಹರಿಪ್ರೇಕ್ಷಣಾದ್ವಿಷ್ಣುಚಿತ್ತಃ ||

೫೧

ಟೀ|| ಈ ಮೈತ್ರೇಯತೀರ್ಥದ ಉತ್ತರದಿಕ್ಕಿನಲ್ಲಿ "ನಾರಾಯಣತೀರ್ಥ" ವಿರುವುದು. ಇದರ ಸಮೀಪಗದಲ್ಲಿ ಯಾರು ಚರಮಸಂಸ್ಕಾರ ಮಾಡಲ್ಪಡುವರೋ ಅವರಿಗೆ ಅದೇ ಚರಮಶರೀರವಾಗಿ ಮೋಕ್ಷವನ್ನು ಹೊಂದುವರು. ಇದರ ತೀರದಲ್ಲಿಯೇ "ವಿಷ್ಣುಚಿತ್ತ" ರೆಂಬ ಬ್ರಾಹ್ಮಣ ಬ್ರಹ್ಮಚಾರಿಗೆ ಶ್ರೀಮನ್ನಾರಾಯಣನು ಪ್ರತ್ಯಕ್ಷವಾಗಿ ಮೋಕ್ಷೈಶ್ವರ್ಯವನ್ನು ಕೊಟ್ಟನು— ಈ ವಿಷ್ಣುಚಿತ್ತನ ಕಥೆ ಏನಂದರೆ :—ಈ ವಿಷ್ಣುಚಿತ್ತನು ಈ ನಾರಾಯಣಾದ್ರಿಯಲ್ಲೇ ಹುಟ್ಟಿ ಬ್ರಹ್ಮಚಾರಿಯಾಗಿ ಸಾಂಗವೇದಾಧ್ಯಯನಾದಿಗಳನ್ನು ಮಾಡಿ, ತಂದೆತಾಯಿಗಳು ವಿವಾಹ ಮಾಡುವುದಕ್ಕೆ ಯತ್ನಿಸಲು ನೈಮಿಶಾರಣ್ಯಕ್ಕೆ ಹೊರಟುಹೋಗಿ ಘೋರವಾದ ತಪಸ್ಸನ್ನು ಮಾಡುತ್ತಿರುವಾಗ ಒಬ್ಬ ದೊರೆಯು ತನಗೆ ಗಂಡು ಮಕ್ಕಳು ಇಲ್ಲದುದರಿಂದ ತನ್ನ ಮಗಳನ್ನೂ ರಾಜ್ಯವನ್ನೂ ಕೊಡುವುದಾಗಿ ಹೇಳಿ ಕರೆಯಲು, "ನಿನ್ನ ಮಗಳನ್ನು ರತ್ನಗಳಿಂದ ಮಾಡಿದೆಯೋ ? ಮಲಮೂತ್ರ ರಕ್ತ ಮಾಂಸಾದಿಗಳಿಂದ ತುಂಬಿರುವ ಚಕ್ಕಳದ ಚೀಲವಲ್ಲವೇ ? ನಿನ್ನ ರಾಜ್ಯವು ರಾಜ್ಯವೇ? ಅನೇಕಕ್ಲೇಶಕರವಾದ ನರಕವಲ್ಲವೇ? ಇದು ಯಾರಿಗೆಬೇಕು" ಎಂದು ಹೇಳಿ ಕಳುಹಿಸಿಬಿಟ್ಟನು. ಅನಂತರ ಇವನ ತಪಸ್ಸನ್ನು ನೋಡಿ ಇದನ್ನು ಕೆಡಿಸಬೇ

ಕೆಂದು ಇಂದ್ರನು ಅಪ್ಸರಸ್ಸುಗಳನ್ನು ಕಳುಹಿಸಿದನು. ಅವರನ್ನು ಈ ಬ್ರಾಹ್ಮಣನು "ಕಪಿಗಳಾಗಿರಿ" ಎಂದು ಶಪಿಸಿದನು. ಅನಂತರ ಇಂದ್ರನು ಬ್ರಾಹ್ಮಣವೇಷವನ್ನು ಹಾಕಿಕ್ಕೊಂಡು ಬಂದು ಅವನಿಗೆ ಒಳ್ಳೇಮಾತುಗಳನ್ನು ಹೇಳಿ ಅವರಿಗೆ ಶಾಪ ವಿಮೋಚನವಾಗುವಂತೆ ಮಾಡಿಕೊಂಡು ಹೋದನು. ರುದ್ರನು ಬಂದು "ವರ ವನ್ನು ಬೇಡು" ಎನಲು, ಇವನು "ನನಗೆ ಮೋಕ್ಷ ಬೇಕು" ಎಂದು ಕೇಳಲು, "ಅದಕ್ಕೆ ನನಗೆ ಅಧಿಕಾರವಿಲ್ಲ" ಎಂದು ರುದ್ರನು ಹೇಳಲು, ಇವನು "ದಯ ಮಾಡಿಸಿರಿ" ಎಂದನು. ಬ್ರಹ್ಮನು ಬಂದು "ನನ್ನ ಲೋಕವನ್ನು ಕೊಡುವೆನು ಬಾ" ಎಂದು ಕರೆಯಲು, "ನಿನ್ನನ್ನೂ ನನ್ನನ್ನೂ ಸೃಷ್ಟಿಸಿದವನು ಯಾರೋ ನಿನಗೂ ನನಗೂ ಇಂತಹ ಅಧಿಕಾರಗಳನ್ನು ಕೊಟ್ಟಿರುವನು ಯಾರೋ ಅಂಥಾ ಶ್ರೀಮನ್ನಾರಾಯಣನನ್ನು ಬಿಟ್ಟು ಮತ್ತೊಬ್ಬರು ಒಂದು ವಸ್ತುವೆ? ದಯವಿಟ್ಟು ದಯಮಾಡಿಸಿರಿ" ಎಂದನು. ಅನಂತರ ಇವನಿಗೆ ಅಷ್ಟಾಕ್ಷರೋಪದೇಶಮಾಡಿದ ಆಚಾರ್ಯನು ಬಂದು "ಇನ್ನು ನೀನು ನಾರಾಯಣಗಿರಿಯಲ್ಲಿದ್ದು ತಪಸ್ಸು ಮಾಡು" ಎನಲು, ಆಗ ಪುನಃ ನಾರಾಯಣಾದ್ರಿಗೆ ಬಂದು ಈ ನಾರಾಯಣ ತೀರ್ಥದಲ್ಲಿ ನಿತ್ಯಕರ್ಮಾನುಷ್ಠಾನ ಮಾಡುತಾ ನಯನಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದು, ದಿವ್ಯಾಭರಣ ದಿವ್ಯಾಯುಧ ದಿವ್ಯಮಹಿಷೀ ಸಹಿತ ಗರುಡಾ ರೂಢನಾಗಿ ಪ್ರತ್ಯಕ್ಷನಾಗಿ ಬಂದ ಶ್ರೀಮನ್ನಾರಾಯಣನನ್ನು ದರ್ಶನಮಾಡಿ ಕೃತಾರ್ಥನಾಗಿ ಅವನ ಪರಮಕೃಪೆಯಿಂದ ಮೋಕ್ಷೈಶ್ವರ್ಯವನ್ನು ಹೊಂದಿದನು.

ಶ್ಲೋ || ತಸ್ಯೋರ್ಧ್ವಂ ಸಾನುಭಾಗೇ ನಯನಮಿತಿ ಜನೈರುಚ್ಯತೇ ಕ್ಷೇತ್ರಮೇತ
೫೨ ದ್ಯೇನೇದಂ ಸ್ವಾಶ್ರಿತಾನ್ಸ್ವೈ ನಯತಿ ನ ಸುಲಭಾಂ ಮುಕ್ತಿಮಂತೇಹ್ಯ ಯತ್ನಾತ್ | ಮಂತ್ರಾದಿಶ್ಚಾತ್ರ ಸಿದ್ಧ್ಯತ್ಯನವರತ ಭವಾತ್ಸನ್ನಿಧೇಃ ಕೇಶ ವಸ್ಯ ಪ್ರಾಯೇಣಾತ್ರೈವ ತಪ್ತ್ವಾ ತಪ ಉಪಗತವಾನ್ವಿಷ್ಣುಚಿತ್ತಃ ಪದಂ ತತ್ ||

ಟೀ || ಈ ತೀರ್ಥದ ಪೂರ್ವಕ್ಕೆ ಮೇಲುಭಾಗದ ಪರ್ವತದ ಸಾನುವಿನಲ್ಲಿ "ನಯನಕ್ಷೇತ್ರ" ಎಂಬ ಕ್ಷೇತ್ರವಿದೆ. "ನಯತೀತಿ ನಯನಂ" ಎಂಬ ಶಬ್ದ ವ್ಯುತ್ಪತ್ತಿಯಿಂದ ಇದಕ್ಕೆ ಈ ಹೆಸರು. ಅಂದರೆ ಸ್ವಾಶ್ರಿತರನ್ನು ಮೋಕ್ಷವನ್ನು ಹೊಂದಿಸುತ್ತೆಂದು ಅರ್ಥ. ಇಲ್ಲಿ ಕೇಶವಮೂರ್ತಿಯ ಸಾನ್ನಿಧ್ಯದಿಂದ ಕ್ಷಿಪ್ರ

ದಲ್ಲೇ ಮಂತ್ರಾದಿ ಸಿದ್ಧಿಯಾಗುವುದು. ವಿಷ್ಣುಚಿತ್ತನು ತಪಸ್ಸು ಮಾಡಿದ್ದೂ ಇಲ್ಲಿಯೇ.

ಶ್ಲೋ || ಪಾದೇ ತ್ರೈವಿಕ್ರಮೇ ಪ್ರಾಗ್ಜಲಜನಿಜಕಲಶಕ್ಷಾಳಿತೇ ಪ್ರಾದುರಾಸೀದ್ಗಂ
೫೩ ಗಾಧೋ ನಿತ್ಯವರ್ಗೈಃ ಪುನರಪಿ ವಿರಜಾತೋಽಯಸಂಕ್ಷಾಳಿತೇಂಘ್ರಃ |
ಸ್ಕನ್ನಂ ಕಿಂಚಿದ್ಯದದ್ರೇರ್ಧ್ರುವದಿಶಿ ತಟಿನೀ ಸಾಪಿ ವೈಕುಂಠಗಂಗಾ ಯ
ಸ್ಯಾಸ್ತೀರೇ ತಪಸ್ಯನ್ಪರಮಪದಮಗಾದ್ಭಕ್ತಿಸಾರೋ ಮುನೀಂದ್ರಃ ||

ಟೀ || ಪೂರ್ವದಲ್ಲಿ ತ್ರಿವಿಕ್ರಮಾವತಾರಿಯಾದ ವಿಷ್ಣುವಿನ ಪಾದವನ್ನು ಬ್ರಹ್ಮನು ತನ್ನ ಕಮಂಡಲು ತೀರ್ಥದಿಂದ ಶೋಧಿಸಿದಾಗ ಗಂಗಾನದಿಯು ಹುಟ್ಟಿತು. ಶ್ರೀವೈಕುಂಠವಾಸಿಗಳಾದ ನಿತ್ಯಮುಕ್ತರು ವಿರಜಾನದೀತೀರ್ಥದಿಂದ ಶೋಧಿಸಿದಾಗ ಸ್ವಲ್ಪ ತೀರ್ಥವು, ಈ ನಾರಾಯಣಗಿರಿಯ ಉತ್ತರದಿಕ್ಕಿನಲ್ಲಿ ಬಿದ್ದು ಪ್ರವಹಿಸಿತು. ಅದು "ವೈಕುಂಠ ಗಂಗೆ" (ತೊಟ್ಟಿಲು ಮಡುವು) ಎನ್ನಿಸಿಕೊಂಡಿತು. ಇದರ ತೀರದಲ್ಲಿ ಭಕ್ತಿಸಾರರೆಂಬ ಮುನೀಶ್ವರರು ತಪಸ್ಸುಮಾಡಿ ಮೋಕ್ಷವನ್ನು ಹೊಂದಿದರು. ಹೀಗೆ ಅಷ್ಟತೀರ್ಥಗಳೂ ಸಪ್ತಕ್ಷೇತ್ರಗಳೂ ನಾರದರಿಂದ ಹೇಳಲ್ಪಟ್ಟವು.

ಶ್ಲೋ || ಇತ್ಯುಕ್ತ್ವಾ ನಾರದೇನ ಪ್ರಮುದಿತಹೃದಯಾ ವ್ಯಾಸಮುಖ್ಯಾಃ ಪ್ರ
೫೪ ಯಾತಾಸ್ಸಾಕಂ ತೇನೈವ ಗಂಗಾಂ ಪ್ರಬಲಮುರುದಧಿಕ್ರಾಂತ್ಯನಾಕಾಸ್ತ
ರೀತುಂ | ನೋಶಕ್ತಾ ವೀತತೃಷ್ಣಾ ಯದುಗಿರಿಗಮನೇ ವ್ಯಾಸವಾ
ಕ್ಯಾದ್ವಿಸೃಷ್ಟಾಃ ಕ್ಷೇಪಣ್ಯೋಽನಾವಿಕೈಸ್ತೈಸ್ಸುಖಮಥ ಮುನಯಃ
ಪಾರಮಾಪುಃ ಪರಂತೇ ||

ಟೀ || ಹೀಗೆ ಕಲಿಪ್ರವೇಶವಿಲ್ಲದಿರುವ ಕ್ಷೇತ್ರವನ್ನು ತಿಳಿಯಬೇಕೆಂದು ಉತ್ತರಬದರಿಕಾಶ್ರಮಕ್ಕೆ ಹೋಗಿದ್ದ ವ್ಯಾಸಾದಿ ಮಹರ್ಷಿಗಳಿಗೆ ನಾರದಮಹರ್ಷಿಯು ಯಾದವಗಿರಿ ಮಾಹಾತ್ಮ್ಯವನ್ನೂ ಅಲ್ಲಿರುವ ಕ್ಷೇತ್ರತೀರ್ಥಗಳ ಮಹಿಮೆಗಳನ್ನೂ ಅಲ್ಲಿ ಕಲಿಪ್ರವೇಶವಿಲ್ಲವೆಂತಲೂ ಹೇಳಲು ವ್ಯಾಸಾದಿಗಳೂ ಬಹಳ ಸಂತುಷ್ಟರಾಗಿ ಆ ಯಾದವಾದ್ರಿಗೆ ತಾವೆಲ್ಲರೂ ಹೋಗಿ ಪ್ರತ್ಯಕ್ಷದಲ್ಲಿ ಅದರ ಮಹಿಮೆಗಳನ್ನು ಅನುಭವಿಸಬೇಕೆಂದು ಕುತೂಹಲವುಳ್ಳವರಾಗಿ ಆ ನಾರದರನ್ನೂ ಕರೆದುಕೊಂಡು ಪ್ರಯಾಣ ಹೊರಟು ಗಂಗಾನದಿಯಲ್ಲಿ ದೋಣಿಯಲ್ಲಿ ಕುಳಿತು

ಕೊಂಡು ಬರುತ್ತಿರುವಾಗ, ಬಿರುಗಾಳಿಯಿಂದ ಸರ್ವಪ್ರಯತ್ನದಿಂದಲೂ ನಡಿಸು ವುದಕ್ಕಾಗದೆ, ದೋಣಿಯು ಸಮುದ್ರಮಾರ್ಗವನ್ನು ಹಿಡಿಯಲು, ಋಷಿಗಳೆಲ್ಲರೂ ಯಾದವಾದ್ರಿಗೆ ಹೋಗುವ ವಿಷಯದಲ್ಲಿ ನಿರಾಶರಾಗಿ ಚಿಂತಾಕ್ರಾಂತರಾಗಿರು ವಾಗ, ವ್ಯಾಸರು ದೋಣಿಯನ್ನು ನಡಿಸುವ ಬೆಸ್ತರನ್ನು ಕುರಿತು, "ನಿಮ್ಮ ಕೈಯ ಲ್ಲಿರುವ ಜಳವೆ, ಹುಟ್ಟು ಮುಂತಾದ ಸಾಧನಗಳನ್ನು ನೀರಿನಲ್ಲಿ ಎಸೆದುಬಿಡಿರಿ" ಎಂದೂ, ಋಷಿಗಳನ್ನು ಕುರಿತು, "ನೀವೆಲ್ಲರೂ ಕಣ್ಣುಮುಚ್ಚಿಕೊಂಡು ದೇವ ರನ್ನು ಧ್ಯಾನಿಸಿರಿ" ಎಂದೂ ಹೇಳಲು, ಅದರಂತೆಯೇ ಅವರೆಲ್ಲರೂ ಮಾಡುತ್ತಿ ರಲು, ತನ್ನಷ್ಟಕ್ಕೆ ತಾನೇ ಆಚೆಯ ದಡಕ್ಕೆ ದೋಣಿಯು ಬಂದುಸೇರಿತು. ಋಷಿ, ಗಳೆಲ್ಲರೂ ಬಹಳ ಆಶ್ಚರ್ಯಪಟ್ಟು ಸಂತೋಷದಿಂದ ದೋಣಿಯಿಂದಿಳಿದು, "ಇದೇ ನಾಶ್ಚರ್ಯ" ಎಂದು ಕೇಳಲು "ಪ್ರಪನ್ನನಿಗೆ ಆಕಿಂಚನ್ಯವೂ, ಅನನ್ಯಗತಿತ್ವವೂ, ಬೇಕು" ಎಂಬ ಶಾಸ್ತ್ರಾರ್ಥಕ್ಕೆ ಇದೇ ದೃಷ್ಟಾಂತವು, ಅಂದರೆ ಒಬ್ಬನನ್ನು ನಂಬಿ ಅವನಿಂದಲೇ ಆ ಕೆಲಸವನ್ನು ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಆ ಕೆಲಸಮಾಡಿ ಕೊಳ್ಳುವುದಕ್ಕೆ ತಾನು ಅಶಕ್ತನಾಗಿಯೂ, ಬೇರೊಬ್ಬರನ್ನು ಆಶ್ರಯಿಸದೇನೂ, ಇರಬೇಕು. ಇವೆರಡೂ ಇಲ್ಲದಿದ್ದರೆ ಅವನಿಂದ ಆ ಕೆಲಸವಾಗಲಾರದು. ಇದರ ಮುಖ್ಯಸಾರಾಂಶ—ನಮ್ಮ ರಕ್ಷಣಕ್ಕಾಗಿ ನಾವೇ ಪ್ರಯತ್ನ ಮಾಡುತ್ತಿರುವ ವರಿಗೂ ದೇವರು ಕಾಪಾಡುವುದಿಲ್ಲ. ನಮ್ಮ ಕೈಯ್ಯನ್ನು ನಾವು ನಿಲ್ಲಿಸಿದರೆ ಅವನು ಸಂರಕ್ಷಿಸುವನು" ಎಂದು, ವ್ಯಾಸರು ಅಪ್ಪಣೆಕೊಡಿಸಿದರು.

ಶ್ಲೋ || ದೇಶಾನ್ ಶೈಲಾನ್ನದೀರಪ್ಯತಿಗಹನವನಾನ್ಯಾಶು ತೇ ಲಂಘಯಿತ್ವಾ
೫೫ ಗತ್ವಾ ನಾರಾಯಣಾದ್ರಿಂ ಪರಿಹೃತದುರಿತಾಸ್ಸ್ನಾನತಸ್ತೀರ್ಥತೋ
ಯೈಃ | ಪ್ರಾಪ್ಯಾನಂದಂ ವಿಮಾನಂ ತದುದರಗೃಹಗಂ ದರ್ಶಿವಾಂಸಃ
ಪುಮಾಂಸಂ ಸಂಸಾರೋತ್ತಾರಸೇತುಂ ಕಮಪಿ ಮುದಮಧುಃ ಕಾಮಪಿ
ಸ್ವಾನ್ತರಂಗೇ ||

ಟೀ || ಆ ನಾರದ ವ್ಯಾಸಾದಿ ಮಹರ್ಷಿಗಳು ಅಲ್ಲಿಂದ ಮುಂದೆ ಹೊರಟು ಅನೇಕ ದೇಶಗಳನ್ನೂ, ಪರ್ವತಗಳನ್ನೂ, ನದಿಗಳನ್ನೂ, ದುರ್ಗಮವಾದ ಅರಣ್ಯ ಗಳನ್ನೂ ಅತಿಕ್ರಮಿಸಿ ಅಲ್ಲಲ್ಲಿರತಕ್ಕವರಿಗೆ ಧರ್ಮೋಪದೇಶಗಳನ್ನು ಮಾಡುತ್ತಾ ಉದ್ದೇಶ್ಯವಾದ ಯಾದವಗಿರಿಯನ್ನು ಹೊಂದಿ ಅಲ್ಲಿಯ ತೀರ್ಥಗಳಲ್ಲಿ ಸ್ನಾನ

ಮಾಡಿ ಪಾಪವನ್ನೆಲ್ಲಾ ಕಳೆದು, ಆನಂದಮಯ ದಿವ್ಯವಿಮಾನವನ್ನು ಪ್ರವೇಶಿಸಿ ಶದ್ಗರ್ಭಗೃಹಮಧ್ಯವನ್ನಲಂಕರಿಸುತ್ತಿರುವಂಥ ಆಶ್ರಿತ ಸಂಸಾರಸಮುದ್ರಕ್ಕೆ ಸೇತುವಾದಂಥ ಸೌಂದರ್ಯ, ಸೌಕುಮಾರ್ಯ, ಲಾವಣ್ಯ, ಸೌಶೀಲ್ಯ, ಸೌಲಭ್ಯಾದಿ ಕಲ್ಯಾಣಗುಣಗಳಿಂದ ಅನಿರ್ವಾಚ್ಯನಾದ ಶ್ರೀಮನ್ನಾರಾಯಣನನ್ನು ದರ್ಶನಮಾಡಿ ವಾಙ್ಮನಸಾಗೋಚರವಾದ ಪರಮಾನಂದ ಭರಿತರಾದರು.

ಶ್ಲೋ || ದೃಷ್ಟ್ವಾ ಪ್ರಾಪುರ್ಮುಕ್ತಿಮೇಕೇ ಕತಿಚನ ಭಗವನ್ಮೂರ್ತಿಮನ್ತರ್ದಧಾನಾ
೫೬ ಸ್ತತ್ತತ್ಸ್ಥಾನಾನಿ ಜಗ್ಮುಃ ಕತಿಚನ ವಿರಹಂ ದುಸ್ಸಹಂ ಮನ್ಯಮಾನಾಃ |
ತತ್ರೈವಾವಾತ್ಸುರೇವಂ ಹ್ಯನುಗುಣಫಲದ ಸ್ಸರ್ವರಕ್ಷೈಕ್ಯದೀಕ್ಷ ಶ್ರೀ
ಮಾನ್ನಾರಾಯಣಸ್ತತ್ಪ್ರಕಟಿತ ವಿಭವೋ ಮೋದಮಾನಸ್ಸದಾಸೀತ್ ||

ಟೀ || ಅವರುಗಳಲ್ಲಿ ಕೆಲವರು ಭಗವದ್ದರ್ಶನ ಮಾಡಿದುದರಿಂದ ಸಕಲಕರ್ಮಕ್ಷಯವಾಗಿ "ಚಿನ್ತಯನ್ತಿ" ಎಂಬ ಗೋಪಿಕೆಯಂತೆ ಆಗಲೇ ಮೋಕ್ಷಹೊಂದಿದರು. ಮತ್ತೆ ಕೆಲವರು ಧ್ಯಾನಕ್ಕೆ ಶುಭಾಶ್ರಯವಾದ ಶ್ರೀಮನ್ನಾರಾಯಣನ ದಿವ್ಯ ಮೂರ್ತಿಯನ್ನು ಮನಸ್ಸಿನಲ್ಲಿ ದೃಢವಾಗಿ ಗ್ರಹಿಸಿಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸೇರಿದರು. ಮತ್ತೆ ಕೆಲವರು ಆ ಶ್ರೀಮನ್ನಾರಾಯಣಮೂರ್ತಿಯನ್ನು ಬಿಟ್ಟು ಹೋಗಲಾರದೆ ಆ ಯಾದವಾದ್ರಿಯಲ್ಲಿಯೇ ನಿತ್ಯವಾಸಮಾಡುತ್ತಿದ್ದು ಅವನ ನಿತ್ಯಕೈಂಕರ್ಯದಲ್ಲಿ ನಿರತರಾಗಿದ್ದರು. ಹೀಗೆ ಪರಾತ್ಪರನಾದ ಶ್ರೀಮನ್ನಾರಾಯಣನು ಸರ್ವಸುಲಭನಾಗಿ ಸರ್ವಸೇವ್ಯನಾಗಿ ಅವರವರ ಇಷ್ಟಾನುಸಾರವಾಗಿ ಫಲಗಳನ್ನು ಕೊಡುತ್ತಾ ತನ್ನ ಮಹಿಮೆಗಳನ್ನು ತನ್ನ ಭಕ್ತರಲ್ಲಿ ಪ್ರಕಟಪಡಿಸುತ್ತಾ ಪರಮಾನಂದ ಪೂರ್ಣನಾಗಿ ಬಿಜಮಾಡಿಸಿದ್ದನು.

ಶ್ಲೋ || ಇತ್ಥಂ ಸಂಗೃಹ್ಯ ಬದ್ಧಾ ಸುರಮುನಿಕಥಿತಾದ್ಯಾದವಾದ್ರೇರ್ಮಹಿಮ್ನೋ
೫೭ ಮಾಲೇಯಂ ಸ್ರಗ್ಧರಾಣಾಂ ಭವತು ಚರಣಯೋರ್ಯಾದವಾದ್ರೀಶಿತುರ್ನಃ |
ತಾಮೇನಾಂ ತತ್ಪ್ರಸಾದಾದನಿತರಸುಲಭಾಂ ಧಾರಯನ್ತು ಸ್ವಕಣ್ಠೇ
ಸನ್ತೋ ಯಾಚೇಹ ಮೇತದ್ಯದುಗಿರಿವಸತಿರ್ವೆಙ್ಕಟಾರ್ಯಾಖ್ಯದಾಸಃ ||

ಟೀ || ಹೀಗೆ ನಾರದೀಯ ಪುರಾಣಾಂತರ್ಗತವಾದ ಯಾದವಗಿರಿಮಾಹಾತ್ಮ್ಯದ ಹನ್ನೆರಡು ಅಧ್ಯಾಯಗಳಿಂದಲೂ ಕಥೆಗಳನ್ನು ಆರಿಸಿ ಸಂಗ್ರಹವಾಗಿ ಈ ಐವತ್ತೇಳು ಶ್ಲೋಕರೂಪವಾಗಿ ನನ್ನಿಂದ ರಚಿಸಲ್ಪಟ್ಟ ಸ್ರಗ್ಧರಾವೃತ್ತಗಳ ಈ

ಮಾಲಿಕೆಯು ಶ್ರೀಯದುಗಿರಿನಾರಾಯಣನ ಪಾದಾರವಿಂದಗಳಲ್ಲಿ ಸಮರ್ಪಿತ ವಾಗಲಿ. ಅವನ ಅನುಗ್ರಹದಿಂದ ಲಬ್ಧವಾಗಿ ಇತರರಿಗೆ ದುರ್ಲಭವಾದ ಈ ಮಾಲಿಕೆಯನ್ನು ಮಹನೀಯರುಗಳು ತಮ್ಮ ಕಂಠದಲ್ಲಿ ಧರಿಸಬೇಕೆಂದು ಯದುಗಿರಿ ವಾಸಿಯಾದ ಜಗ್ಗು ವೆಂಕಟಾಚಾರ್ಯನೆಂಬ ಈ ಭಕ್ತನು ಪ್ರಾರ್ಥಿಸುತ್ತಾನೆ.

ಶ್ರೀಮತೇ ರಾಮಾನುಜಾಯ ನಮಃ.

ಶ್ರಿಯೈ ನಮಃ.

॥ ಶ್ರೀಃ ॥

ನಮ್ಮ " ಗುರುಪರಂಪರಾಪ್ರಭಾವ " ಮೊದಲಾದ ಗ್ರಂಥಗಳಲ್ಲಿ " ಶ್ರೀ ರಾಮಾನುಜಾಚಾರ್ಯರು ಈ ಮೇಲುಕೋಟೆಗೆ ದಯಮಾಡಿಸಿ, ಹುತ್ತು ಮೂಡಿ ಹೋಗಿದ್ದ ಆನಂದಮಯ ದಿವ್ಯ ವಿಮಾನವನ್ನು ಹುತ್ತನ್ನು ತೆಗಿಸಿ ಜೀರ್ಣೋ ದ್ಧಾರ ಮಾಡಿದರು " ಎಂಬದಾಗಿ ಬರೆದು ಇದಾರೆಯಾದುದರಿಂದ ಇದು ಅರಣ್ಯ ವಾಗಿತ್ತು ಎಂದು ತಿಳಿಯಬರುತ್ತದೆ. ಯಾದವಗಿರಿ ಮಾಹಾತ್ಮ್ಯದ ಕೊನೆಯ ಭಾಗದಲ್ಲಿ " ಇಲ್ಲಿ ಅನೇಕ ಜನರು ವಾಸದಾಗಿದ್ದರು " ಎಂದು ತಿಳಿಯಬರುತ್ತದೆ. ಆದರೆ ಈ ಮಧ್ಯೆ ಏನಾಗಿರಬಹುದು ? ಅಂದರೆ, ಅದು ಹೇಳಲ್ಪಡುತ್ತದೆ.

ಶ್ಲೋ ॥ ದ್ವಿತ್ರೇಷ್ವೇವಂ ವ್ಯತೀತೇಷ್ವತಿಕಲುಷಕಲೌ ವತ್ಸರಾಣಾಂ ಸಹಸ್ರೇಷ್ವ
೫೮ ಸ್ಯಸ್ಮಾದೇವ ಹೇತೋರ್ವಿಧಿಬಲನಿಹತೇ ತತ್ರ ತಸ್ಮಿನ್ ಜನೌಘೇ ।
ಮ್ಲೇಚ್ಛಪ್ರಾಯೇಷು ರಾಜಸ್ವತಿತರಘೃಣಯಾಚ್ಛನ್ನರೂಪೇಷು ಯೋಗಿ
ಷ್ವಾಸನ್ನೋಭೂದ್ವಿಮಾನಸ್ತ್ವತಿಗಹನಲತಾಗುಲ್ಮವಲ್ಮೀಕಗೂಢಃ ॥

ಟೀ ॥ ಹೀಗೆ ಪಾಪಿಯಾದ ಈ ಕಲಿಯುಗದಲ್ಲಿ ಎರಡು ಮೂರು ಸಹಸ್ರ ವರುಷಗಳು ಕಳೆದಮೇಲೆ ದೈವಸಂಕಲ್ಪದಿಂದುಂಟಾದ ಯಾವುದೋ ಕಾರಣದಿಂದ ಆ ಯಾದವಗಿರಿಯಲ್ಲಿದ್ದ ಜನಗಳು ನಷ್ಟರಾಗಲು, ಮ್ಲೇಚ್ಛರೇ ಬಹಳ ಕಡೇ ರಾಜರುಗಳಾಗಲಿಕ್ಕಾಗಿ, ಯೋಗಿಗಳಾದ ಋಷಿಗಳೂ ಈ ಕಲಿಯುಗದ ಜನಗಳ ದುರಾಚಾರಾಜ್ಞಾನಾದಿಗಳಿಂದ ಜುಗುಪ್ಸೆಪಟ್ಟು ಯಾರಕಣ್ಣಿಗೂ ಗೋಚರವಾ

ಗಡೆ ಮಾನಸಾರಾಧನಪರರಾಗಲು, ಆ ಆನಂದಮಯ ದಿವ್ಯವಿಮಾನವು ಗಿಡ, ಮರ, ಬಳ್ಳಿ, ಪೊದೆ, ಹುತ್ತಗಳು ಇವುಗಳಿಂದ ಕ್ರಮೇಣ ಮುಚ್ಚಲ್ಪಟ್ಟಿತು.

ಈ ದಿವ್ಯಕ್ಷೇತ್ರವನ್ನು ಜೀರ್ಣೋದ್ಧಾರ ಮಾಡಿದ ಶ್ರೀರಾಮಾನುಜಾ
ಚಾರ್ಯರು ಅವತರಿಸುವುದಕ್ಕೆ ಕಾರಣ.

ಶ್ಲೋ || ಅತ್ರತ್ಯಂ ಮಾಂ ಯಥಾ ತ್ವಂ ಪರಿಚರಸಿ ಸದಾ ಚಿತ್ತವೃತ್ತ್ಯಸ್ವವೇ
೫೯ ಕ್ಷ್ಯೋ ಭೂಮ್ಯಾಮೇವಂ ಜನಿತ್ವಾ ವಿಶದಯತು ಭವಾನ್ಸರ್ವವೇದಾನ್ತ
ಭಾಗಾನ್ | ತೇಷಾಮನ್ಯೋನ್ಯಬಾಧಃ ಕಥಮಪಿ ನಭವೇದನ್ಯತೋವಾ
ಪ್ರಮಾಣಾದಿತ್ಯಾದಿಷ್ಟಸ್ತ್ವಹೀನ್ದ್ರಃ ಫಣಿಪತಿಶಯನೇನಾವಿರಾಸೀತ್ಪೃ
ಥಿವ್ಯಾಮ್ ||

ಟೀ || ಶ್ರೀವೈಕುಂಠಲೋಕದಲ್ಲಿ ಶ್ರಿಯಃಪತಿಯಾದ ಪರಮಪದನಾಥನು ಆದಿಶೇಷನನ್ನು ಕುರಿತು. "ಎಲೈ ಶೇಷನೇ ಇಲ್ಲಿ ನೀನು ಯಾವರೀತಿ ನನ್ನ ಮನಸ್ಸನ್ನರಿತು ಅದಕ್ಕನುಸಾರವಾಗಿ ಸರ್ವವಿಧ ಸೇವೆಯನ್ನು ಮಾಡುವಿಯೋ ಹಾಗೆಯೇ ಸಕಲ ವೇದಾನ್ತಗಳಿಗೂ ನನ್ನ ಇಷ್ಟಾನುಸಾರವಾದ ಅರ್ಥಗಳು ಸ್ಪಷ್ಟವಾಗುವಂತೆಯೂ, ವೇದಾನ್ತಗಳಲ್ಲಿಯೇ ಪರಸ್ಪರ ವಿರೋಧ ಬಾರದಂತೆಯೂ, ಪ್ರತ್ಯಕ್ಷಾದಿ ಪ್ರಮಾಣಾದಿಗಳಿಗೆ ವಿರೋಧವಿಲ್ಲದಂತೆಯೂ, ಶಾಸ್ತ್ರಾರ್ಥಗಳನ್ನು ಗ್ರಂಥಗಳಿಂದಲೂ, ಉಪದೇಶಗಳಿಂದಲೂ ಭೂಲೋಕದಲ್ಲಿ ಪ್ರಚಾರ ಮಾಡು" ಎಂದು ಅಪ್ಪಣೆ ಮಾಡಲು, ಆದಿಶೇಷನು ಭೂಮಿಯಲ್ಲಿ ರಾಮಾನುಜಾಚಾರ್ಯನಾಗಿ ಅವತರಿಸಿದನು.

---

## ಶ್ರೀ ರಾಮಾನುಜಾಚಾರ್ಯರು ಅವತರಿಸಿದ್ದು, ಕಾಂಚಿಗೆ ಬಂದದ್ದು

---

ಶ್ಲೋ || ತುಣ್ಡೀರೇ ಮಂಡಲೇಸ್ಯಾಃ ಪೃಥಿತತರಮಹಾಭೂತಪುರ್ಯಾಂ ಕುಲೀನಾ
೬೦ ತ್ಸಮ್ಭೂತಃ ಕೇಶವಾರ್ಯಾದ್ಗುಣಗಣಜಲಧೇಃ ಕಾನ್ತಿಮತ್ಯಾಂ ಗುಣಾ
ಢ್ಯಃ | ಯೋ ಭಕ್ತ್ಯಾ ಲಕ್ಷ್ಮಣಾಖ್ಯಾಂ ಸಹಜಮಧುರಯಾ ಪ್ರಾಪ
ವಿಷ್ಣೋ ಮಹತ್ಯಾ ಕಾಂಚೀಂ ಶುಶ್ರೂಷು ರಾಗಾಚ್ಛ್ರುತಿಶಿಖರವಚೋ
ಘೋಷವಾದೇಃ ಕದಂಡಾತ್ ||

ಟೀ || ಶ್ರೀ ರಾಮಾನುಜಾಚಾರ್ಯರು ಈ ಭರತಖಂಡಭೂಮಿಯ "ತುಂಡೀರಮಂಡಲ" ಎಂಬ ಭಾಗದಲ್ಲಿ (ಮದ್ರಾಸ್ ಪಟ್ಟಣದ ಸ್ವಲ್ಪದೂರದಲ್ಲಿ) "ಶ್ರೀಪೆರುಂಪೂದೂರು" ಎಂಬ ಊರಿನಲ್ಲಿ ಸತ್ಕುಲಪ್ರಸೂತರಾದ ಕೇಶವಸೋಮಯಾಜಿ ಎಂಬವರಿಂದ ಕಾಂತಿಮತೀದೇವಿಯವರ ಗರ್ಭಾಂಬುಧಿಯಲ್ಲಿ ಅವತರಿಸಿದರು. ಇವರು ಜನನ ಮೊದಲು ಲಕ್ಷ್ಮಣನಿಗೆ ಶ್ರೀರಾಮನಲ್ಲಿ ಭಕ್ತಿಯಿದ್ದಂತೆ ಭಗವಂತನಲ್ಲಿ ಸ್ವಾಭಾವಿಕವಾದ ಮಹಾಭಕ್ತಿಯುಳ್ಳವರಾದುದರಿಂದ ಇವರಿಗೆ "ರಾಮಾನುಜ" ಎಂದು ಲಕ್ಷ್ಮಣನ ಹೆಸರೇ ನಾಮಧೇಯವಾಯಿತು. ಇವರು ಕ್ರಮೇಣ ಪ್ರವರ್ಧಮಾನರಾಗಿ ಉಪನೀತರಾಗಿ ಸಾಂಗವೇದಾಧ್ಯಯನಾದಿಗಳನ್ನು ಮಾಡಿ ಗೃಹಸ್ಥಾಶ್ರಮವನ್ನೂ ಅಂಗೀಕರಿಸಿ ಅನಂತರ ಕಾಂಚೀಪುರದಲ್ಲಿದ್ದ ಯಾದವಪ್ರಕಾಶರೆಂಬ ಏಕದಂಡ ಸನ್ಯಾಸಿಯಲ್ಲಿ ವೇದಾನ್ತಾರ್ಥಗಳನ್ನು ಕೇಳುವುದಕ್ಕೋಸ್ಕರ ಅಲ್ಲಿಗೆ ಬಂದು ವ್ಯಾಸಂಗಮಾಡುತ್ತಿದ್ದರು.

---

ಶ್ರೀ ರಾಮಾನುಜಾಚಾರ್ಯರು "ಕಪ್ಯಾಸ" ಶ್ರುತಿಗೆ ಅರ್ಥಹೇಳಿದ್ದು.

---

ಶ್ಲೋ || ಜಾತ್ವೇಷೋಽಭ್ಯಜ್ಯಮಾನಾತ್ಕಪಿಗುದಸದೃಶಂ ಪದ್ಮಮಿತ್ಯರ್ಥಮೇತಂ
೬೧ "ಕಪ್ಯಾಸಂ ಪುಂಡರೀಕಂ" ತ್ವಿತಿ ವಚನಗತಂ ಶುಶ್ರುವಾನ್ಪ್ರಾಹಖಿನ್ನಃ | ಗಂಭೀರಾಂಭಃ ಪ್ರಜಾತಂ ರವಿಕರದಳಿತಂ ಮೃಷ್ಟನಾಳಂ ಯಥಾಬ್ಜಂ ತದ್ವತ್ತಸ್ಯಾಕ್ಷಿಣೀಸ್ತಃ ಕನಕಮಯ ಪುಮಾನ್ಸ್ಯೋರವೇರ್ಮಂಡಲಸ್ಥಃ ||

ಟೀ || ಒಂದು ದಿವಸ ರಾಮಾನುಜಾಚಾರ್ಯರು ಆ ಯಾದವಪ್ರಕಾಶರ ತಲೆಗೆ ಎಣ್ಣೆಹಾಕಿ ಒತ್ತುತ್ತಿರುವಾಗ ಅವರು "ಕಪ್ಯಾಸಂ ಪುಂಡರೀಕಂ" ಎಂಬ ಶ್ರುತಿವಾಕ್ಯಕ್ಕೆ "ಕಪಿಯ ಗುದದ್ವಾರದಂತೆಯೂ (ಪುಂಡರೀಕ) ಕೆಂದಾವರೆಯಂತೆಯೂ ಭಗವಂತನ ಕಣ್ಣುಗಳು ಕೆಂಪಾಗಿವೆ" ಎಂದು ಅರ್ಥವನ್ನು ಹೇಳಲು ರಾಮಾನುಜಾಚಾರ್ಯರು ದುಃಖದಿಂದ ಕಣ್ಣೀರುಬಿಟ್ಟು, ಏತಕ್ಕೆ ಎಂದು ಅವರು ಕೇಳಿದ್ದಕ್ಕೆ ತಾವು ಅಪ್ಪಣೆಕೊಡಿಸಿದ ಅರ್ಥವು ಹೀನೋಪಮಾದೂಷಿತವಾಗುವುದು. ಹೀಗೆ ಅರ್ಥ ಹೇಳಿದರೆ ಸಮಂಜಸವಾಗುವುದು. "ಆಳವಾದ ನೀರಿ

ನಲ್ಲಿ ಹುಟ್ಟಿ ಅಲ್ಲಿಯೇ ಅದರ ನಾಳದೊಡನೆ ಇದ್ದು ಆಗತಾನೆ ಸೂರ್ಯನ ಕಿರಣಗಳಿಂದ ಅರಳಿಸಲ್ಪಟ್ಟ ಕೆಂದಾವರೆ ಹೂವಿನಂತೆ ಆ ಸೂರ್ಯಮಂಡಲ ಮಧ್ಯಸ್ಥನಾದ ನಾರಾಯಣನ ಕಣ್ಣುಗಳಿವೆ'' ಎಂದು ಹೇಳಿದರು.

ಯಾದವಪ್ರಕಾಶರು ರಾಮಾನುಜಾಚಾರ್ಯರನ್ನು ಕೊಲ್ಲಲು ಯತ್ನಿಸಿದ್ದು,
ಇವರು ತಪ್ಪಿಸಿಕೊಂಡದ್ದು.

ಶ್ಲೋ || ಏತಜ್ಞಾದೇವ ಕೋಪಾದ್ಯತಿರಮುಮನಯದ್ಧಸ್ತುಕಾಮೋಥ ಕಾಶೀಂ
೭೨ ಮಾತೃಷ್ವಸ್ರೀಯವಾಕ್ಯಾತ್ಸಪದಿನಿವವೃತೇ ಲಕ್ಷ್ಮಣಾರ್ಯೇಣ ವಿಂಧ್ಯಾತ್ | ಏಕಾಕೀ ತತ್ರ ಸಾಯಂ ದಿಶಮಪಿ ನ ವಿದನ್ ಭಿಲ್ಲಮಾಲೋಕ್ಯ ಭಿಲ್ಲೀಂ ಚಾಭ್ಯಾಮಭ್ಯರ್ಥಿತಸ್ಸನ್ಸಲಿಲಮನುಶಯಾತ್ತತ್ರ ಶೇತೇಸ್ಮತಾಭ್ಯಾಮ್ ||

ಟೀ || ರಾಮಾನುಜಾಚಾರ್ಯರು ಹೀಗೆ ಶ್ರುತ್ಯರ್ಥವನ್ನು ಹೇಳಿದುದರಿಂದ ಯಾದವಪ್ರಕಾಶರಿಗೆ ಅಸೂಯೆಯೂ, ಕೋಪವೂ ಹುಟ್ಟಿ ಈ ರಾಮಾನುಜರನ್ನು ಗಂಗೆಯಲ್ಲಿ ತಳ್ಳಿ ಕೊಂದುಬಿಡಬೇಕೆಂಬ ಉದ್ದೇಶ್ಯ ಹುಟ್ಟಿ ಕಾಶೀಯಾತ್ರೆ ಎಂಬ ವ್ಯಾಜದಿಂದ ಶಿಷ್ಯರೊಡನೆ ಇವರನ್ನೂ ಕರೆದುಕೊಂಡು ವಿಂಧ್ಯಪರ್ವತದ ಅರಣ್ಯದಲ್ಲಿ ಹೋಗುತ್ತಿರುವಾಗ ಈ ರಾಮಾನುಜಾಚಾರ್ಯರ ಚಿಕ್ಕತಾಯಿಯ ಮಗನಾದ ಗೋವಿಂದಾಚಾರ್ಯರೆಂಬುವರು ಯಾವುದೋ ವ್ಯಾಜದಿಂದ ಸ್ವಲ್ಪ ಹಿಂದಾಗಿ ಇವರನ್ನು ನಿಲ್ಲಿಸಿಕೊಂಡು ಈ ವಿಚಾರವನ್ನು ರಾಮಾನುಜರಿಗೆ ಹೇಳಿ ಹಿಂದಕ್ಕೆ ಕಳುಹಿಸಿಬಿಟ್ಟು ತಾವು ಮುಂದೆ ಗುರುಶಿಷ್ಯರುಗಳೊಡನೆ ಕಾಶಿಗೆ ಹೊರಟುಹೋದರು. ಸ್ವಲ್ಪದೂರ ಹೋದಮೇಲೆ ರಾಮಾನುಜರನ್ನು ಕಾಣದೆ ''ಈ ಘೋರಾರಣ್ಯದಲ್ಲಿ ಎಲ್ಲೋ ಮೃತಪಟ್ಟಿರಬಹುದು'' ಎಂದು ಊಹಿಸಿ ಅವರೆಲ್ಲರೂ ಕಾಶಿಗೆ ಹೊರಟುಹೋದರು. ಹಿಂದಿರುಗಿ ಬಂದ ರಾಮಾನುಜಾಚಾರ್ಯರು ನಿರ್ಮಾನುಷವಾಗಿಯೂ, ದುಷ್ಟಮೃಗಭರಿತವಾಗಿಯೂ, ದುರ್ಗಮವಾಗಿಯೂ ಇರುವ ಆ ವಿಂಧ್ಯಾರಣ್ಯದಲ್ಲಿ ದಿಕ್ಕುಗಳೂ ತಿಳಿಯದೆ ಶ್ರಮ, ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ ಸಾಯಂಕಾಲವೂ ಆಗಿ ಕತ್ತಲೆಯಾಗುತ್ತಾ ಬರಲು, ಅಲ್ಲಿಗೆ ಅಕ

ಸ್ನಾನಕ್ಕಾಗಿ ವ್ಯಾಧ ದಂಪತಿಯರು (ಬೇಡರ ಗಂಡಹೆಂಡರು) ಬಂದು, "ಬಹಳ ಬಾಯಾರಿಕೆಯಾಗುತ್ತದೆ, ಕುಡಿಯುವುದಕ್ಕೆ ಸ್ವಲ್ಪ ನೀರನ್ನು ತಂದುಕೊಡಿ" ಎಂದು ರಾಮಾನುಜಾಚಾರ್ಯರನ್ನು ಕೇಳಲು, ಒಂದು ಅಡಿ ಇಡುವುದಕ್ಕೂ ಕತ್ತಲೆಯು ಅವಕಾಶ ಕೊಡದೇ ಇದ್ದುದರಿಂದ ಬಹಳ ಪಶ್ಚಾತ್ತಾಪಪಡುತ್ತಾ ಒಂದು ಮರದ ಕೆಳಗೆ ಮಲಗಿಕೊಂಡರು. ಆ ದಂಪತಿಗಳೂ ಇವರ ಜೊತೆಯಲ್ಲೇ ಮಲಗಿಕೊಂಡರು.

---

ಬೆಳಿಗ್ಗೆ ಕಾಂಚೀಪುರದ ಸಮೀಪದಲ್ಲಿದ್ದದ್ದು.

---

ಶ್ಲೋ || ಉತ್ಥಾಯ ಪ್ರಾತರೇತಃ ಸರಣಿಮಪಿ ದಿಶಂ ವ್ಯೈಷ ಸ್ವೈವೋಪಲೇಭೇ
೬೩ ತೂಷ್ಣೀಂ ಗತ್ವಾತು ಕಿಂಚಿತ್ಸಮಲಭತ ಜನಾನ್ಕಾಂಶ್ಚಿದೇತೇತಮೂಚುಃ|
ಭೋ ಬ್ರಹ್ಮನ್ಕಿಂ ನಪಶ್ಯಸ್ಯನುತಟಮಿಹತಾಂ ವೇಗವತ್ಯಾಸ್ತು ಕಾಂಚೀಂ
ಕಿಂವಾ ಪುಣ್ಯಂ ವಿಮಾನಂ ಪ್ರಹಿವರಮಥವಾಶಾಲನಾಮ್ನಾಪ್ರಸಿದ್ಧಮ್||

ಟೀ || "ಬಾಯಾರಿಕೆಯಾಗುತ್ತದೆ ನೀರು ಬೇಕು" ಎಂದು ಕೇಳಿದ ಅವರಿಬ್ಬರಿಗೂ ನೀರು ತಂದುಕೊಡಬೇಕೆಂಬ ಉದ್ದೇಶ್ಯದಿಂದ ಇವರು ಉಷಃಕಾಲಕ್ಕೆ ಎದ್ದುನೋಡಿ ಅವರನ್ನು ಕಾಣದೆ ಹುಡುಕುತ್ತಾ ಮಾರ್ಗವೂ, ದಿಕ್ಕೂ ತೋಚದೆ ಸುಮ್ಮನೆ ಕೊಂಚದೂರ ಹೋಗಲು, ಅಲ್ಲಿ ಬರುತ್ತಿದ್ದ ಕೆಲವರನ್ನು "ಇದು ಯಾವಸ್ಥಳ" ಎಂದು ಕೇಳಲು, ಅವರು "ಇದೇನು ಬ್ರಾಹ್ಮಣಾ ? ವೇಗವತೀ ನದಿಯನ್ನೂ, ಅದರ ತೀರದಲ್ಲಿ ಕಾಂಚೀಪುರವನ್ನೂ, ಅದರಲ್ಲಿ ಪುಣ್ಯಕೋಟಿ ವಿಮಾನವನ್ನೂ, ಅದರ ಸಮೀಪದಲ್ಲಿ 'ಶಾಲಕ್ಕಿಣಱು' ಎಂಬ ಭಾವಿಯನ್ನೂ ಕಾಣೆಯಾ? ಇವೆಲ್ಲವೂ ಯಾರಿಗೆ ತಿಳಿಯದು? ನೀನು ಯಾವದೇಶ?" ಎಂದು ಕೇಳಿದರು.

ಶ್ಲೋ || ಶ್ರುತ್ವೈತತ್ಕೃತ್ರವಿಂಧ್ಯಃ ಕ್ವಚ ಭವತಿ ಪುರೀ ಸೇಯಮಾಶ್ಚರ್ಯಮೇತ
೬೪ ತ್ಪ್ರಾಪಂ ರಾತ್ರ್ಯೈಕಯೇಮಾಂ ಸಹಿ ವರದವಿಭುರ್ಭಿಲ್ಲರೂಪೇಣದೃಷ್ಟಃ|
ಕೋಽಸೌ ರಕ್ಷಾಪ್ರಕಾರಸ್ತ್ವಿತಿ ಬಹು ಕಲಯನ್ನೇಷ ರಾಮಾನುಜಾರ್ಯೋ
ನಿತ್ಯಂ ಪಾನೀಯದಾನಾದ್ವರದಮುರುದಯಂ ಪರ್ಯಚಾರೀತ್ಕೃತಜ್ಞಃ||

ಟೀ || ಅಲ್ಲಿ ಬಂದ ಜನಗಳು ಹೇಳಿದ ಈ ಮಾತನ್ನು ಕೇಳಿ, ರಾಮಾನುಜಾಚಾರ್ಯರು "ವಿಂಧ್ಯಪರ್ವತವೆಲ್ಲಿ? ಕಾಂಚೀಪುರವೆಲ್ಲಿ? ಎಷ್ಟುಸಾವಿರ ಮೈಲಿಗಳ ದೂರ? ರಾತ್ರಿ ವಿಂಧ್ಯಾರಣ್ಯದಲ್ಲಿ ಮಲಗಿದ್ದೆನಲ್ಲಾ! ಎದ್ದುನೋಡಿದರೆ "ಇದು ಕಾಂಚೀಪುರ" ಎಂದು ಹೇಳುತ್ತಾರಲ್ಲವೆ? ಇದೇನು ಆಶ್ಚರ್ಯ! ಎಷ್ಟುವೊದಲು ಎದ್ದು ನೋಡಿದರೂ ಆ ಬೇಡರ ದಂಪತಿಗಳು ಕಣ್ಣಿಗೆ ಕಾಣಿಸಲಿಲ್ಲ. ಈ ವಿಚಿತ್ರವನ್ನು ನೋಡಿದರೆ ಅವರಿಬ್ಬರೂ ವರದರಾಜದೇವರೂ ಅವರ ಮಹಿಷಿಯಾದ ಪೆರುಂದೇವಿ ಅಮ್ಮನವರೂ ಆಗಿರಬೇಕು. ಅವರೇ ನನ್ನನ್ನು ತಮ್ಮ ಯೋಗಮಾಯೆಯಿಂದ ಮಲಗಿದ್ದಾಗ ತಿಳಿಯದಹಾಗೆ ಎತ್ತಿಕೊಂಡು ತಂದು ಬಿಟ್ಟಿದ್ದಾರೆ. ಅವರು ಬಾಯಾರಿಕೆ ಎಂದು ಹೇಳಿದರಲ್ಲ. ಅವರಿಗೆ ಸ್ವಲ್ಪ ನೀರು ಕೊಡುವುದಕ್ಕೂ ನನಗೆ ಯೋಗ್ಯತೆ ಇಲ್ಲದೇಹೋಯಿತಲ್ಲಾ. ಆ ದಿವ್ಯದಂಪತಿಗಳ ನಿರ್ಹೇತುಕವಾದ ದಯೆಯು ನನ್ನಲ್ಲಿ ಎಷ್ಟೆಂದು ಹೇಳಬಹುದು" ಎಂದು ಇದೇ ವೊದಲಾದುದನ್ನು ಭಾವಿಸುತ್ತಾ ಈ ರಾಮಾನುಜಾಚಾರ್ಯರು ಅದುವೊದಲು ಪ್ರತಿನಿತ್ಯವೂ "ಶಾಲಕ್ಕಿಣಱು" ಎಂಬ ಭಾವಿಯಿಂದ ಅಗ್ರೋದಕವನ್ನು ತಂದು ವರದರಾಜರಿಗೂ ಪೆರುಂದೇವಿಗೂ ಸಮರ್ಪಿಸುತ್ತಿದ್ದರು.

---

## ಶ್ರೀ ರಾಮಾನುಜಾಚಾರ್ಯರು ಬ್ರಹ್ಮರಕ್ಷಸ್ಸನ್ನು ಬಿಡಿಸಿದುದು.

---

ಶ್ಲೋ || ಗಚ್ಛತ್ವಂ ಬ್ರಹ್ಮರಕ್ಷೋ ಭಣತಿ ಯತಿರಯಂ ಯಾದವೋ ಮದ್ವಚೋಭಿಃ ಕಸ್ಮಾನ್ನೈಷೋಽಪಯಾಯಾನ್ಮಮ ಬಲನಿಹತಃ ಪಾತ್ಯಸೇ ಜಾಲ್ಮ ನೋಚೇತ್ | ಜಾನೇಮಂತ್ರಂ ತವಾಹಂ ತವ ಮಮ ಚ ಜನುಃ ಪ್ರಾಕ್ತನಂ ವೇತ್ಸಿ ಕಿಂ ತ್ವಂ ನೋತಹ್ಯಾರ್ಚಕಸ್ತ್ವಂ ಸರ್ಪಸ್ತ್ವಮಹಮಪಿ ಪುರಾ ಬ್ರಾಹ್ಮಣೋ ಯಾಯಜೂಕಃ ||
೬೫

ಶ್ಲೋ || ಉಚ್ಛಿಷ್ಟಪ್ರಾಶನೇನ ದ್ವಿಜಜನುರಭಜಃ ಪ್ರಾಗ್ಜನೌ ವೈಷ್ಣವಾನಾಂ ಲೋಪಾನ್ಮಂತ್ರಕ್ರಿಯಾದೇ ರಹಮಪಿ ಯಜನೇಬ್ರಹ್ಮರಕ್ಷಸ್ತ್ವಮಾಪಮ್ | ಗಚ್ಛೈವಂ ತರ್ಹಿ ಹಿಂಸಾ ಕುತಇಯಮಸತೀ ತ್ವದ್ವಚೋಭಿರ್ನಯಾಯಾಂ ನೋಚೇದ್ಗಂತಾಸಿ ಕಸ್ಮಾದ್ಗುಣಗಣಜಲಧೇ ರ್ಲಕ್ಷ್ಮಣಾರ್ಯಸ್ಯ ವಾಕ್ಯಾತ್ ||
೬೬

ಟೀ || ಕಾಶೀಯಾತ್ರೆಗೆ ಹೋಗಿದ್ದ ಯಾದವಪ್ರಕಾಶರು ಶಿಷ್ಯರೊಡನೆ ಹಿಂದಿರುಗಿ ಬಂದು ತನ್ನ ಇಷ್ಟಾರ್ಥವು ನಡೆಯದೇ ಹೋದುದನ್ನು ಪ್ರಕಟಮಾಡದೇ ಇರಲು, ರಾಮಾನುಜಾಚಾರ್ಯರು ಪೂರ್ವದಂತೆಯೇ ಅವರಲ್ಲಿ ಹೋಗುತ್ತಿರುವಾಗ ಆ ದೇಶದ ರಾಜನ ಮಗಳಿಗೆ ಬ್ರಹ್ಮರಕ್ಷಸ್ಸು ಹಿಡಿದು ಯಾವ ವಿಧವಾದ ಚಿಕಿತ್ಸೆಗೂ ನಿವೃತ್ತಿಯಾಗದೇ ಇರಲು, ಈ ಯಾದವಪ್ರಕಾಶರು ಮಂತ್ರಸಿದ್ಧರೆಂತಲೂ, ಅವರಿಂದ ಇದಕ್ಕೆ ನಿವೃತ್ತಿಯಾಗುತ್ತೆಂತಲೂ ರಾಜನು ಕೇಳಿ ಅವರನ್ನು ಕರೆಯಿಸಲು ಅವರು ಶಿಷ್ಯರೊಡನೆ ಅಲ್ಲಿಗೆ ಬರಲು, ಆ ಯಾದವಪ್ರಕಾಶರಿಗೂ ಈ ಬ್ರಹ್ಮರಕ್ಷಸ್ಸಿಗೂ ಹೀಗೆ ಸಂವಾದ ನಡೆಯಿತು. "ಎಲೈ ಬ್ರಹ್ಮರಕ್ಷಸ್ಸೇ ಮಂತ್ರಸಿದ್ಧರಾದ ಯಾದವಪ್ರಕಾಶರನ್ನು ಕೇಳಿಬಲ್ಲೆಯಾ ? ಅವರು ಹೇಳುತ್ತಾರೆ. ಈ ರಾಜಪುತ್ರಿಯನ್ನು ಬಿಟ್ಟುಹೋಗು." "ಎಲೈ ಸನ್ಯಾಸಿಯೇ ನಾನು ಹೇಳುತ್ತೇನೆ. ನೀವೇ ಏತಕ್ಕೆ ಇಲ್ಲಿಂದ ಹೊರಟುಹೋಗಬಾರದು ?" "ಎಲೈ ಬುದ್ಧಿಹೀನನಾದ ಬ್ರಹ್ಮರಾಕ್ಷಸನೇ ನನ್ನ ಮಂತ್ರಬಲದಿಂದ ಹತನಾಗಿ ಬೀಳುವಿ" "ಓಹೋ ! ನಿನ್ನ ಮಂತ್ರವನ್ನು ನಾನು ಬಲ್ಲೆ. ಹೇಳಲೆ ಕೇಳು. ಆದರೆ ನಿನ್ನನ್ನು ಮಂತ್ರಸಿದ್ಧನೆಂದು ಹೇಳಿಕೊಳ್ಳುತ್ತೀಯಷ್ಟೆ. ಇದಕ್ಕೆ ಹಿಂದಿನ ಜನ್ಮದಲ್ಲಿ ನೀನೂ ನಾನೂ ಏನಾಗಿದ್ದೆವು ಅದನ್ನು ಹೇಳುವಿಯಾ ?" "ನನಗೆ ತಿಳಿಯದು ನೀನು ಹೇಳುವಿಯಾ ?" "ಆಹಾ ! ಹೇಳುವೆನು ಕೇಳು. ನೀನು ಮಧುರಾಂತಕವೆಂಬ ಊರಿನ ಕೆರೆಯ ಹತ್ತಿರ ಒಂದು ಹುತ್ತದಲ್ಲಿ ಸರ್ಪ (ಅಥವಾ ಉಡ) ವಾಗಿದ್ದೆ. ನಾನು ಯಾವಾಗಲೂ ಯಜ್ಞದೀಕ್ಷಿತನಾದ ಬ್ರಾಹ್ಮಣನಾಗಿದ್ದೆನು." "ಆದರೆ ನಮ್ಮಿಬ್ಬರಿಗೂ ಈ ಜನ್ಮಗಳು ಯಾತರಿಂದ ಬಂದವು ; ಹೇಳುವಿಯಾ?" "ಎಲೈ ಸನ್ಯಾಸಿಯೇ ಕೇಳು. ನೀನು ಸರ್ಪವಾಗಿದ್ದಾಗ ಆ ಕೆರೆಯಲ್ಲಿ ಕೆಲವರು ಭಗವದ್ಭಕ್ತರು ಸ್ನಾನಾದಿಗಳನ್ನು ಮಾಡಿ ಪ್ರಸಾದ ಸ್ವೀಕಾರ ಮಾಡಿ ಶೇಷಪ್ರಸಾದವನ್ನು ಬಿಸಾಡಿದ್ದರು. ಅದನ್ನು ನೀನು ತಿಂದೆಯಾದ್ದರಿಂದ ನಿನಗೆ ಬ್ರಾಹ್ಮಣ ಜನ್ಮ ಬಂತು. ಯಜ್ಞ ಮಾಡುವಾಗ ಮಂತ್ರಲೋಪ ಕ್ರಿಯಾಲೋಪ ದ್ರವ್ಯಲೋಪಗಳುಂಟಾದುದರಿಂದ ನನಗೆ ಈ ಬ್ರಹ್ಮರಾಕ್ಷಸ ಜನ್ಮವುಂಟಾಯಿತು." "ಎಲೈ ರಕ್ಷಸ್ಸೇ ನೀನಿಷ್ಟು ತಿಳಿದೂ ಕ್ರೂರವಾದ ಈ ಸ್ತ್ರೀಹಿಂಸೆಯನ್ನು ಏತಕ್ಕೆ ಮಾಡುವಿ ? ಬಿಡು" "ಓಹೋ ! ನಿನ್ನ ಮಾತಿನಿಂದ ಹೋಗುವೆನೆ ?" "ಆದರೆ

ಇನ್ನೇತರಿಂದ ಹೋಗುವಿ?" "ಸಕಲ ಕಲ್ಯಾಣಗುಣ ಪೂರ್ಣರಾಗಿ ಅಂಶ ಪುರುಷರಾದ ಈ ರಾಮಾನುಜಾಚಾರ್ಯರ ಅಪ್ಪಣೆಯಿಂದ" ಎಂದು. (ಸಂವಾದ)

ಶ್ಲೋ || ಇತ್ಯುಕ್ತ್ವಾ ಬ್ರಹ್ಮರಕ್ಷಃ ಪದಕಮಲಯುಗಂ ಲಕ್ಷ್ಮಣಾರ್ಯಸ್ಯ ಧೃತ್ವಾ
೬೭ ಮೂರ್ಧ್ನಾ ತ್ಯಕ್ತ್ವಾಥ ರಾಜ್ಞೋ ದುಹಿತರಮಗಮದ್ಬೋಧಿಶಾಖಾಂ ಚ ಭಙ್ಕ್ತ್ವಾ। ಏತದ್ದೃಷ್ಟ್ವಾ ಸ ರಾಜಾ ಸ ಚ ಯತಿರತುಲಂ ವಿಸ್ಮಯಂ ಪ್ರಾಪ ಸರ್ವೋ ಮೇನೇ ರಾಮಾನುಜಾರ್ಯಂ ಜನ ಇಹ ಜಗತಿ ಪ್ರಾಯಶೋಂಶಾವತಾರಮ್ ||

ಟೀ || ಅನಂತರ ಯಾದವಪ್ರಕಾಶರು, "ಹಾಗಾದರೆ ಎಲೈ ರಾಮಾನುಜರೇ ಈ ಬ್ರಹ್ಮರಕ್ಷಸ್ಸಿಗೆ ಬಿಟ್ಟುಹೋಗುವಂತೆ ನೀವು ಅಪ್ಪಣೆ ಕೊಡಿಸಿ" ಎಂದು ಹೇಳಲು, ರಾಮಾನುಜಾಚಾರ್ಯರು, "ಎಲೈ ಬ್ರಹ್ಮರಾಕ್ಷಸನೇ ದೊಡ್ಡವರ ಅಪ್ಪಣೆ ಪ್ರಕಾರ ಈ ರಾಜಪುತ್ರಿಯನ್ನು ಬಿಟ್ಟು ಹೊರಟುಹೋಗು" ಎಂದು ಅಪ್ಪಣೆ ಮಾಡಲು, ಆ ಬ್ರಹ್ಮರಕ್ಷಸ್ಸು ಆ ಗೋಷ್ಠೀಮಧ್ಯದಲ್ಲಿದ್ದ ರಾಮಾನುಜಾಚಾರ್ಯರ ಪಾದಾರವಿಂದಗಳನ್ನು ತನ್ನ ತಲೆಯಮೇಲೆ ಇಟ್ಟುಕೊಂಡು ಆ ರಾಜಪುತ್ರಿಯನ್ನು ಬಿಟ್ಟು, ತಾನು ಬಿಟ್ಟುಹೋದುದಕ್ಕೆ ಗುರುತಾಗಿ ಅಲ್ಲಿದ್ದ ಅರಳೀಮರದ ದೊಡ್ಡ ಕೊಂಬೆಯನ್ನು ಮುರಿದುಹಾಕಿ ಹೊರಟುಹೋಯಿತು. ಇದೆಲ್ಲವನ್ನೂ ಆಮೂಲಾಗ್ರವಾಗಿ ನೋಡುತ್ತಿದ್ದ ದೊರೆಯೂ ಆ ಯಾದವಪ್ರಕಾಶರೂ ಅಲ್ಲಿದ್ದ ಜನಗಳೂ ಅತ್ಯಾಶ್ಚರ್ಯಪಟ್ಟು, ಶ್ರೀ ರಾಮಾನುಜಾಚಾರ್ಯರು "ಅಂಶಪುರುಷರು" ಎಂದು ತಿಳಿದುಕೊಂಡರು.

---

ಶ್ರೀ ರಾಮಾನುಜಾಚಾರ್ಯರು (ಆಳವಂದಾರ್) ಯಾಮುನಾಚಾರ್ಯರ ಕೈ ಬೆರಳುಗಳನ್ನು ಬಿಡಿಸಿದುದು.

---

ಶ್ಲೋ || ಭೂಯಾದಾಚಾರ್ಯವರ್ಯಸ್ತ್ವಯಮಿತಿ ಸಪದಿ ವೀಕ್ಷಿತೋ ಯಾಮುನಾ
೬೮ ರ್ಯೈರಾಹೂತಃ ಪೂರ್ಣವರ್ಯೈಸ್ತದುದಿತವಚನಾತ್ಪ್ರಾಪ ರಂಗಂ ಮುದಾಸೌ | ಪಾರೇಕಾವೇರಿ ದೃಷ್ಟ್ವಾ ಜನಮಥ ಬಹುಳಂ ಯಾಮುನಾರ್ಯಾನ್ಪರಾಸೂನ್ ಶ್ರುತ್ವಾ ತಿಸ್ರೋಂಗುಳೀಸ್ತತ್ಕರತಲಸಮಿತಾ ವೀಕ್ಷ್ಯ ಚೈತಾನುವಾಚ ||

ಟೀ || ಶ್ರೀ ರಾಮಾನುಜಾಚಾರ್ಯರು "ಕಪ್ಯಾಸಂ" "ಸತ್ಯಂ ಜ್ಞಾನಂ" ಇತ್ಯಾದಿ ಶ್ರುತ್ಯರ್ಥವನ್ನು ಹೇಳಿದ ವೃತ್ತಾಂತವನ್ನು ಶ್ರೀರಂಗದಲ್ಲಿ ದಯಮಾಡಿಸಿದ್ದ ಶ್ರೀ ಯಾಮುನಾಚಾರ್ಯರು ಕೇಳಿ ಆ ರಾಮಾನುಜಾಚಾರ್ಯರನ್ನು ನಮ್ಮ ವಿಶಿಷ್ಟಾದ್ವೈತ ಪ್ರವರ್ತಕರನ್ನಾಗಿ ಮಾಡಬೇಕೆಂದು ಉದ್ದೇಶಿಸಿ ಶ್ರೀರಂಗದಿಂದ ಕಾಂಚೀಪುರಕ್ಕೆ ದಯಮಾಡಿಸಿ ವರದರಾಜರ ದೇವಸ್ಥಾನದಲ್ಲಿ ತಮ್ಮ ಕೆಲವು ಶಿಷ್ಯರೊಡನೆ ಕುಳಿತುಕೊಂಡಿರುವಾಗ ಯಾದವಪ್ರಕಾಶರೂ ಅವರ ಶಿಷ್ಯರೊಡನೆ ರಾಮಾನುಜಾಚಾರ್ಯರೂ ಬರುವುದನ್ನು ನೋಡಿ, ರಾಮಾನುಜಾಚಾರ್ಯರಿಗೆ ಪ್ರತ್ಯೇಕವಾಗಿ ಹೇಳುವುದಕ್ಕವಕಾಶವಾಗದೇ ಇದ್ದುದರಿಂದ, "ಇವರು ವಿಶಿಷ್ಟಾದ್ವೈತ ದರ್ಶನಸ್ಥಾಪಕಾಚಾರ್ಯರಾಗಲಿ" ಎಂದು ಅವರನ್ನು ಕಟಾಕ್ಷಿಸಿ ಅನುಗ್ರಹಿಸಿ ಪುನಃ ಶ್ರೀರಂಗಕ್ಕೆ ಹೊರಟುಹೋದರು. ಆದರೂ ಅದೇ ಚಿಂತೆಯಲ್ಲಿದ್ದುದರಿಂದಲೂ, ತಮಗೆ ದೇಹದಲ್ಲಿ ಅಸ್ವಾಸ್ಥ್ಯ ಉಂಟಾದುದರಿಂದಲೂ, ರಾಮಾನುಜಾಚಾರ್ಯರನ್ನು ಹೇಗಾದರೂ ಮಾಡಿ ಶ್ರೀರಂಗಕ್ಕೆ ಕರೆದುಕೊಂಡು ಬರುವುದಕ್ಕೋಸ್ಕರ ತಮ್ಮ ಶಿಷ್ಯರಾದ "ಪೆರಿಯನಂಬಿ" ಎಂಬುವರನ್ನು ಕಾಂಚೀಪುರಕ್ಕೆ ಕಳುಹಿಸಲು, ಅವರು ಬಂದು ರಾಮಾನುಜಾಚಾರ್ಯರಿಗೆ ಕ್ರಮವಾಗಿ ಬೋಧಿಸಿ ಕರದುಕೊಂಡು ಶ್ರೀರಂಗಕ್ಕೆ ಹೋಗಲು ಕಾವೇರಿಯ ಈಚೆಯ ದಡದಲ್ಲಿರುವಾಗಲೇ ಆಚೆಯ ದಡದಲ್ಲಿ ಜನಗಳ ಗುಂಪನ್ನು ನೋಡಿ, "ಇದೇನು ಗುಂಪು" ಎಂದು ವಿಚಾರಿಸಲು, "ಆಳವಂದಾರ್ರವರು ಪರಂಪದಿಸಿದರು" ಎಂದು ಕೇಳಿ ಬಹಳ ದುಃಖದಿಂದ ಹಿಂದಿರುಗುವ ಪ್ರಯತ್ನ ಮಾಡಿ, ಕೊನೆಗೆ ಅವರ ಚರಮವಿಗ್ರಹವನ್ನಾದರೂ ದರ್ಶನ ಮಾಡಬೇಕೆಂಬ ಕುತೂಹಲದಿಂದ ಕಾವೇರಿಯನ್ನು ದಾಟಿ ಅಲ್ಲಿ ಬೃಂದಾವನಕ್ಕಾಗಿ ಭೂಮಿಯೊಳಗೆ ಬಿಜಮಾಡಿಸಿದ್ದ ಆಳವಂದಾರ್ರವರ ಚರಮವಿಗ್ರಹವನ್ನು ರಾಮಾನುಜಾಚಾರ್ಯರು ದರ್ಶನಮಾಡಿದಾಗ ಅವರ ಕೈಬೆರಳುಗಳು ಮೂರು ಮಾತ್ರ ಮಡಿಸಿಕೊಂಡಿದ್ದುದನ್ನು ನೋಡಿ, ಅಲ್ಲಿದ್ದವರನ್ನು ಕೇಳುವಾಗ ರಾಮಾನುಜಾಚಾರ್ಯರಿಗೂ ಅವರಿಗೂ ಮುಂದೆ ಹೇಳುವಂತೆ ಸಂಭಾಷಣೆ ನಡೆಯಿತು.

ಶ್ಲೋ || ಕಿಂವಾಭೂತ್ಪೂರ್ವಮೇವಂ ನ ಹಿ ಪುನರಧುನಾಕುಂಚಿತಾಸ್ತ್ರೀರ್ಹಿ ಪೂರ್ವಂ
೬೪ ಭೂಯೋಭೂಯಃ ಪ್ರಸಂಗೇಷ್ವಪಿ ಕಥಿತಮಭೂದೇಭಿರಿಷ್ಟಂ ಪುರೋ

ವಃ | ಕೃಷ್ಣದ್ವೈಪಾಯನೇ ತತ್ಪಿತರಿ ಚ ನಿತರಾಮಾದರಸ್ಸಂಪ್ರದರ್ಶ್ಯಸ್ತ
ದ್ವಿಷ್ಟ ಷ್ರ್ಕಶಠಾರಂ ತದುದಿತವಿಧಯಾ ಸ್ಯಾದ್ವಿಶಿಷ್ಟೈಕ್ಯಭಾಷ್ಯಮ್ ||

ಶ್ಲೋ || ತ್ರೀನೇತಾನ್ಯಾಮುನೋಽರ್ಥಾನ್ಪ್ರಕಟಯತಿ ಮುಹುಸ್ಸ್ಮೇತಿ ತೇ ಪ್ರಾಹು
೭೦ ರೇತಚ್ಛ್ರುತ್ವಾ ರಾಮಾನುಜಾರ್ಯೋಽ ಯದಿ ಬಹುಚಪಲಾಜ್ಜೀವಿತಾ
ನ್ನ ಚ್ಯವೇಮ | ದೈವಂ ಪ್ರಾಪ್ತ್ಯಂ ಯದಿಸ್ಯಾದ್ವಯಮಿದಮಖಿಲಂ ಸಾಧ
ಯೇಮೇತ್ಯವೋಚತ್ತಸ್ಯಾಂಗುಳ್ಯೋಽಪಿ ಋಜ್ವ್ಯಸ್ಸಮಮಭುರಥ ತೇ
ವಿಸ್ಮಿತಾಸ್ತತ್ರಸರ್ವೇ ||

ಟೀ || "ಇವರಿಗೆ ಯಾವಾಗಲೂ ಮೂರು ಬೆರಳುಗಳು ಬಗ್ಗಿಯೇ ಇದ್ದ ವೋ ?" "ಇಲ್ಲ. ಈಗ ಹೀಗೆ ಇವೆ." "ಹಾಗಾದರೆ ಪೂರ್ವದಲ್ಲಿ ಇವರು ಗ್ರಂಥಪ್ರವಚನಾದಿ ಕಾಲಗಳಲ್ಲಿ ಮಾತು ಬಂದಾಗ ತಮಗೆ ಇಷ್ಟವಾದುದನ್ನು ನಿಮ್ಮೊಡನೆ ಪದೇಪದೇ ಏನಾದರೂ ಹೇಳುತ್ತಿದ್ದರೋ ?" "ಹೌದು. ಉಂಟು. ಬ್ರಹ್ಮಸೂತ್ರ, ಮಹಾಭಾರತಗಳಿಂದ ನಮ್ಮ ದರ್ಶನಕ್ಕೆ ಸಹಾಯಮಾಡಿದ ವ್ಯಾಸ ಮಹರ್ಷಿಯಲ್ಲಿಯೂ, ತತ್ವತ್ರಯಗಳನ್ನು ವಿಶದವಾಗಿ ತಿಳಿಯುವಂತೆ ವಿಷ್ಣು ಪುರಾಣವನ್ನು ಮಾಡಿದ ಪರಾಶರ ಮಹರ್ಷಿಯಲ್ಲಿಯೂ, ಕೃತಜ್ಞತೆಯನ್ನು ತೋರಿಸಬೇಕೆಂತಲೂ, ಭಗವನ್ನಿರ್ಹೇತುಕ ಕಟಾಕ್ಷದಿಂದ ಭಗವತ್ಸ್ವರೂಪರೂಪ ಗುಣ ವಿಗ್ರಹವಿಭೂತಿಗಳನ್ನೆಲ್ಲಾ ಸಾಕ್ಷಾತ್ಕರಿಸಿ ಆ ಅನುಭವ ಪರೀವಾಹರೂಪ ವಾದ ದಿವ್ಯಪ್ರಬಂಧಗಳಿಂದ ಪರವೋಪಕಾರವನ್ನು ಮಾಡಿದ ನಮ್ಮಾಳ್ವಾರ್‌ನಲ್ಲಿ ಕೃತಜ್ಞತೆಯನ್ನು ತೋರಿಸಬೇಕೆಂತಲೂ, ಹಾಗೆಯೇ ನಮ್ಮಾಳ್ವಾರ್‌ರವರ ಸಂಪ್ರದಾಯದಂತೆ ಬ್ರಹ್ಮಸೂತ್ರಕ್ಕೆ ವಿಶಿಷ್ಟಾದ್ವೈತಪರವಾಗಿ ಒಂದು ಭಾಷ್ಯ ಮಾಡ ಬೇಕೆಂದೂ, ಈ ಮೂರು ಮಾತುಗಳನ್ನು ಪದೇಪದೇ ಅಪ್ಪಣೆ ಕೊಡಿಸುತ್ತಿದ್ದರು" ಎಂದು (ಸಂವಾದ). ಅನಂತರ ರಾಮಾನುಜಾಚಾರ್ಯರು ಅವರ ಈ ಮಾತುಗಳನ್ನು ಕೇಳಿ, "ಅತ್ಯಂತ ನಶ್ವರವಾದ ಈ ಜೀವಮಾನವು ನಮಗೂ ಇದ್ದರೆ ದೈವಾನುಕೂಲ್ಯವೂ ಉಂಟಾದರೆ ನಾನು ಈ ಮೂರು ಕೊರತೆಗಳನ್ನೂ ಪರಿಹರಿಸುವೆನು" ಎಂದು ಘಂಟಾಘೋಷವಾಗಿ ಹೇಳಲು ಎಲ್ಲರೂ ನೋಡುತ್ತಿದ್ದಂತೆಯೇ ಆ ಮೂರು ಬೆರಳುಗಳೂ ನೆಟ್ಟಗಾಗಿ ಪ್ರಕಾಶಿಸಿದುವು. ಇದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟು "ಇವರು ಮಹಾನುಭಾವರು" ಎಂದು ತಿಳಿದರು.

## ಶ್ರೀ ರಾಮಾನುಜಾಚಾರ್ಯರು ತಿರುಕ್ಕಚ್ಚಿನಂಬಿಗಳಿಂದ ಆರು ವಿಷಯು ಗಳನ್ನು ತಿಳಿದುಕೊಂಡದ್ದು.

---

ಶ್ಲೋ || ಯಸ್ತುಷ್ಟ್ಯೈ ಸ್ರಷ್ಟುರ್ಮಖಾಗ್ನಾವುದಿತಮಿಹವಿಭುಂ ತಾಳವೃಂತೈಸ್ಸಿಷೇವೇ
೭೧ ನಿತ್ಯಂ ಯೋಭಾಷತೇದ್ಧಾ ಪ್ರಿಯಸಖಮಿವ ತಂ ದೇವರಾಜಂ ಮಿಥೋಪಿ|
ತಂ ಕಾಂಚೀಪೂರ್ಣಮೇತ್ಯ ಸ್ವಮನಸಿ ನಿಹಿತಾನ್ಕಾಂಶ್ಚಿದರ್ಥಾನ್ವಿದಿತ್ವಾ
ದೇವಾದಾಜ್ಞಾಪ್ಯತಾಮಿತ್ಯಯಮನುಯುಯುಜೇ ಲಕ್ಷ್ಮಣಾರ್ಯೋ
ವಿನೀತಃ ||

ಟೀ || ಚತುರ್ಮುಖಬ್ರಹ್ಮನ ಯಜ್ಞದ ಅಗ್ನಿಕುಂಡದಲ್ಲಿ ಅವತರಿಸಿದ ವರದ ರಾಜ ದೇವರಿಗೆ ತಾಪಪರಿಹಾರಾರ್ಥವಾಗಿ ಸರ್ವದಾ ಬೀಸಣಿಗೆ ಕೈಂಕರ್ಯವನ್ನು ಮಾಡುತ್ತಲೂ, ಅವರಿಗೆ ಹಾಗೆ ಇಷ್ಟವಾದ ಅಂತರಂಗಕೈಂಕರ್ಯವನ್ನು ಮಾಡೋಣದರಿಂದಲೇ ಯಾವ ತಿರುಕ್ಕಂಚಿನಂಬಿಯೂ, ವರದರಾಜದೇವರೂ, ಪರಸ್ಪರ ಸ್ನೇಹಿತರಂತೆ ಮಾತನಾಡುವರೋ ಅಂಥಾ ತಿರುಕ್ಕಚ್ಚಿನಂಬಿಗಳನ್ನು ಆಶ್ರಯಿಸಿ ಈ ರಾಮಾನುಜಾಚಾರ್ಯರು, "ಆಚಾರ್ಯರೇ ನಾನು ಯಾವದೋ ಕೆಲವು ಅರ್ಥ ಗಳನ್ನು ತಿಳಿದುಕೊಂಡಿದೇನೆ. ಆ ಅರ್ಥಗಳು ಇಂಥವುಗಳು ಎಂಬುದನೂ ಅವು ಸರಿಯಾದ ಅರ್ಥಗಳೋ ಅಲ್ಲವೋ ? ಎಂಬದನ್ನೂ ತಾವು ವರದರಾಜರನ್ನು ಕೇಳಿ ನನಗೆ ಅಪ್ಪಣೆಕೊಡಿಸಬೇಕೆಂದು ವಿನಯದಿಂದ ಕೇಳಿದರು.

ಶ್ಲೋ || ಸೋಪಿ ಜ್ಞಾತ್ವಾಥ ರಾತ್ರ್ಯಾಮುಷಸಿ ಸಮವದಲ್ಲಕ್ಷ್ಮಣಾರ್ಯಾರ್ಥ
೭೨ ಷಟ್ಕಂ ತ್ವಚ್ಚಿತ್ತೇ ಭಾವಿತಂ ತದ್ವಿಶದಮಿಹ ವದಾಮ್ಯಾಶು ಮೇ ಬ್ರೂಹಿ
ತಚ್ಚೇತ್ | ತತ್ವಂ ನಾರಾಯಣೋ ದರ್ಶನಮಿಹ ಚ ಭಿದಾ ತತ್ಪ್ರಪತ್ತಿ
ರ್ಹ್ಯುಪಾಯೋ ನಾಂತ್ಯಸ್ಮೃತ್ಯಸ್ತ್ವಪೇಕ್ಷಾ ಚರಮತನುರಿಯಂ ಪೂರ್ಣ
ವರ್ಯಂ ಭಜೇಥಾಃ ||

ಟೀ || ತಿರುಕ್ಕಚ್ಚಿನಂಬಿಯೂ ಕೂಡ ಆದಿವಸ ರಾತ್ರಿ ವರದರಾಜರಿಗೆ ಬೀಸಣಿಗೆ ಕೈಂಕರ್ಯವನ್ನು ಮಾಡಿ ದೇವರು ಮಲಗುವ ಸಮಯದಲ್ಲಿ "ರಾಮಾನುಜಾಚಾರ್ಯರು ಯಾವುದೋ ಕೆಲವು ಅರ್ಥಗಳನ್ನು ಭಾವಿಸಿದ್ದಾರಂತೆ. ಅವು

ಯಾವುವು ? ಅವು ನಿಮಗೆ ಸಮ್ಮತವಾದವುಗಳೇ ? " ಎಂದು ಕೇಳಿದರು. ಅದಕ್ಕೆ ವರದರಾಜರು, " ರಾಮಾನುಜರ ಮನಸ್ಸಿನಲ್ಲಿ ಆರು ಅರ್ಥಗಳಿವೆ ಅವು ಇಂಥವು ಗಳು, ಅವುಗಳು ನನಗೆ ಅತ್ಯಂತ ಸಮ್ಮತಗಳಾದುವು. ಅವೇ ಶಾಸ್ತ್ರಸಾರಾರ್ಥ ಗಳು " ಎಂದು ಹೇಳಿದರು. ತಿರುಕ್ಕಚ್ಚಿನಂಬಿಯು ಅದನ್ನು ತಿಳಿದುಕೊಂಡು ಬೆಳಗ್ಗೆ ರಾಮಾನುಜಾಚಾರ್ಯರೊಡನೆ ಹೇಳಿದ್ದೇನೆಂದರೆ—" ಎಲೈ ರಾಮಾನು ಜರೇ ನಿಮ್ಮ ಮನಸ್ಸಿನಲ್ಲಿ ಆರು ಅರ್ಥಗಳಿವೆ. ಅವು ಭಗವತ್ಸಮ್ಮತವಾದ ಶಾಸ್ತ್ರಾ ರ್ಥಗಳು. ಈಗ ನಾನು ಹೇಳುವ ಅರ್ಥಗಳೂ, ನಿಮ್ಮ ಮನಸ್ಸಿನಲ್ಲಿರುವ ಅರ್ಥ ಗಳೂ, ಒಂದೇ ಆಗುವದೇ ? ನೋಡಿ ಹೇಳಿ. ಆ ಆರು ಅರ್ಥಗಳು ಯಾವು ವೆಂದರೆ—(೧) ನಾರಾಯಣನೇ ಪರತತ್ತ್ವ. (೨) ಭೇದವೇ ಶಾಸ್ತ್ರಾರ್ಥ. (೩) ಭಗವತ್ಪ್ರಾಪ್ತಿಗೆ ಭಗವತ್ಪ್ರಪತ್ತಿಯೇ ಉಪಾಯ. (೪) ಇಂತಹ ಪ್ರಪನ್ನ ನಿಗೆ ಸಾಯುವ ಕಾಲದಲ್ಲಿ ಭಗವಂತನ ಸ್ಮರಣೆ ಬೇಕಾದುದಿಲ್ಲ. (೫) ಪ್ರಪನ್ನ ನಿಗೆ ಉಪಾಸಕನಂತೆ ಪ್ರಾರಬ್ಧಕರ್ಮ ಫಲವಾದ ಮತ್ತೆ ಕೆಲವು ಶರೀರಗಳು ಬರು ವುದಿಲ್ಲ. ಇದೇ ಕೊನೆಯ ಶರೀರ. (೬) ಪೆರಿಯನಂಬಿ ತಿರುವಡಿಗಳಲ್ಲಿ ಆಶ್ರ ಯಿಸತಕ್ಕದ್ದು " ಎಂದು ಹೇಳಿದರು.

ಶ್ಲೋ || ಶ್ರುತ್ವೈತಲ್ಲಕ್ಷಣಾರ್ಯ ಶ್ರಿತಜನಸುಲಭಂ ಸರ್ವವೇತ್ತಾರಮುದ್ಧಾ ಜ್ಞಾ
೭೩. ತ್ವಾ ಸ್ವಸ್ಮಿನ್ ಸ್ವದಯಾಳುಂ ವರದಮಥ ಗುರೋರ್ಗೌರವಂ ಚಾಪ್ಯವೇಕ್ಷ್ಯ ಹೃಷ್ಟೋಭೂತ್ವಾಂತರಂಗೇ ಶ್ರುತಿಶತಶಕಲಾನಸ್ಥಾಪಯಾಮಾಸ ಭೂಯೋ ಲೋಕಾನುಜ್ಜೀವಯಿಷ್ಯನ್ಪರಮಕರುಣಯಾ ಜ್ಞಾನದೀಪೇನ ಸರ್ವಾನ್ ||

ಟೀ || ಅನಂತರ ಶ್ರೀ ರಾಮಾನುಜಾಚಾರ್ಯರು ಈ ಮಾತುಗಳನ್ನು ಕೇಳಿ ಇದರಿಂದ ಭಗವಂತನ ಆಶ್ರಿತಸುಲಭತ್ವವನ್ನೂ, ಸರ್ವಜ್ಞತ್ವವನ್ನೂ, ತನ್ನಲ್ಲಿ ನಿಜ ವಾದ ಪರಮಕೃಪೆಯನ್ನೂ, ಅಂಥಾ ಸರ್ವಜ್ಞನಾದ ಸರ್ವೇಶ್ವರನನ್ನೂ, ತನ್ನ ಕೈವಶಮಾಡಿಕೊಂಡಿರುವ ಆಚಾರ್ಯನ ಗೌರವಾತಿಶಯವನ್ನೂ ಭಾವಿಸಿ ನೋಡಿ ಬಹಳ ಸಂತೋಷಪಡುತ್ತಾ ತನ್ನ ಕರುಣೆಯಿಂದ ಲೋಕವನ್ನು ಉಜ್ಜೀವಿಸು ವಂತೆ ಮಾಡುವುದಕ್ಕಾಗಿ ಶ್ರುತ್ಯರ್ಥಗಳೆಲ್ಲವನ್ನೂ ಭಾವಿಸುತ್ತಿದ್ದರು.

## ಶ್ರೀ ರಾಮಾನುಜಾಚಾರ್ಯರು ಸನ್ಯಾಸಾಶ್ರಮವನ್ನು ಸ್ವೀಕರಿಸಿದುದು.

ಶ್ಲೋ || ಪ್ರಕ್ಷೇಪಾತ್ಸ್ವೇಷ್ಟಕಾಂಚೀಮುನಿಪಫಸಲವಸ್ಯಾಶು ತತ್ಸ್ಪರ್ಶಶೌಚಾ
೭೪ ದ್ವಾಭ್ಯಾಂ ಕ್ಷುದ್ಬಾಧಿತಾಭ್ಯಾ ಮುಪಲಪನವಶಾದ್ಯಾತಯಾಮಾನ್ನದಾ
ನೇ | ತೀರೇಕೂಪಸ್ಯ ನೀರೋದ್ಧೃತಿ ಕೃತಕಲಹಾತ್ಪೂರ್ಣವರ್ಯಾಙ್ಘ್ರಿಪ
ತ್ನ್ಯಾಃ ಹಿತ್ವಾ ಭಾರ್ಯಾಂ ತುರೀಯಾಶ್ರಮಮಯಮಗಮಲ್ಲಕ್ಷ್ಮಣಾರ್ಯ
ಸ್ತದೈವ ||

ಟೀ || ಹೀಗೆ ತಿರುಕ್ಕಚ್ಚಿನಂಬಿಯವರ ಶಾಂತ್ಯಾದಿ ಗುಣಗಳೇನು, ನಿರಂತರ ಭಗವತ್ಕೈಂಕರ್ಯವೇನು, ಭಗವಂತನನ್ನು ಸ್ವಾಧೀನಪಡಿಸಿಕೊಂಡಿರೋಣವೇನು ಇವೇ ಮೊದಲಾದ ಅತಿಶಯಗಳನ್ನು ನೋಡಿ, ಶ್ರೀ ರಾಮಾನುಜಾಚಾರ್ಯರು ಅವರ ಭೋಜನಪಾತ್ರದಲ್ಲಿ ಭುಕ್ತಶೇಷವಾದ ಪ್ರಸಾದವನ್ನು ಸ್ವೀಕರಿಸಬೇಕೆಂದು ಬಹಳ ದಿವಸದಿಂದ ನಿರೀಕ್ಷಣೆ ಮಾಡುತ್ತಿದ್ದು, ಒಂದುದಿವಸ ಮೊದಲೇ ತಿಳಿಸಿದ್ದು ಮಧ್ಯಾಹ್ನದಲ್ಲಿ ತಿರುಕ್ಕಚ್ಚಿನಂಬಿಯವರನ್ನು ಮನೆಗೆ ಊಟಕ್ಕೆ ಕರದುಕೊಂಡುಬರುವುದಕ್ಕೋಸ್ಕರ ಇವರೊಂದು ಬೀದಿಯಿಂದ ಹೋಗೋಣ, ಅವರೊಂದು ಬೀದಿಯಿಂದ ಬಂದು ಊಟಮಾಡಿಬಿಟ್ಟು ಹೊರಟುಹೋದರು ರಾಮಾನುಜಾಚಾರ್ಯರು ಮನೆಗೆ ಬರುವಷ್ಟರೊಳಗೆ ಇವರ ಹೆಂಡತಿಯು ಅವರು ಊಟಮಾಡಿದ ಎಲೆಯನ್ನು ಕೋಲಿನಿಂದ ಚುಚ್ಚಿ ದೂರದಲ್ಲಿ ಹಾಕಿಬಿಟ್ಟು ಹಾಕುವಾಗ ಎಂಜಲು ಹಾರಿತೆಂದು ಸ್ನಾನಮಾಡಿ ಕುಳಿತಿದ್ದಳು. ಇನ್ನೊಂದು ದಿವಸ ಮನೆಗೆಬಂದ ಇಬ್ಬರು ಶ್ರೀವೈಷ್ಣವರಿಗೆ ಬಹಳ ಹಸಿವಾಗಿರಲು, ರಾಮಾನುಜಾಚಾರ್ಯರು ಅವರಿಗೆ ಆ ದೇಶಾಚಾರದಂತೆ ತಂಗಳನ್ನವನ್ನು ಕೊಡುವಂತೆ ತಮ್ಮ ಹೆಂಡತಿಗೆ ಹೇಳಿದಾಗ ಅವಳು ಇಲ್ಲವೆಂದು ಹೇಳಿದಮೇಲೆ ತಾವೇ ಹೋಗಿ ನೋಡಿದಾಗ ಒಳಗೆ ಪರ್ಯುಷಿತಾನ್ನವಿತ್ತು. ಅದನ್ನು ಅವರಿಗೆ ಕೊಟ್ಟುಬಿಟ್ಟರು. ಮತ್ತೊಂದು ದಿವಸ ಈ ರಾಮಾನುಜಾಚಾರ್ಯರಿಗೆ ಪಂಚಸಂಸ್ಕಾರ ಮಾಡಿಯೂ, ಇವರಿಗೆ ರಹಸ್ಯಾರ್ಥಗಳನ್ನು ಉಪದೇಶ ಮಾಡುವುದಕ್ಕೋಸ್ಕರ ಇವರ ಮನೆಯಲ್ಲೇ ಒಂದುಕಡೆ ವಾಸವಾಗಿದ್ದ "ಪೆರಿಯನಂಬಿ" ಎಂಬ ಆಚಾರ್ಯರ ಹೆಂಡತಿಗೂ, ಇವರ

ಹೆಂಡತಿಗೂ, 'ಇವರಿಬ್ಬರೂ ಇಲ್ಲದ ವೇಳೆಯಲ್ಲಿ ಭಾವಿಯಲ್ಲಿ ನೀರುಸೇದುವಾಗ ಬಹಳ ಕಲಹವುಂಟಾಗೋಣ ಇವರ ಆಚಾರ್ಯಪತ್ನಿಯು ತಮ್ಮ ಪತಿಯೊಡನೆ ಹೇಳುತ್ತಲೂ ಅವರು ರಾಮಾನುಜಾಚಾರ್ಯರ ಮನಸ್ಸಿಗೆ ಕಷ್ಟವಾಗುತ್ತೆಂತಲೂ ತಮಗೆ ಭಾಗವತಾಪಚಾರ ಒದಗುವುದೆಂದೂ ಯೋಚಿಸಿ ಹೇಳದೆಯೇ ಸಕುಟುಂಬರಾಗಿ ಶ್ರೀರಂಗಕ್ಕೆ ಪ್ರಯಾಣಮಾಡಿ ಹೊರಟುಹೋದರು. ರಾಮಾನುಜಾಚಾರ್ಯರು ಮನೆಗೆ ಬಂದು ನೋಡುವಲ್ಲಿ ಆಚಾರ್ಯರನ್ನು ಕಾಣದೆ ತಮ್ಮ ಹೆಂಡತಿಯನ್ನು ಕೇಳಿದಾಗ ಅವಳು ತನಗೂ ಆಚಾರ್ಯರ ಪತ್ನಿಗೂ ಕಲಹವಾದುದನ್ನು ಹೇಳಿ ಅದರಿಂದ ಹೊರಟುಹೋಗಿರಬಹುದೇನೋ ಎಂದಂದಳು, ಆಗ ರಾಮಾನುಜಾಚಾರ್ಯರು, "ನೀನು ಹಿಂದೆಯೇ ಎರಡಾವರ್ತಿ ಭಾಗವತಾಪಚಾರಪಟ್ಟೆ. ಈಗಲೂ ಅಸಹ್ಯಾಪಚಾರಕ್ಕೆ ಒಳಗಾದೆ. ನೀನು ಸಹವಾಸಯೋಗ್ಯಳಲ್ಲ" ಎಂದು ಹೇಳಿ ಅವಳನ್ನು ಆಕ್ಷಣವೇ ಅವಳ ತಾಯಿಯ ಮನೆಗೆ ಕಳುಹಿಸಿ, ಒಡನೆಯೇ ತಾವು ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಅನಂತರ ವರದರಾಜರು ಇವರಿಗೆ "ರಾಮಾನುಜಮುನಿ" ಎಂದು ಹೆಸರನ್ನಿಟ್ಟರು.

---

### ಯಾದವಪ್ರಕಾಶರು ಶ್ರೀರಾಮಾನುಜಾಚಾರ್ಯರಲ್ಲಿ ಪಂಚಸಂಸ್ಕಾರವನ್ನು ಮಾಡಿಸಿಕೊಂಡು ತ್ರಿದಂಡಸನ್ಯಾಸ ಸ್ವೀಕಾರಮಾಡಿದ್ದು.

---

ಶ್ಲೋ || ಭಿಲ್ಲೀ ಭಿಲ್ಲಾವಲೋಕಾಚ್ಛ್ರುತಿಶತವಿವೃತೇರ್ಬ್ರಹ್ಮರಕ್ಷೋವಿಮೋಕ್ಷಾ
೭೫ ನ್ಮಾತುರ್ವಾಕ್ಯಾಚ್ಚ ಕಾಂಚೀಮುನಿ ವರದವಚೋಬೋಧನಾತ್ಸ್ವಾಮರ
ಸ್ಯಾತ್ | ಜ್ಞಾತ್ವಾ ರಾಮಾನುಜಾಚಾರ್ಯಂ ಪರಗತಿಸುಹಿತಂ ಯಾದವೋಽಸೌ ಯತಿಸ್ತ್ರೀನ್ದಂಡಾನ್ಗೋವಿಂದ ಸಂಜ್ಞಾಮಭಜತ ವಿನತಸ್ಸಂಸ್ಕೃತೀಃ ಪಂಚಚಾಸ್ಮಾತ್ ||

ಟೀ || ಅನಂತರ ಯಾದವಪ್ರಕಾಶರ ತಾಯಿಯು "ನೀವು ರಾಮಾನುಜಾಚಾರ್ಯರಿಂದ ಪಂಚಸಂಸ್ಕಾರವನ್ನು ಪಡೆದು ಅವರಂತೆಯೇ ತ್ರಿದಂಡಸನ್ಯಾಸಿಯಾಗಿರಿ" ಎಂದು ಮಗನಿಗೆ ಹೇಳಿದ್ದರಿಂದಲೂ, ತಾನು ಕಾಶಿಗೆ ಹೋದ ಸಂದರ್ಭ

ದಲ್ಲಿ ರಾಮಾನುಜಾಚಾರ್ಯರು ವಿಂಧ್ಯಪರ್ವತದಿಂದ ಕಾಂಚೀಪುರಕ್ಕೆ ಬಂದ ಕ್ರಮವನ್ನು ಕೇಳಿದ್ದರಿಂದ ಇವರಿಗೆ ವರದರಾಜನು ಪ್ರತ್ಯಕ್ಷನಾಗಿಧಾನೆಂದು ತಿಳಿದಿರೋಣದರಿಂದಲೂ, "ಕಪ್ಯಾಸಂ" "ಸತ್ಯಂ ಜ್ಞಾನಂ" ಇತ್ಯಾದಿ ಶ್ರುತಿಗಳಿಗೆ ಇವರು ಸಮೀಚೀನವಾದ ಅರ್ಥಗಳನ್ನು ಹೇಳಿರೋಣದರಿಂದ "ಮಹಾಜ್ಞಾನಿ" ಎಂಬದಾಗಿಯೂ, ತನಗೂ ಅಸಾಧ್ಯವಾದ ಬ್ರಹ್ಮರಕ್ಷಸ್ಸನ್ನು ಇವರು ವಿಮೋಚನ ಮಾಡಿಸಿದ್ದರಿಂದಲೂ ಅದರ ಮೂಲಕವಾಗಿಯೇ ಇವರು ಅಂಶಪುರುಷರೆಂದು ತಿಳಿದುದರಿಂದಲೂ, ರಾಮಾನುಜಾಚಾರ್ಯರನ್ನು ಆಶ್ರಯಿಸಿದ ಹೊರತು ತನಗೆ ಸದ್ಗತಿ ದೊರೆಯುವುದಿಲ್ಲವೆಂದೂ, ಯಾದವಪ್ರಕಾಶರು ತಿಳಿದು ಆಶ್ರಯಿಸಬೇಕಾದರೂ ಇದುವರಿಗೂ ತಾನು ಗಾಯತ್ರೀ ಶಿಖಾ ಯಜ್ಞೋಪವೀತಾದಿಗಳನ್ನು ತ್ಯಾಗಮಾಡಿದ್ದುದರಿಂದ ಅದಕ್ಕೆ ಪ್ರಾಯಶ್ಚಿತ್ತಾರ್ಥವಾಗಿ ಭೂಪ್ರದಕ್ಷಿಣೆ ಮಾಡಬೇಕೆಂತಲೂ, ವೃದ್ಧನಾದುದರಿಂದ ಅದಕ್ಕೂ ತನಗೆ ಶಕ್ತಿ ಇಲ್ಲವೆಂದು ತನ್ನ ತಾಯಿಯ ಸಂಗಡ ಹೇಳಲು ಆಕೆಯು, "ಏಕೆ ಯೋಚನೆ ಮಾಡುವಿ, ರಾಮಾನುಜಾಚಾರ್ಯರನ್ನು ಪ್ರದಕ್ಷಿಣೆ ಮಾಡಿದರೆ ಅದು ಭೂಪ್ರದಕ್ಷಿಣವಲ್ಲವೆ ?" ಎಂದು ಹೇಳಲು, ಇವರು ಅದಕ್ಕೆ ಅನುಮಾನಪಡುತ್ತಾ "ಉಭಯಭ್ರಷ್ಟನಾದೆನಲ್ಲಾ" ಎಂದು ಚಿಂತಿಸಿ ಒಂದು ದಿವಸ ತಿರುಕ್ಕಚ್ಚಿನಂಬಿಯವರನ್ನು "ನನ್ನ ಮನಸ್ಸಿನಲ್ಲಿ ಏನೋ ಒಂದು ವಿಷಯವಿದೆ. ಅದು ಯಾವುದು ಎಂಬುದನ್ನೂ ಮುಂದೆ ನಾನು ಮಾಡಬೇಕಾದುದನ್ನೂ ನೀವು ವರದರಾಜರನ್ನು ಕೇಳಿ ನನಗೆ ಅಪ್ಪಣೆಕೊಡಿಸಬೇಕು" ಎಂದು ಪ್ರಾರ್ಥಿಸಿದರು. ತಿರುಕ್ಕಚ್ಚಿನಂಬಿಯವರು ಆ ವಿಷಯವನ್ನು ವರದರಾಜರನ್ನು ಕೇಳಲು ವರದರಾಜದೇವರು, "ಈ ಯಾದವಪ್ರಕಾಶನು ಅನೇಕ ಕಾರಣಗಳಿಂದ ತಾನು ರಾಮಾನುಜಾಚಾರ್ಯರ ಶಿಷ್ಯನಾಗಬೇಕೆಂದು ಯೋಚಿಸಿ ಪ್ರಾಯಶ್ಚಿತ್ತಕ್ಕಾಗಿ ಭೂಪ್ರದಕ್ಷಿಣ ಮಾಡಬೇಕೆಂತಲೂ ಅದಕ್ಕೆ ಶಕ್ತಿಯಿಲ್ಲದುದರಿಂದ ಚಿಂತಾಕ್ರಾಂತನಾಗಿರುವಾಗ ಅವನ ತಾಯಿಯು "ಭೂಪ್ರದಕ್ಷಿಣಕ್ಕೆ ಬದಲಾಗಿ ರಾಮಾನುಜರನ್ನು ಪ್ರದಕ್ಷಿಣ ಮಾಡು" ಎಂದು ಹೇಳಿದಳು. ಅದಕ್ಕೆ ಅನುಮಾನಪಡುತ್ತಾ ಇದಾನೆ. ರಾಮಾನುಜರನ್ನು ಪ್ರದಕ್ಷಿಣಮಾಡಿ ಅವರನ್ನೇ ಆಶ್ರಯಿಸಹೇಳಿರಿ" ಎಂದು ಹೇಳಲು, ತಿರುಕ್ಕಚ್ಚಿನಂಬಿಯೂ ಅದನ್ನೇ ಹೇಳಲು, ಯಾದವಪ್ರಕಾಶರು ಆ ರಾಮಾನುಜರ ಮತ, ಆಚಾರ ಇವು

ಗಳ ಸಾಮಂಜಸ್ಯವನ್ನೂ ನೋಡಿ ರಾಮಾನುಜಾಚಾರ್ಯರನ್ನು ಪ್ರದಕ್ಷಿಣಮಾಡಿ ಅವರಿಂದ ಪಂಚಸಂಸ್ಕಾರಗಳನ್ನೂ ಪಡೆದು ತ್ರಿದಂಡಸನ್ಯಾಸವನ್ನೂ ಪರಿಗ್ರಹಿಸಿ, “ಗೋವಿಂದಜೀಯರ್” ಎಂದು ಹೆಸರನ್ನೂ ಅವರಿಂದ ಪಡೆದರು.

---

## ಶ್ರೀ ರಾಮಾನುಜಾಚಾರ್ಯರು ಕಾಂಚೀಪುರದಿಂದ ಶ್ರೀರಂಗಕ್ಕೆ ದಯಮಾಡಿಸಿದುದು.

---

ಶ್ಲೋ || ಶ್ರೀರಂಗೇಶಾರ್ಥವಿಜ್ಞಪ್ತಿಕರಗುರುವರಃ ಪ್ರಾಪ್ಯ ರಂಗಾತ್ತು ಕಾಂಚೀಂ
೨೭ ಸ್ತೋತ್ರೈರ್ವ್ಯಾಮೋಹ್ಯ ಹೃದ್ಯೈರ್ವರದಮಥ ಪರಾಲ್ಲಬ್ಧ ರಾಮಾನುಜಾರ್ಯಃ | ನೀತ್ವಾ ಶ್ರೀರಂಗಮೇನಂ ಪ್ರಮುದಿತಹೃದಯಂ ರಂಗನಾಥಂ ತಥಾರ್ಯಾನ್ ಕೈಂಕರ್ಯಾಚ್ಛಾಸ್ತ್ರದಾನಾದಪಿ ಚ ಸ ವಿದಧೇ ಯಾಮುನಾರ್ಯಾನ್ನುಪೂರ್ಣಾನ್ ||

ಟೀ || ಹೀಗಿರುವಲ್ಲಿ ಶ್ರೀರಂಗದಲ್ಲಿ ಆಳವಂದಾರ್ರ ಶಿಷ್ಯರುಗಳು “ನಮ್ಮ ಆಚಾರ್ಯರ ಮನೋರಥ ಪೂರ್ತಿ ಇನ್ನೂ ಆಗಲಿಲ್ಲವಲ್ಲಾ. ರಾಮಾನುಜಾಚಾರ್ಯರು ಇಲ್ಲಿ ದಯಮಾಡಿಸಿ ಶ್ರೀರಂಗನಾಥನ ಸರ್ವವಿಧ ಕೈಂಕರ್ಯವನ್ನೂ ನಡಿಸುವುದು, ಉಭಯವೇದಾಂತ ಪ್ರವಚನವನ್ನು ಮಾಡಿ ಚೇತನೋಜ್ಜೀವನವನ್ನು ಮಾಡುವುದು ಇವುಗಳಿಂದ ನಮ್ಮ ಯಾಮುನಾಚಾರ್ಯರ ಮನೋರಥವು ಪೂರ್ತಿಯಾಗುವುದೆಂದೂ ಆಲೋಚಿಸಿ ರಾಮಾನುಜಾಚಾರ್ಯರನ್ನು ಕರದುಕೊಂಡು ಬರುವುದಕ್ಕೋಸ್ಕರ “ತಿರುವರಂಗಪ್ಪೆರುಮಾಳರೈಯರ್” ಎಂಬವರನ್ನು ಕಳುಹಿಸಲು, ಅವರು ಕಾಂಚೀಪುರಕ್ಕೆ ದಯಮಾಡಿಸಿ, ರಾಮಾನುಜಾಚಾರ್ಯರನ್ನು ಕಳುಹಿಸುವುದಕ್ಕೆ ಸ್ವಲ್ಪವೂ ಇಷ್ಟಪಡದೇ ಇರುವ ವರದರಾಜರನ್ನು, ಅರ್ಥದಿಂದಲೂ ಗಾನದಿಂದಲೂ ಮನೋಹರವಾದ ಸ್ತೋತ್ರಗಳಿಂದಲೂ ಮರುಳು ಮಾಡಿ “ನೀವು ಏನು ಕೇಳಿದರೂ ಅದನ್ನು ಕೊಟ್ಟುಬಿಡುತ್ತೇನೆ” ಎಂದು ಅವರಿಂದ ಮೊದಲು ವರವನ್ನು ಪಡದು, ಅನಂತರ “ರಾಮಾನುಜಾಚಾರ್ಯರನ್ನು ನನಗೆ ಕೊಡಬೇಕು” ಎಂದು ಕೇಳಲು, ಮನಸ್ಸಿಲ್ಲದಿದ್ದರೂ ಆಡಿದ ಮಾತಿಗೆ ತಪ್ಪುವುದಕ್ಕೆ ಅವಕಾಶವಾಗದೇ ವರದರಾಜರು ರಾಮಾನುಜರನ್ನು ಅವರ ವಶಕ್ಕೆ ಕಳು

ಹಿಸಿಕೊಡಲು, ಅವರು ಶ್ರೀರಂಗಕ್ಕೆ ಕರೆದುಕೊಂಡು ಹೋಗಿ, ಶ್ರೀರಂಗನಾಥನನ್ನು ಸರ್ವವಿಧ ಕೈಂಕರ್ಯಗಳಿಂದಲೂ, ಅಲ್ಲಿರುವ ಸರ್ವಜನರನ್ನೂ ಉಭಯವೇದಾನ್ತಪ್ರವಚನದಿಂದಲೂ, ಸಂತುಷ್ಟರನ್ನಾಗಿ ಮಾಡಿ, ಅದರಿಂದ ತಮ್ಮ ಆಚಾರ್ಯರಾದ ಆಳವಂದಾರ ಮನೋರಥವನ್ನು ಪೂರ್ತಿ ಮಾಡಿದರು.

## ಶ್ರೀ ರಾಮಾನುಜಾಚಾರ್ಯರು ಐದು ಆಚಾರ್ಯರಿಂದಲೂ ವಿಶೇಷಾರ್ಥಗಳನ್ನು ಸಂಗ್ರಹಿಸಿದುದು.

---

ಶ್ಲೋ || ಸಂಸ್ಕಾರಾನ್ಪಂಚ ಲೇಭೇ ಸ ತು ವಿಮಲಮಹಾಪೂರ್ಣವರ್ಯಪ್ರಸಾದಾ
೭೭ ದ್ಗೋಷ್ಠೀಪೂರ್ಣಾಚ್ಚ ಲೇಭೇ ಪ್ರಪದನಮುದಿತಾದಂತ್ಯಪದ್ಯಾರ್ಥಜಾ
ತಮ್ | ಲೇಭೇ ಮಾಲಾಧರಾರ್ಯಾಚ್ಛಠರಿಪುಫಣಿತೇರರ್ಥಜಾತಂ ರಹ
ಸ್ಯಂ ಲೇಭೇ ಶ್ರೀಶೈಲಪೂರ್ಣಾತ್ಪ್ರಥಮಕವಿಕೃತೇರರ್ಥಜಾತಂ ತು ಹಾ
ರ್ದಮ್ ||

ಶ್ಲೋ || ಶ್ರೀರಂಗೇಶಾರ್ಥವಿಜ್ಞಪ್ತಿಕರಗುರುವರಾದಂತಿಮೋಪಾಯನಿಷ್ಠಾಂ ಲೇ
೭೮ ಭೇ ರಾಮಾನುಜಾರ್ಯೋ ಗುರುಷು ವಿನಿಹಿತಂ ಯಾಮುನಸ್ಯೈವ ಸ್ವಂ ತಮ
ರ್ಥಮ್ | ರಾಜಾ ಲಬ್ಧಸ್ವರಾಜ್ಯಸ್ಸ್ವಪಿತೃಜನಕನಿಹಿತಂ ಮಂತ್ರಿಷು ಸ್ವಂ
ಯಥಾ ಸ್ವಂ ತೇ ತು ಪ್ರಾಪುಸ್ಸ್ವಸತ್ತಾಂ ಗುರುವಚನಕೃತೇರ್ಯಾಮು
ನಾರ್ಯೈಕಲಭ್ಯಾತ್ ||

ಟೀ || ಶ್ರೀರಾಮಾನುಜಾಚಾರ್ಯರು ನಿರ್ಹೇತುಕವಾದ ಆಚಾರ್ಯರ ಕಟಾಕ್ಷದಿಂದ ಅಪ್ರಾರ್ಥಿತವಾಗಿ ತಮಗಾಗಿಯೇ ದಯಮಾಡಿಸಿದ "ಪೆರಿಯನಂಬಿ" ಎಂಬವರ ನಿರ್ದೋಷವಾದ ಅನುಗ್ರಹದಿಂದ ಪಂಚಸಂಸ್ಕಾರಗಳನ್ನು ಪಡೆದರು. "ತಿರುಕ್ಕೋಟ್ಟಿಯೂರ್ ನಂಬಿ" ಎಂಬವರಲ್ಲಿ ಹದಿನೆಂಟಾವರ್ತಿ ಹೋಗಿ ಅವರ ಶುಶ್ರೂಷೆ ಮಾಡಿ ಅದರಿಂದ ಅತ್ಯಂತ ಸಂತುಷ್ಟರಾದ ಅವರಿಂದ ಚರಮಶ್ಲೋಕಾರ್ಥವನ್ನು ಪಡೆದರು. "ತಿರುಮಾಲೈಯಾಂಡಾನ್" ಎಂಬವರಲ್ಲಿ ತಿರುವಾಯ್ ಮೊಳಿಯ (ಭಗವದ್ವಿಷಯ) ರಹಸ್ಯಾರ್ಥಗಳನ್ನು ಕೇಳಿದರು. "ಪೆರಿಯತಿರುಮಲೈನಂಬಿ" ಎಂಬವರಿಂದ ಶ್ರೀರಾಮಾಯಣದ ಸಾರಾರ್ಥಗಳನ್ನು ಕೇಳಿದರು.

" ತಿರುವರಂಗಪ್ಪೆರುಮಾಳರೈಯರ್ " ಎಂಬವರಿಂದ ನಾಲ್ಕು ಸಾವಿರ ಪ್ರಬಂಧಗಳನ್ನೂ ಚರಮಪರ್ವನಿಷ್ಠೆ ಅಂದರೆ ಆಚಾರ್ಯನೇ ಉಪಾಯೋಪೇಯಗಳೆಂಬ ಅರ್ಥವನ್ನು ಪಡದರು. ಹೀಗೆ ಯಾಮುನಾಚಾರ್ಯರಿಂದ ತಮ್ಮ ಶಿಷ್ಯರಾದ ಈ ಐವರಲ್ಲಿಯೂ ರಾಮಾನುಜಾಚಾರ್ಯರಿಗೋಸ್ಕರವೇ ಉಪದೇಶ ಮಾಡಿ ಇಡಲ್ಪಟ್ಟಿದ್ದ ಅರ್ಥವಿಶೇಷಗಳನ್ನು ರಾಮಾನುಜಾಚಾರ್ಯರು ಪಡದದ್ದು ಹೇಗಾಯಿತೆಂದರೆ—ಒಬ್ಬ ಮುದುಕನಾದ ದೊರೆಯು ತನ್ನ ಶರೀರವನ್ನು ಬಿಡುವಾಗ ತನ್ನ ಬಾಲನಾದ ರಾಜಕುಮಾರನಿಗೆ ಸಲ್ಲಿಸುವುದಕ್ಕಾಗಿ ಆಪ್ತರಾದ ಮಂತ್ರಿಗಳಲ್ಲಿ ತನ್ನ ರತ್ನ, ಆಭರಣ, ಮೂಲಧನ, ಮುಂತಾದುದನ್ನು ಕೊಟ್ಟಿರಲು ರಾಜಪುತ್ರನು ದೊಡ್ಡವನಾಗಿ ಬುದ್ಧಿ ಬಂದಮೇಲೆ ಅವುಗಳನ್ನು ಹೇಗೆ ಪಡೆಯುವನೋ ಹಾಗಾಯಿತು. ಆದರೆ ಈ ರಾಮಾನುಜಾಚಾರ್ಯರು ಅಂಶಪುರುಷರಾಗಿ ಅವತರಿಸಿ ತಾವೇ ಸರ್ವಜ್ಞರಾಗಿದ್ದಾಗ್ಯೂ " ಸಂಪ್ರದಾಯಪೂರ್ವಕವಾಗಿ ಬಂದ ಅರ್ಥಗಳನ್ನೇ ಇತರರಿಗೆ ಉಪದೇಶ ಮಾಡಬೇಕೇ ಹೊರತು ತನಗೆ ತೋರಿದ ಅರ್ಥಗಳನ್ನು ಹೇಳಬಾರದು " ಎಂಬದನ್ನು ಎಲ್ಲರಿಗೂ ತಿಳಿಸುವುದಕ್ಕೋಸ್ಕರವೇ ಆಚಾರ್ಯಮುಖೇನ ಬಂದ ಅರ್ಥಗಳನ್ನು ವಿಶ್ವಾಸದಿಂದ ಗ್ರಹಿಸಿದರು. ದ್ರೋಣಾಚಾರ್ಯರಲ್ಲಿ ಸಾಕ್ಷಾತ್ತಾಗಿ ಧನುರ್ವಿದ್ಯಾಭ್ಯಾಸ ಮಾಡದಿದ್ದರೂ ಮಣ್ಣಿನಿಂದ ದ್ರೋಣಾಚಾರ್ಯರನ್ನು ಮಾಡಿಟ್ಟುಕೊಂಡು ಅವರಲ್ಲಿ ಗುರುಭಕ್ತಿ ಮಾಡಿದ್ದರಿಂದ ಅರ್ಜುನನಿಗಿಂತಲೂ ಸಮರ್ಥನಾದ ಏಕಲವ್ಯನೆಂಬ ಬೇಡರವನೋಪಾದಿಯಲ್ಲಿ ಯಾಮುನಾಚಾರ್ಯರಲ್ಲಿ ಸಾಕ್ಷಾತ್ತಾಗಿ ಓದದೇ ಇದ್ದರೂ ಅವರಲ್ಲಿ ಇವರಿಗೆ ಇರುವ ಭಕ್ತಿಯಿಂದಲೇ ಸಕಲಾರ್ಥಗಳನ್ನೂ ತಿಳಿದಿರುವ ರಾಮಾನುಜಾಚಾರ್ಯರ ಸಂಬಂಧದಿಂದ ಈ ಐವರೂ ಸ್ವರೂಪಸತ್ತೆಯನ್ನು ಪಡದರು. ಮತ್ತು ಸ್ವಾಚಾರ್ಯರ ಅಪ್ಪಣೆಯನ್ನು ನಡಿಸಿದುದರಿಂದಲೂ ಕೃತಾರ್ಥರಾದರು.

---

## ಇನ್ನು ಶ್ರೀ ರಾಮಾನುಜಾಚಾರ್ಯರ ಶಿಷ್ಯರುಗಳು.

---

ಶ್ಲೋ || ಕೂರೇಶಶ್ಶಾಂಧ್ರಪೂರ್ಣೋ ದಶರಥತನಯೋ ಯಾದವೋ ನಂತಸೂರಿ
೭೪ ಗೋವಿಂದಸ್ಸರ್ವವೇತ್ತಾ ಗುರುರಪಿ ಕುರುಕೇಶಾರ್ಯನಾಮಾ ಶಠಾಸ್ಯೇ|

ತಚ್ಛಿಷ್ಯಾಸ್ಸಪ್ತತಿಸ್ತೇ ಚತುರಧಿಕತರಾಸ್ಸರ್ವ ಏವಾಂತರಂಗಾಶ್ಶಾಂತಾ
ದಾಂತಾ ವಿರಕ್ತಾಸ್ಸಕಲಮಿತಿವಿದ ಶ್ಚಾಂತಿಮೋಪಾಯನಿಷ್ಠಾಃ ||

ಟೀ || ಕೂರತ್ತಾಳ್ವಾರ್, ವಡುಹನಂಬಿ, ಮುಧಲಿಯಾಂಡಾರ್, ಗೋವಿಂದಜೀಯರ್, ಅನಂದಾಳ್ವಾರ್, ಎಂಬಾರ್, ಅರುಳಾಳಪ್ಪೆರುಮಾಳೆಂಬೆರುಮಾನಾರ್, ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್ ಇವರೇ ಮೊದಲಾದ ಎಪ್ಪತ್ತುನಾಲ್ಕು ಸಿಂಹಾಸನಾಧಿಪತಿಗಳಾದ ಆಚಾರ್ಯಪುರುಷರು ಈ ರಾಮಾನುಜಾಚಾರ್ಯರ ಶಿಷ್ಯರುಗಳು. ಇವರೆಲ್ಲರೂ ಮಹಾಜಿತೇಂದ್ರಿಯರಾಗಿಯೂ, ಮನೋಜಯವುಳ್ಳವರಾಗಿಯೂ, ಪರಮವೈರಾಗ್ಯಸಂಪನ್ನರಾಗಿಯೂ, ಸಕಲಪ್ರಮಾಣ ಪ್ರಮೇಯಗಳನ್ನರಿತವರಾಗಿಯೂ, ಹೀಗಿದ್ದರೂ ರಾಮಾನುಜಾಚಾರ್ಯರಲ್ಲಿ ಅತ್ಯಂತಾಂತರಂಗರಾಗಿಯೂ, ಆಚಾರ್ಯನೇ ಉಪಾಯೋಪೇಯಗಳೆಂಬ ಚರಮೋಪಾಯನಿಷ್ಠರಾಗಿಯೂ ಇದ್ದರು. ಇವರುಗಳಲ್ಲದೆ ಇಂತಹ ಗುಣಗಳುಳ್ಳ ಏಳುನೂರು ಸನ್ಯಾಸಿಗಳೂ, ಹನ್ನೆರಡುಸಾವಿರ ಏಕಾಂಗಿಗಳೂ ಇನ್ನೂ ಅನೇಕಜನ ಶಿಷ್ಯರುಗಳಿದ್ದರು.

ಶ್ರೀ ರಾಮಾನುಜಾಚಾರ್ಯರು ರಚಿಸಿರುವ ಗ್ರಂಥಗಳು.

ಶ್ಲೋ || ಶ್ರೀಭಾಷ್ಯಂ ಬ್ರಹ್ಮಸೂತ್ರೇಷ್ವತನುತ ವಿತತಂ ಸಂಕ್ಷಿಪನ್ದೀಪಸಾರಾವೇ
೮೦ ಕೋಪನ್ಯಾಸಭಂಗ್ಯಾ ಶ್ರುತಿಶತವಚಸಾಮರ್ಥತಸ್ಸಂಗ್ರಹಂ ಚ | ಗೀತಾ
ಯಾ ಭಾಷ್ಯಮೇಕಂ ಪ್ರಪದನಮನುರಾಡರ್ಥತೋ ಗದ್ಯಬಂಧಾನ್ನಿತ್ಯಂ
ಚಾರಾಧನಾರ್ಥೇ ವ್ಯತನುತ ಭಗವಾನ್ಲಕ್ಷ್ಮಣಾರ್ಯೋ ದಯಾಳುಃ ||

ಟೀ || ವ್ಯಾಸಪ್ರಣೀತವಾದ ಬ್ರಹ್ಮಸೂತ್ರಕ್ಕೆ ವಿಸ್ತಾರವಾದ ವ್ಯಾಖ್ಯಾನರೂಪವಾದ "ಶ್ರೀಭಾಷ್ಯ" ಒಂದು, ಶ್ರೀಭಾಷ್ಯವು ಅತಿ ವಿಸ್ತಾರವಾದುದರಿಂದ ಆ ಅರ್ಥವೆಲ್ಲಾ ಸುಖವಾಗಿ ತಿಳಿಯುವುದಕ್ಕೋಸ್ಕರ ಪ್ರತಿಯೊಂದು ಅಧಿಕರಣಗಳಲ್ಲೂ ವಿಷಯ, ಸಂಶಯ, ಪೂರ್ವಪಕ್ಷ, ಯುಕ್ತಿ, ಸಿದ್ಧಾಂತ, ಸೂತ್ರಾರ್ಥಗಳನ್ನು ಮಾತ್ರ ಸಂಗ್ರಹವಾಗಿ ತಿಳಿಸುವ "ವೇದಾನ್ತದೀಪ" ಎಂಬ ಅದೇ ಬ್ರಹ್ಮಸೂತ್ರ ವ್ಯಾಖ್ಯಾನ ಒಂದು, ಸೂತ್ರಾರ್ಥಗಳನ್ನು ಗರ್ಭೀಕರಿಸಿ ವಿಶೇಷವಾಗಿ ಉಪನಿಷದ್ವಾಕ್ಯಗಳಿಗೆ ವ್ಯಾಖ್ಯಾನರೂಪವಾದ "ವೇದಾನ್ತಸಾರ" ಎಂಬ

ಅದೇ ಸೂತ್ರವ್ಯಾಖ್ಯಾನ ಒಂದು, ಸಕಲ ಶ್ರುತಿ, ಸ್ಮೃತಿ, ಸೂತ್ರ ಪುರಾಣಾದಿ ಸಿದ್ಧವಾದ ವಿಶಿಷ್ಟಾದ್ವೈತ ಸಿದ್ಧಾನ್ತದ ರಹಸ್ಯಗಳೆಲ್ಲವನ್ನೂ ಪ್ರತಿಪಾದಿಸುವ ಒಂದೇ ಉಪನ್ಯಾಸ ರೂಪವಾದ "ವೇದಾರ್ಥಸಂಗ್ರಹ" ಒಂದು, ಸರ್ವಶಾಸ್ತ್ರ ಮಯವಾದ ಭಗವದ್ಗೀತೆಗೆ ಭಾಷ್ಯ ಒಂದು, ಶರಣಾಗತಿಮಂತ್ರಕ್ಕೆ ವಿಸ್ತಾರವಾದ ವ್ಯಾಖ್ಯಾನರೂಪವಾದ "ಶರಣಾಗತಿಗದ್ಯ" ಒಂದು, ಅದನ್ನೇ ಸಂಗ್ರಹವಾಗಿ ಹೇಳುವ "ಶ್ರೀರಂಗಗದ್ಯ" ಒಂದು, ಅದರಲ್ಲೇ ಉತ್ತರಖಂಡಾರ್ಥವನ್ನು ವಿಸ್ತಾರವಾಗಿ ಹೇಳುವ ನಿತ್ಯವೂ ಅನುಸಂಧಾನಕ್ಕಾಗಿ "ವೈಕುಂಠಗದ್ಯ" ಒಂದು, ನಿತ್ಯವೂ ಭಗವಂತನನ್ನು ಆರಾಧಿಸುವ ಕ್ರಮವನ್ನು ಬೋಧಿಸುವ "ನಿತ್ಯ" ಎಂಬ ಗ್ರಂಥ ಒಂದು, ಹೀಗೆ ಒಂಭತ್ತು ಗ್ರಂಥಗಳನ್ನು ಮಹಾ ಜ್ಞಾನಿಗಳಾಗಿಯೂ, ಪರಮ ದಯಾಳುಗಳಾಗಿಯೂ ಇರುವ ರಾಮಾನುಜಾಚಾರ್ಯರು ಚೇತನೋಜ್ಜೀವನಾರ್ಥವಾಗಿ ಅನುಗ್ರಹಿಸಿದರು.

## ಶ್ರೀ ರಾಮಾನುಜಾಚಾರ್ಯರು ದಿಗ್ವಿಜಯಮಾಡಿ "ಭಾಷ್ಯಕಾರರು" ಎಂಬ ಹೆಸರನ್ನು ಪಡೆದದ್ದು.

ಶ್ಲೋ || ಯಾತ್ರಾವ್ಯಾಜೇನ ತತ್ತಜ್ಜನಪದನಿವಹಾ ನ್ಪಾವಯನ್ಸೃಷ್ಟಿದಾಸ್ತ್ಯ
೬೧ ದ್ವಾಗ್ದೇವೀಪೀಠೇ ಸ ವಾಣ್ಯಾ ಸುವಿದಿತಮಹಿಮಾ ಭಾಷ್ಯಕೃತ್ಸಂಜ್ಞಿತೋಽ
ಭೂತ್ | ಪ್ರಾದಕ್ಷಿಣ್ಯಂ ಸಭೂಮೇರ್ವ್ಯತನುತ ಯತಿನಾ ಯಾದವೇನಾ
ರ್ಪಿತಂ ಯತ್ಪ್ರಾಯಶ್ಚಿತ್ತಪ್ರಸಂಗೇದ್ದದದಿವ ತದಿದಂ ಭೂಮಿದೇವ್ಯೈ
ಪುನಶ್ಚ ||

ಟೀ || ಯಾತ್ರೆ ಮಾಡುವದೆಂಬ ನೆವದಿಂದ ಆಯಾಯ ದೇಶದಲ್ಲಿರುವ ಜನಗಳನ್ನು ಜ್ಞಾನೋಪದೇಶದಿಂದಲೂ, ತಿಳಿದುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲದವರನ್ನು ತಮ್ಮ ಕಟಾಕ್ಷಗಳಿಂದಲೂ ಪರಿಶುದ್ಧರನ್ನಾಗಿ ಮಾಡುತ್ತಾ ಕಾಶ್ಮೀರ ದೇಶದಲ್ಲಿ ಪ್ರಸಿದ್ಧವಾದ ಸರಸ್ವತೀ ಪೀಠದಲ್ಲಿ ಸಾಕ್ಷಾತ್ಸರಸ್ವತೀ ದೇವಿಯಿಂದ "ಕಪ್ಯಾಸಂ" "ಸತ್ಯಂ ಜ್ಞಾನಂ" ಇತ್ಯಾದಿ ಶ್ರುತ್ಯರ್ಥಗಳನ್ನೂ, ವಿಶಿಷ್ಟಾದ್ವೈತದ ಅಂತರಂಗವಾದ ಗ್ರಂಥಗ್ರಂಥಿಗಳನ್ನೂ ಪರೀಕ್ಷಿಸಲ್ಪಟ್ಟು, "ಭಾಷ್ಯಕಾರರು" ಎಂಬ ಹೆಸರು ನಿಮಗೇ ಸಲ್ಲತಕ್ಕದ್ದು ಎಂದು ಬಹಳ ತೃಪ್ತಿಯಿಂದ

ಹೇಳಲ್ಪಟ್ಟದ್ದರಿಂದ ಅದು ಮೊದಲುಗೊಂಡು "ಭಾಷ್ಯಕಾರರು" ಎಂದೇ ಇವರನ್ನು ಎಲ್ಲರೂ ಹೇಳುತ್ತಿದ್ದರು. ರಾಮಾನುಜಾಚಾರ್ಯರು ಹೀಗೆ ಆಸೇತುಹಿಮಾಚಲ ಭೂಪ್ರದಕ್ಷಿಣ ಮಾಡಿಕೊಂಡು ಪುನಃ ಶ್ರೀರಂಗಕ್ಕೆ ದಯಮಾಡಿಸಿದರು. ಸ್ವತಃ ಶುದ್ಧರಾದ ಇವರು ಏತಕ್ಕೋಸ್ಕರ ಭೂಪ್ರದಕ್ಷಿಣ ಮಾಡಬೇಕಾಗಿತ್ತು? ಅಂದರೆ ಕವಿಯು ಅದನ್ನು ಉತ್ಪ್ರೇಕ್ಷಿಸುತ್ತಾನೆ. ಯಾದವಪ್ರಕಾಶರು ಈ ರಾಮಾನುಜಾಚಾರ್ಯರನ್ನು ಆಶ್ರಯಿಸುವುದಕ್ಕೆ ಮೊದಲು ಪ್ರಾಯಶ್ಚಿತ್ತಕ್ಕಾಗಿ ಭೂಮಿಯನ್ನು ಪ್ರದಕ್ಷಿಣ ಮಾಡುವುದಕ್ಕೆ ಬದಲಾಗಿ ರಾಮಾನುಜಾಚಾರ್ಯರನ್ನಲ್ಲವೇ ಪ್ರದಕ್ಷಿಣ ಮಾಡಿದ್ದು. ಆದುದರಿಂದ ಯಾದವಪ್ರಕಾಶರು ಭೂದೇವಿಗೆ ಕೊಡಬೇಕಾಗಿದ್ದ ಪ್ರದಕ್ಷಿಣವೆಂಬ ಸ್ವತ್ತನ್ನು ರಾಮಾನುಜಾಚಾರ್ಯರಲ್ಲಿ ಕೊಟ್ಟಿದ್ದರು. ಈಗ ರಾಮಾನುಜಾಚಾರ್ಯರು ತಮ್ಮಲ್ಲಿದ್ದ ಆ ಭೂದೇವಿಯ ಸ್ವತ್ತನ್ನು ಭೂದೇವಿಗೇನೇ ಸಲ್ಲಿಸುವುದಕ್ಕೋಸ್ಕರವೋ ಎಂಬಂತೆ ಭೂಪ್ರದಕ್ಷಿಣ ಮಾಡಿದರು.

## ಶ್ರೀರಾಮಾನುಜಾಚಾರ್ಯರು ಶ್ರೀರಂಗವನ್ನು ಬಿಟ್ಟು ಈ ಕರ್ಣಾಟಕ ದೇಶಕ್ಕೆ ದಯಮಾಡಿಸುವುದಕ್ಕೆ ಕಾರಣ.

ಶ್ಲೋ || ರಂಗಕ್ಷೇತ್ರೇಥ ರಾಮಾನುಜಮುನಿಜಲದೇ ವರ್ಷತಿ ಪ್ರಾಣಿಸಸ್ಯಾನ್ಯಾ
೮೨ ಸಾರ್ತೈರ್ವೇದಮೂರ್ಧದ್ವಯವಿವೃತಿಮಯೈಶ್ಚಂಡಪೌರಸ್ತ್ಯವಾತಃ |
ಚೋಳೋಭೂತ್ಕ್ರೂರ ಬುದ್ಧಿಶ್ಶಿವಪರತರತಾಂ ಲೇಖಹಸ್ತಾಕ್ಷರಾರ್ಥೀ
ಭಾಗ್ಯಾದುತ್ತಾನಕರ್ಣಾಟಕಜನರಚಿತಾದದ್ಭುತಾತ್ಪ್ರಾಗ್ಭವೀಯಾತ್ ||

ಟೀ|| ಶ್ರೀರಂಗಕ್ಷೇತ್ರವೆಂಬುದೇ ಕ್ಷೇತ್ರ (ಗದ್ದೆ); ಅಲ್ಲಿರತಕ್ಕ ಜನಗಳೇ ಭತ್ತದಪೈರುಗಳು. ಶ್ರೀರಾಮಾನುಜಾಚಾರ್ಯರೇ ಜಲಭರಿತವಾದ ಮೇಘ; ಅವರು ಹೇಳುವ ಸಂಸ್ಕೃತ ದ್ರಾವಿಡ ವೇದಾಂತ ವ್ಯಾಖ್ಯಾನಗಳೇ ದೊಡ್ಡಮಳೆ; ಹೀಗೆ ಮಳೆ ಸುರಿಯುತ್ತಿದ್ದ ಮೇಘಕ್ಕೆ ಚೋಳರಾಜನೇ. ಪೂರ್ವದಿಂದ ಪಶ್ಚಿಮೋತ್ತರಕ್ಕೆ ಬೀಸುವ ಬಿರುಗಾಳಿಯಾದನು. ಅಂದರೆ ಬಿರುಗಾಳಿಯು ಯಾವ ಕಡೆಯಿಂದ ಯಾವಕಡೆಗೆ ಬೀಸುವುದೊ ಆ ಕಡೆಯಿಂದ ಆ ಕಡೆಗೆ ಮೋಡವೂ ತೂರಿಹೋಗುವುದು. ಆಕಡೆ ಮಳೆಯೂ ಸುರಿಯುವುದು. ಪ್ರಕೃತದಲ್ಲಿ ಚೋಳನ ಬಾಧೆಯಿಂದ

ರಾಮಾನುಜಾಚಾರ್ಯರು ಶ್ರೀರಂಗವನ್ನು ಬಿಟ್ಟು ಈ ಕರ್ಣಾಟಕದೇಶಕ್ಕೆ ಬಂದು ಇಲ್ಲಿಯೂ ಗ್ರಂಥಪ್ರವಚನಗಳನ್ನು ಮಾಡುವಂತಾಯಿತು ಎಂದರ್ಥ. ಬಿರುಗಾಳಿ ಬೀಸುವದಕ್ಕೆ ಏನು ಕಾರಣವಂದರೆ, ಬೋರೆಯಾದ ಮೇಲು ದೇಶದವರು ಪೂರ್ವಜನ್ಮದಲ್ಲಿ ಮಾಡಿದ ಆಶ್ಚರ್ಯವಾದ ಪುಣ್ಯವೇಕಾರಣ ಆದರೆ ರಾಮಾನುಜಾಚಾರ್ಯರು ಚೋಳನಿಂದ ಯಾತಕ್ಕೆ ಈ ಕಡೆಗೆ ಬರಬೇಕಾಯಿತು ಅಂದರೆ ಅವನು "ಶಿವಾತ್ಪರತರಂ ನಾಸ್ತಿ" ಎಂದು ಶಿವನಿಗಿಂತಲೂ ಪರಾತ್ಪರವಸ್ತು ಯಾವದೂ ಇಲ್ಲ ಎಂಬರ್ಥವುಳ್ಳ ವಾಕ್ಯವನ್ನು ಬರದು ಇದಕ್ಕೆ ಸಂಮತಿಯನ್ನು ಕೊಡುವ ರಾಮಾನುಜಾಚಾರ್ಯರ ರುಜುವನ್ನು ತೆಗೆದುಕೊಂಡು ಬರಬೇಕೆಂದು ಆಳುಗಳಿಗೆ ಅಪ್ಪಣೆಮಾಡಿ ಇವರಲ್ಲಿಗೆ ಕಳುಹಿಸಿದ್ದನು. ಆಗ ಇವರಿಗೆ ಏನು ಅಪಾಯಸಂಭವಿಸುವುದೋ ಎಂದು ಇವರ ಶಿಷ್ಯರಾದ ಕೂರತ್ತಾಳ್ವಾನು ಇವರ ತ್ರಿದಂಡಕಾಷಾಯಗಳನ್ನು ತಾವು ಧರಿಸಿಕೊಂಡು ಆಚಾರ್ಯರಾದ ಪೆರಿಯನಂಬಿಯವರೊಡನೆ ಚೋಳನ ಸಭೆಗೆ ಹೊರಟುಹೋದರು. ಅದೇ ಸಮಯದಲ್ಲಿ ರಾಮಾನುಜಾಚಾರ್ಯರೂ ಬಿಳೀ ವಸ್ತ್ರಗಳನ್ನು ಧರಿಸಿ ಅವರ ಕೆಲವು ಶಿಷ್ಯರೊಡನೆ ಶ್ರೀರಂಗವನ್ನು ಬಿಟ್ಟು ಪಶ್ಚಿಮಕ್ಕೆ ಪ್ರಯಾಣಹೊರಟರು.

ಶ್ಲೋ॥ ಗತ್ವಾ ರಂಗಾತ್ಪ್ರತೀಚೀಂ ಶ್ರಮಗಳಿತಗತ್ಯೈಃ ಕ್ಷುತ್ಪಿಪಾಸಾಪರೀತ್ಯೈ ರ್ವ
೮೩ ರ್ಷೈರ್ವಾತೈಶ್ಚ ಧೂತೈಸ್ಸಹ ಸ ಸಹಚರೈರಂಧಕಾರೇತಿದೂರಾತ್ । ದೃಷ್ಟ್ವಾ ವಹ್ನಿಂ ಜ್ವಲಂತಂ ಜನವಸತಿಮಿಹಾಶಂಕಮಾನೋಥ ಭಿಲ್ಲೈಃ ಫಲ್ಲ್ಯಾಂ ತತ್ರೋಪಹೂತೋ ಜನರವವಿದಿತಃ ಪ್ರಾಪ ತಾಂ ಲಕ್ಷ್ಮಣಾರ್ಯಃ ॥

ಟೀ॥ ಶ್ರೀರಾಮಾನುಜಾಚಾರ್ಯರು ಸುಮಾರು ಸಲವತ್ತೈದು ಜನ ಶಿಷ್ಯರೊಡಗೂಡಿ ಶ್ರೀರಂಗದಿಂದ ಪಶ್ಚಿಮಕ್ಕೆ ಹೊರಟು ಬಹಳದೂರ ಹೋಗಿ ಹಶಿವು, ಬಾಯಾರಿಕೆ, ಬಳಲಿಕೆ, ಮಳೆ, ಗಾಳಿ ಇವುಗಳಿಂದ ಕಂಗೆಟ್ಟು ರಾತ್ರಿ ಕತ್ತಲೆಯಿಂದ ಮಾರ್ಗವೂ ತಿಳಿಯದೇ ಒಂದುಕಡೆ ದೂರದಲ್ಲಿ ಬೆಂಕಿಯನ್ನು ಕಂಡು ಇಲ್ಲಿ ಜನಗಳಿರಬಹುದೆಂದೂಹಿಸಿ, ಆ ಕಡೆಗೆ ಹೋಗುತ್ತಿರಲು, ಅಲ್ಲಿದ್ದ ಕೆಲವರು ಬೇಡರು, "ಬ್ರಾಹ್ಮಣರ ಧ್ವನಿಯಂತೆ ಕೇಳಿಸುವುದು. ಅವೇಳೆಯಾಗಿದೆ" ಎಂದು ಹೇಳಿ

ಇವರ ಹತ್ತಿರಕ್ಕೆ ಬಂದು ಬೇಲಿಯನ್ನು ಕಿತ್ತು ಮಾರ್ಗಮಾಡಿ ತಮ್ಮ ಗುಡಿಸಲಿನ ಒಳಕ್ಕೆ ಕರೆದುಕೊಂಡು ಹೋಗಲು, ಅದರೊಳಗೆ ಎಲ್ಲರೂ ಸೇರಿದರು.

ಶ್ಲೋ || ವಾಸೋ ವಿಪ್ಲೋಷ್ಯ ವಹ್ನೌ ತನುಮತನುಜಡಾಂ ತಾಪಯಿತ್ವಾ ತತ
೮೪ ಸ್ತೈರ್ದತ್ತೈರ್ಯವಾನ್ನೈಸ್ಸ್ವತಪ್ತೈಸ್ಸಮಧುಕಣಿಶಕ್ಯೈಃ ಕಿಂಚಿದಾಪ್ಯಾಯ್ಯ
ವಹ್ನಿಮ್ | ಔದಾರ್ಯಂ ತತ್ಕೃತಜ್ಞಾ ಇವ ತದಸು ಚ ತೇ ಭಿಲ್ಲತೋ ಪ್ಯಾ
ದ್ಯವೃತ್ಯಾ ಸರ್ವಕ್ಲೇಶಾಪಹನಾತ್ರ್ಯ ಸ್ವಯಮವಿದಿತಯಾ ಸಿದ್ಧಯಾ
ಸಂಗೃಹೀತಾಃ ||

ಟೀ || ಅಲ್ಲಿ ಮಳೆಯಿಂದ ನೆನದುಹೋಗಿದ್ದ ಬಟ್ಟೆಗಳನ್ನು ಬೆಂಕಿಯಲ್ಲಿ ಕಾಯಿಸಿ ಆರಿಸಿಕ್ಕೊಂಡು, ಛಳಿಯಿಂದ ಬೆರತುಹೋಗಿದ್ದ ತಮ್ಮ ಶರೀರಗಳನ್ನೂ ಬೆಂಕಿಯಲ್ಲಿ ಕಾಯಿಸಿ ದೇಹವನ್ನು ಸ್ವಲ್ಪ ಸ್ವಾಧೀನಮಾಡಿಕ್ಕೊಂಡು, ಅವರು ತಂದುಕೊಟ್ಟ ಜೋಳದ ತೆನೆಗಳನ್ನು ಆ ಬೆಂಕಿಯಲ್ಲಿ ಸುಟ್ಟು ಜೇನುತುಪ್ಪದಲ್ಲಿ ಕಲಸಿ, ಹೀಗೆ ತಮಗೆ ಹೊರಗಿನ ಅಗ್ನಿಯು ಉಪಕಾರಮಾಡಿದ್ದರಿಂದ ಅಗ್ನಿಜಾತಿ ಯಲ್ಲಿಯೇ ಕೃತಜ್ಞತೆಯಿಂದಲೋ ಎಂಬಂತೆ, ತಮ್ಮ ಜಠರಾಗ್ನಿಯನ್ನು ಅದರಾದ ಸ್ವಲ್ಪ ಆಪ್ಯಾಯನಮಾಡಿ, ತಮ್ಮ ಕಷ್ಟಗಳನ್ನೆಲ್ಲಾ ಹೇಳುತ್ತಾ ಮಾತನಾಡುತ್ತಿ ರುವಾಗಲೇ ಆ ಬೇಡರಿಗಿಂತಲೂ ದಯಾಶಾಲಿನಿಯಾದ, ಸಮಸ್ತ ಕಷ್ಟಗಳನ್ನೂ ಪರಿಹಾರಮಾಡುವ ನಿದ್ರಾದೇವಿಯಿಂದ ಇವರಿಗೂ ತಿಳಿಯದಂತೆ ಎಲ್ಲರೂ ಆಕ್ರ ಮಿಸಲ್ಪಟ್ಟರು.

ಶ್ಲೋ || ಅನ್ಯೇದ್ಯುರ್ಗ್ರಾಮಮನ್ಯಂ ಸವಿಧಗತಮಮೀ ಪ್ರಾಪಿತಾಸ್ತೈಸ್ತುಭಿಲ್ಲೈಃ
೮೫ ಪ್ರಾಪುಃ ಕಂಚಿದ್ಗೃಹಸ್ಥಂ ಬಹುವಿನಯಗುಣಾ ತತ್ಪ್ರಿಯಾಭ್ಯೇತ್ಯ ನತ್ವಾ|
ಭೋಕ್ತುಂ ಸರ್ವಾನ್ಯಯಾಚೇ ಸಪದಿ ವಿಮೃಶತಃ ಪಾದುಕೇ ಲಕ್ಷ್ಮಣಾ
ರ್ಯಸ್ಯೈಷಾ ಪ್ರಖ್ಯಾಪ್ಯ ತಂ ಚ ಸ್ವಗುರು ಮನುಮತಾ ಭೋಜಯಾ
ಮಾಸ ಭಕ್ತ್ಯಾ ||

ಟೀ || ಅಲ್ಲಿ ಅಡಿಗೆಗೆ ಮತ್ತು ಊಟಕ್ಕೆ ಅವಕಾಶವಿಲ್ಲದುದರಿಂದ ಅಲ್ಲಿಗೆ ಸ್ವಲ್ಪ ದೂರದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನ ಮನೆಗೆ ಇವರನ್ನು ಆ ಬೇಡರು ಕರದುಕ್ಕೊಂಡು ಹೋಗಿ ಬಿಡಲು ಆ ಬ್ರಾಹ್ಮಣನ ಹೆಂಡತಿಯು ಬಹಳ ಭಯಭಕ್ತಿಗಳಿಂದ ಬಂದು ನಮಸ್ಕರಿಸಿ " ನಾನು ಅಡಿಗೆ ಮಾಡುತ್ತೇನೆ. ನೀವೆ ಲ್ಲರೂ ಊಟಮಾಡಬೇಕು " ಎಂದು ಪ್ರಾರ್ಥಿಸಲು, " ಇವಳ ಕೈಯಿಂದ ತಾವು

ಹ್ಯಾಗೆ ಊಟಮಾಡುವದು" ಎಂದು ಇವರು ಅನುಮಾನಪಡಲು, ಆಗ ಅವಳು ಆ ಊರಲ್ಲಿ ಹಿಂದೆ ಯಾವಾಗಲೋ ಮಳೆ ಹೋಗಿಬಿಟ್ಟಿದ್ದಾಗ ತಾನು ಶ್ರೀರಂಗದಲ್ಲಿ ಬಂದು ಸ್ವಲ್ಪ ದಿವಸವಾಸವಾಗಿದ್ದುದನ್ನೂ, ತಾನು ವಾಸವಾಗಿದ್ದ ಮನೆಗೆ ರಾಮಾನುಜಾಚಾರ್ಯರು ಭಿಕ್ಷೆಗೆ ಬರಲು ತಾನು ಅವರಿಗೆ ನಮಸ್ಕಾರಮಾಡಿ, ಅವರಿಂದ ಜ್ಞಾನೋಪದೇಶಪಡದು ಅದು ಮರತುಹೋಗಲು, ಹಾಗೆಯೇ ಮತ್ತೊಂದು ದಿವಸದಲ್ಲೂ ಅದನ್ನೇ ಪುನಃ ಉಪದೇಶಮಾಡಿಸಿಕೊಂಡದುದನ್ನೂ, ಪುನಃ ತಮ್ಮೂರಿಗೆ ಮಳೆಯಾಗಲು ಪ್ರಯಾಣಮಾಡುವಾಗ ರಾಮಾನುಜಾಚಾರ್ಯರಿಗೆ ನಮಸ್ಕಾರಮಾಡಿ, "ನಾನು ನಮ್ಮೂರಿಗೆ ಹೋಗಿಬರುವೆನು ತಮ್ಮ ಜ್ಞಾಪಕಾರ್ಥವಾಗಿ ಏನಾದರೂ ದಯಪಾಲಿಸಬೇಕು" ಎಂದು ಪ್ರಾರ್ಥಿಸೋಣ, ಅವರು ತಮ್ಮ ಪಾದುಕೆಗಳನ್ನು ತನಗೆ ಬಿಜಮಾಡಿಸಿ ಕೊಟ್ಟದ್ದನ್ನೂ ಹೇಳಿ "ನಾನು ರಾಮಾನುಜಾಚಾರ್ಯರ ಶಿಷ್ಯಳು. ಅನುಮಾನಪಡಬೇಡಿರಿ" ಎಂದು ಹೇಳಿದಳು ಆಗ ಬಿಳೀವಸ್ತ್ರವನ್ನುಟ್ಟುಕೊಂಡು ತ್ರಿದಂಡವಿಲ್ಲದೇನೂ ಇರುವ ರಾಮಾನುಜಾಚಾರ್ಯರು ಇವಳನ್ನು ಅಡಿಗೆ ಮಾಡಹೇಳಿ, ಒಬ್ಬ ಶಿಷ್ಯರನ್ನು ಕರದು "ಇವಳು ಮಾಡುವುದನ್ನೂ ಹೇಳುವುದನ್ನೂ ರಹಸ್ಯವಾಗಿ ನೀವು ನೋಡುತ್ತಿದ್ದು ನನಿಗೆ ತಿಳಿಸಬೇಕು" ಎನಲು, ಅವರು ಹಾಗೆಯೇ ನೋಡಿಕೊಂಡಿದ್ದು ಆಮೇಲೆ ಎಲ್ಲರ ಎದುರಿಗೂ ರಾಮಾನುಜಾಚಾರ್ಯರು ಕೇಳಲು, "ಮಡಿ ಉಟ್ಟುಕೊಂಡು ರಾಮಾನುಜಾಚಾರ್ಯರ ಪಾದಾರವಿಂದವೇ ಗತಿ" ಎಂಬದಾಗಿ ಹೇಳಿಕೊಂಡು ಅಡಿಗೆ ಮಾಡಿ ದೇವರಿಗೆ ನಿವೇದನ ಮಾಡಿದಳು. ಆದರೆ ಅದು ದೇವರಾಗಿರಲಿಲ್ಲ. ಕಪ್ಪಾಗಿ ದೊಡ್ಡ ಆಕಾರವಾಗಿತ್ತು ಎಂದು ಹೇಳಿದರು. ಅನಂತರ ಅವಳನ್ನು ಕರದು ಯಾವ ದೇವರಿಗೆ ನಿವೇದನಮಾಡಿದೆ ಎಂದು ಕೇಳಲು, ಅವಳು ರಾಮಾನುಜಾಚಾರ್ಯರ ಪಾದುಕೆಗಳಿಗೆ ನಿವೇದನ ಮಾಡಿದೆ ಎಂದು ಹೇಳಲು, ಆ ಪಾದುಕೆಗಳನ್ನು ತರಹೇಳಿ ಇಲ್ಲಿ ರಾಮಾನುಜಾಚಾರ್ಯರು ಇದ್ದಾರೆಯೆ? ನೋಡಿ ಹೇಳೆನಲು, ಆಕೆಯು ದೀಪಹಚ್ಚಿಕೊಂಡು ಬಂದು ಎಲ್ಲರನ್ನೂ ನೋಡುತ್ತಾ ಬಂದು ರಾಮಾನುಜಾಚಾರ್ಯರನ್ನು ನೋಡಿ ಇವರೇ ರಾಮಾನುಜಾಚಾರ್ಯರು. ತ್ರಿದಂಡಕಾಷಾಯಗಳು ಇಲ್ಲದುದರಿಂದ ಶೀಘ್ರವಾಗಿ ತಿಳಿಯುವುದಿಲ್ಲವೆಂದು ಹೇಳಿ ಆ ಪಾದುಕೆಗಳನ್ನು ರಾಮಾನುಜಾಚಾರ್ಯರ ಪಾದಾರವಿಂದಗಳಿಗೆ ಸಮರ್ಪಿಸಲು ಅದು ಸರಿ

ಯಾಗಿತ್ತು. ಇದೆಲ್ಲವನ್ನೂ ನೋಡಿ ಎಲ್ಲರಿಗೂ ನಂಬಿಕೆ ಹುಟ್ಟಿದಮೇಲೆ "ಇನ್ನು ಎಲ್ಲರೂ ಊಟಮಾಡಿರಿ" ಎಂದು ರಾಮಾನುಜಾಚಾರ್ಯರು ಅಪ್ಪಣೆಮಾಡಿ, ತಾವೂ ಹಣ್ಣು ಹಾಲುಗಳನ್ನು ತರಿಸಿಕೊಂಡು ತಮ್ಮ ದೇವರಿಗೆ ನಿವೇದನಮಾಡಿ ಸ್ವೀಕರಿಸಿದರು.

ಶ್ಲೋ || ಧನ್ಯಾ ಸಾ ಯೈವಮೇತಾನುಪಚರಿತವತೀ ಪಂಚಷೋಪೋಷಿತಾಂ
೮೬ ಸ್ತಾನ್ ಪ್ರಾಪ್ತಂ ತೈರೇವ ಸೌಖ್ಯಂ ನ ಹಿ ಸುಲಭತರಾಸ್ತಾದೃಶಾಸ್ತಾದೃಶಾರ್ಥೇ | ತಸ್ಯಾಸ್ತೇಷಾಂ ಚ ಬಂಧಃ ಪಯಸ ಇವ ಗವಾಂ ಶರ್ಕರಾಯಾಶ್ಚ ನಸ್ಯಾದನ್ಯೇಷಾಮೇವ ಭೋಗ್ಯೋ ಯತ ಇಹ ಭವತಸ್ತೇತ್ವಯಂ ಸರ್ವಭೋಗ್ಯಃ ||

ಟೀ|| ಆ ಮನೆಯ ಹೆಂಗಸೇ ಪರಮಧನ್ಯಳು. ಏತಕ್ಕೆಂದರೆ ಐದು ಆರು ದಿವಸಗಳಿಂದ ಉಪವಾಸವಿದ್ದ ಅಂತಹ ಮಹಾನುಭಾವರುಗಳನ್ನು ಆರಾಧಿಸಿದುದರಿಂದ ಅವಳಂತಿಹ ಧನ್ಯಳು ಯಾರೂ ಇಲ್ಲ. ಅವರುಗಳೇ ಅಂತಹ ಮಹಾ ಸಂತೋಷವನ್ನನುಭವಿಸಿದವರು. ಏತಕ್ಕೆಂದರೆ, ಅಂತಹ ಕಷ್ಟಕಾಲದಲ್ಲೂ ಅಪರಿಚಿತವಾದ ದೇಶದಲ್ಲೂ ಅಂತಹ ಪರಮಾಪ್ತರಾಗಿ ಭಕ್ತರಾಗಿ ಶುದ್ಧರಾಗಿರತಕ್ಕವರು ಅಕಸ್ಮಾತ್ತಾಗಿ ದೊರಕುವರೇ? ಆದರೆ ಅವರಿಬ್ಬರಿಗೂ ಉಂಟಾದ ಸಂಘಟನವನ್ನು ಗೋಕ್ಷೀರವೂ ಕಲ್ಲುಸಕ್ಕರೆಯೂ ಸೇರಿದಂತೆ ಎಂಬದಾಗಿ ಹೇಳೋಣವೆಂದರೆ ಆ ಹೋಲಿಕೆಯು ಸರಿಯಾಗುವುದಿಲ್ಲ. ಏತಕ್ಕೆಂದರೆ ಆ ಹಾಲು ಸಕ್ಕರೆಗಳು ಕುಡಿದವರಿಗೆ ಮಾತ್ರ ಆ ಕಾಲಕ್ಕೆ ಮಾತ್ರ ಭೋಗ್ಯವಾಗಿರುವುದು. ಹಾಲಿಗೂ ಸಕ್ಕರೆಗೂ ಆ ರುಚಿ ತಿಳಿಯುವದೇ? ಅಥವಾ ಹಾಲು ಕುಡಿದುದನ್ನು ಕೇಳಿದರೆ ತೃಪ್ತಿಯಾದೀತೇ? ಇವರುಗಳ ಸಂಪುಟನವೋ ಅಂದರೆ ಅವರಿಬ್ಬರಿಗೂ ಸಂತೋಷಕರವಾಗಿದ್ದುದಲ್ಲದೆ ನಮ್ಮಂಥಾವರಿಗೂ ಈಗ ಕಥೆ ಕೇಳುವಾಗಲೂ ಬಹಳ ಸಂತೋಷಕರವಾಗಿರುವುದು. ಆದುದರಿಂದ ಆ ಹೋಲಿಕೆಯು ಸಮಂಜಸವಲ್ಲ.

---

## ಶ್ರೀ ರಾಮಾನುಜಾಚಾರ್ಯರು ಸಾಲಗ್ರಾಮಕ್ಕೆ ದಯಮಾಡಿಸಿದ್ದು.

---

ಶ್ಲೋ || ಪ್ರಾಪ್ಯಾಥೋ ಶಿಷ್ಯವರ್ಗೈಸ್ಸಹ ಸ ತು ಮಿಥಿಲಾಂ ಮೂರ್ಖಶೈವಾಭಿ
೮೭ ಪೂರ್ಣಾಂ ಸ್ವಸ್ಮಿನ್ಸಾಮುಖ್ಯಸಿದ್ಧ್ಯೈ ದಶರಥತನಯಂ ನಾಮಶಿಷ್ಯಂ

ನ್ಯಯುಙ್ಕ್ತ | ಏತದ್ಘ್ರಾಣಪೇಯಾಂಬುಸಿ ಚರಣಯುಗಂ ಸ್ವಸ್ಯ ತಾವತ್ತ್ವಮಾಸ್ತೇತ್ಯೇತಸ್ಮಿನ್ಸಹ್ಯಬಂಧೇ ಪಟಿಮುನಿ ಜಗೃಹೇ ಹ್ಯಾನ್ಧ್ರ ಪೂರ್ಣೋದ್ವಿಜಾಗ್ರ್ಯಃ ||

ಟೀ || ಅನಂತರ ಶ್ರೀ ರಾಮಾನುಜಾಚಾರ್ಯರು ತಮ್ಮ ಶಿಷ್ಯವರ್ಗಗಳೊಡನೆ "ಮಿರಿಳಾಪುರೀ" ಎಂಬ ಊರಿಗೆ ಬಂದು ಸೇರಲು, ಅಲ್ಲಿದ್ದ ಜನಗಳು ಮೂರ್ಖರಾಗಿದ್ದುದರಿಂದ ಯಾರೂ ಇವರನ್ನು ಆದರಿಸದೇ ಇರಲು, ತಮ್ಮಲ್ಲಿ ಅವರು ಆಶ್ರಯಿಸಿ ಕೃತಾರ್ಥರಾಗುವುದಕ್ಕೋಸ್ಕರ "ದಾಶರಥಿ" (ಮುದಲಿಯಾಂಡಾರ್) ಎಂಬ ತಮ್ಮ ಶಿಷ್ಯರನ್ನು ಕುರಿತು, "ನೀವು, ಈ ಊರಿನವರೆಲ್ಲರೂ ಕುಡಿಯುವುದಕ್ಕಾಗಿ ತೆಗದುಕೊಂಡು ಹೋಗತಕ್ಕ ನೀರಿನಲ್ಲಿ ನಿಮ್ಮ ಪಾದಗಳನ್ನು ಸ್ವಲ್ಪಹೊತ್ತು ಇಟ್ಟುಕೊಂಡಿರಿ. ನಿಮ್ಮ ಶ್ರೀಪಾದತೀರ್ಥವನ್ನು ಪಾನ ಮಾಡಿದುಧರಿಂದ ಅವರಿಗೆ ಜ್ಞಾನೋದಯವಾಗಲಿ" ಎಂದಪ್ಪಣೆ ಮಾಡಿದರು. ಅವರು ಅದೇಪ್ರಕಾರ ಮಾಡಲು, ಅವರೆಲ್ಲರೂ ಇವರ ಬಳಿಗೆ ಬಂದು ಆಶ್ರಯಿಸಿ ಕೃತಾರ್ಥರಾದರು. ಈ ಕೊಕ್ಕರೆ ಹಿಡಿಯುವ ಯುಕ್ತಿಯಲ್ಲಿ ಅಲ್ಲಿದ್ದ "ಆಂಧ್ರಪೂರ್ಣ" (ವಡುಹನಂಬಿ) ಎಂಬ ಬ್ರಾಹ್ಮಣಶ್ರೇಷ್ಠರು (ಹಂಸಪಕ್ಷಿಯು) ಹಿಡಿಯಲ್ಪಟ್ಟರು. ಅಂದರೆ ಅಲ್ಲಿದ್ದ "ವಡುಹನಂಬಿ" ಎಂಬವರು ರಾಮಾನುಜಾಚಾರ್ಯರ ಪಾದಗಳನ್ನಾಶ್ರಯಿಸಿ ಅತ್ಯಂತರಂಗಪ್ರಿಯಶಿಷ್ಯರಾದರು.

ಶ್ಲೋ || ತತ್ರ ಶ್ರೀಪಾದತೀರ್ಥಂ ಯಶ ಇವ ಸಕಲಂ ಸ್ವೀಯಮಾಸ್ಥಾಪ್ಯ ಚೋಲಲ ಳಂ ಲೋಕಾದಸ್ಮಾನ್ನಿರಸ್ಯನ್ನರಹರಿನಿಲಯೇ ತತ್ರ ಮನ್ತ್ರಾನ್ಸ್ವಜಾಪ | ತಸ್ಮಾತ್ತಸ್ಮಾನ್ನಾತ್ರ್ಯಯಾತೋ ಯದುಗಿರಿಸಿಕಟೇ ಭಕ್ತಪೂರ್ವಾಂ ಪುರೀಂ ತಾಂ ಪ್ರಾಪ್ಯಾಸ್ತ ತತ್ಸ್ವಪೂರ್ಣಾರ್ಥಿತ ಇಹ ತು ನೃಪಂ ಬಿಟ್ಟಿಲಂ ಪ್ರಾಪ ನಾಮ್ನಾ ||

**ಟೀ** || ಆ ಮಿರಿಳಾಪುರಿಗೆ "ಸಾಲಗ್ರಾಮ" ಎಂದು ಹೆಸರಿಟ್ಟು ಅಲ್ಲಿ ತಮ್ಮ ಶ್ರೀಪಾದತೀರ್ಥವನ್ನು ತಮ್ಮ ಸರ್ವಸ್ವವಾದ ಯಶಸ್ಸನ್ನೋ ಎಂಬಂತೆ ಸ್ಥಾಪಿಸಿ ಅಂದರೆ ಅಲ್ಲಿರುವ ಶ್ರೀಪಾದತೀರ್ಥದ ಕೊಳ, ಅದರ ತೀರ್ಥ, ಅದರ ಮಹಿಮೆ, ಇವುಗಳನ್ನು ನೋಡಿದರೆ ಆ ರಾಮಾನುಜಾಚಾರ್ಯರ ಮಹಿಮೆಯು

ಇನ್ನೆಷ್ಟಿರಬಹುದು? ಎಂಬುದು ತತ್‍ಕ್ಷಣವೇ ಎಲ್ಲರ ಮನಸ್ಸಿಗೂ ಬರುವುದು ಎಂದಭಿಪ್ರಾಯ. ಅಲ್ಲಿರುವ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ದಯಮಾಡಿ ಸಿದ್ದು ತಮಗೆ ಶ್ರೀರಂಗವಾಸ, ರಂಗನಾಥರ ಸೇವೆ ಉಭಯ-ವೇದಾನ್ತ ಕಾಲ ಕ್ಷೇಪಾದಿಗಳಿಗೆ ವಿರೋಧ ಮಾಡಿದ ಆ ಚೋಳರಾಜನು ಈ ಲೋಕವನ್ನೇ ಬಿಟ್ಟುಹೋಗುವಂತೆ ಮಂತ್ರಜಪವನ್ನು ಮಾಡಿ ನರಸಿಂಹಸ್ವಾಮಿಯಲ್ಲಿ ಪ್ರಾರ್ಥಿಸಿದರು. ಅನಂತರ ಅಲ್ಲಿಂದ ಹೊರಟು ಯಾದವಗಿರಿಯ ಸಮೀಪದಲ್ಲಿರುವ "ತೊಂಡನೂರು" ಎಂಬ ಊರಿಗೆ ದಯಮಾಡಿಸಿ ಅಲ್ಲಿ ತಮಗೆ ಶಿಷ್ಯರಾದ "ತೊಂಡನೂರುನಂಬಿ" ಎಂಬವರ ಪ್ರಾರ್ಥನೆಯ ಪ್ರಕಾರ ಅಲ್ಲಿನ ದೊರೆಯಾದ "ಬಿಟ್ಟಿಲದೇವ" ಎಂಬ ಜೈನರಾಜನನ್ನು ಹೊಂದಿ ಅನುಗ್ರಹಿಸಿದರು.

ಶ್ಲೋ || ಅಂಗುಳ್ಯಾ ಹೀನಮೇನಂ ಸ್ವಜನಪರಿಹೃತಂ ಜೈನಮಾಥಾಯವಿಷ್ಣೋ
೮೯ ನಾಮ್ನಾ ತಂ ವಿಷ್ಣುಪೂರ್ವಂ ಪರಿಣತಹೃದಯಂ ವರ್ಧನಾಂತಂ ವಿಧಾಯ | ಭೂತಾವಿಷ್ಟಾಂ ವಿಮುಕ್ತಾಂ ಸ್ವಚರಣಸಲಿಲೈಸ್ತತ್ಸುತಾಮಾಶು ಕೃತ್ವಾ ತತ್ರೈವಾಸೀತ್ಸ್ವಶಿಷ್ಯಾನ್ನರಹರಿ ನಿಲಯೇ ಬೋಧಯನ್ನರ್ಥಜಾತಮ್ ||

ಟೀ || ಆ ದೊರೆಯನ್ನು ಮ್ಲೇಚ್ಛರಾಜನು ಜಯಿಸಿದ್ದುದರಿಂದ ಅದರ ಸೂಚನೆಗಾಗಿ ಆ ದೊರೆಯ ಕೈಬೆರಳನ್ನು ಕತ್ತರಿಸಿದ್ದನಾದುದರಿಂದ "ಬಿಟ್ಟಿಲ" ಎಂದು ಪ್ರಸಿದ್ಧನಾಗಿಯೂ ಆದರಿಂದಲೇ ಅಂಗಹೀನನೆಂದು ಅವನ ಬಂಧುಜನಗಳೆಲ್ಲರೂ ಅವನನ್ನು ಬಹಿಷ್ಕಾರ ಮಾಡಿರಲು, ಆರ್ತನಾದ ಆ ದೊರೆಯು ಶ್ರೀರಾಮಾನುಜಾಚಾರ್ಯರನ್ನು ಪ್ರಾರ್ಥಿಸಲು, ಅವರು "ಶ್ರೀಮನ್ನಾರಾಯಣನೇ ಪರತತ್ತ್ವವು, ಅವನ ದಾಸ್ಯವೇ ಸಕಲಾತ್ಮ ಸ್ವರೂಪವು, ಅಂತಹ ಸರ್ವಸ್ವಾಮಿಯ ಸರ್ವವಿಧ ಸೇವೆಯೇ ಪರಮಪುರುಷಾರ್ಥವು" ಎಂದಿವೇ ಮೊದಲಾದ ಅನೇಕಾರ್ಥ ವಿಶೇಷಗಳನ್ನು ಉಪದೇಶ ಮಾಡಿ ಅದರಿಂದ ಆ ಬಿಟ್ಟಿಲದೇವನಿಗೆ "ಇಂತಹ ತತ್ತ್ವಹಿತ ಪುರುಷಾರ್ಥಗಳನ್ನು ನಮ್ಮ ಹೃದಯದಲ್ಲಿ ದೃಢವಾಗಿ ನಿಲ್ಲುವಂತೆ ಉಪದೇಶಮಾಡಿ ನಮ್ಮ ಆತ್ಮೋಜ್ಜೀವನಮಾಡಿದ ಈ ರಾಮಾನುಜಾಚಾರ್ಯರಿಗಿಂತಲೂ ಮತ್ತೊಂದು ಪರದೈವವುಂಟೇ?" ಎಂಬಷ್ಟು ಹೃದಯಪರಿಪಾಕ ಉಂಟಾದ ಮೇಲೆ ಅವನನ್ನು ವೈಷ್ಣವನನ್ನಾಗಿ ಮಾಡಿ "ವಿಷ್ಣುವರ್ಧನ" ಎಂದು ಅವನಿಗೆ

ಹೆಸರಿಟ್ಟು, ಅವನ ಮಗಳಿಗೆ ಹಿಡಿದಿದ್ದ ಯಾವುದೋ ಒಂದು ಕ್ರೂರವಾದ ಗ್ರಹ ವನ್ನು ತಮ್ಮ ಶ್ರೀಪಾದತೀರ್ಥ ಪ್ರೋಕ್ಷಣದಿಂದಲೇ ಬಿಡಿಸಿ, ಅಲ್ಲಿರುವ ನೃಸಿಂಹ ಸ್ವಾಮಿಯುವರ ದೇವಸ್ಥಾನದಲ್ಲಿ ತಮ್ಮ ಶಿಷ್ಯರಿಗೆ ಉಭಯವೇದಾನ್ತ ಪ್ರವಚನ ಮಾಡುತ್ತಾ ಅಲ್ಲಿಯೇ ದಯಮಾಡಿಸಿದ್ದರು.

---

## ಶ್ರೀ ರಾಮಾನುಜಾಚಾರ್ಯರು ಸಾವಿರಾರು ಜೈನರುಗಳನ್ನು ವಾದದಲ್ಲಿ ಜಯಿಸಿದುದು.

---

ಶ್ಲೋ || ಶ್ರುತ್ವೈತಜ್ಜೈನವೃದ್ಧಾ ಏವದಿತುಮನಸಃ ಪ್ರಾಪುರೇನಂ ಸಹಸ್ರಂ ಸಂ
೯೦ ಶಪ್ತಾಃ ಕೃಷ್ಣಸೂತಂ ನರಮಿವ ಯುಗಪತ್ತತ್ರ ರಾಮಾನುಜಾರ್ಯ್ಯಃ |
ಸ್ವಂ ರೂಪಂ ಪ್ರಾಗ್ಫಣೀಯಂ ಪ್ರಮುದಿತಹೃದಯಃ ಪ್ರಾಪ್ಯ ವಕ್ತ್ರೈ
ಸ್ಸಹಸ್ರೇಣಾಂತರ್ನೇಪಥ್ಯಸಂಸ್ಥೋ ಹ್ಯಜಯದರಿಗಣಾನ್ವಾದಿದಾವಸ್ಯ
ದಾವಃ ||

ಟೀ || ಹೀಗೆ ಶ್ರೀರಾಮಾನುಜಾಚಾರ್ಯರು ಬಿಟ್ಟಿಲದೇವನನ್ನು ವೈಷ್ಣವನ ನ್ನಾಗಿ ಮಾಡಲು, "ಪದ್ಮಗಿರಿ" (ಶ್ರವಣಬೆಳಗೊಳ) ಯಲ್ಲಿದ್ದ ಸಾವಿರಾರು ಜೈನಮತ ವಿದ್ವಾಂಸರುಗಳು ಒಂದೇಸಲ ಬಂದು "ನಮ್ಮನ್ನು ವಾದದಲ್ಲಿ ಜಯಿ ಸದೇನೇ ನಮ್ಮ ರಾಜನನ್ನು ನೀವು ನಿಮ್ಮ ಮತಕ್ಕೆ ಹೇಗೆ ಸೇರಿಸಿಕೊಳ್ಳುವಿರಿ? ನಮ್ಮೊಡನೆ ವಾದಮಾಡಿರಿ" ಎಂದು ಹೇಳಿ, ಭಾರತಯುದ್ಧದಲ್ಲಿ ಕೃಷ್ಣನನ್ನು ಸಾರಥಿಯಾಗಿ ಉಳ್ಳ ಅರ್ಜುನನಿಗೆ "ಸಂಶಪ್ತಕ" ರೆಂಬುವರು (ಶತ್ರುಗಳನ್ನು ಕೊಲ್ಲುವುದೊಂದುಪಕ್ಷ ಅಥವಾ ತಾವೇ ಸಾಯುವದೊಂದು ಪಕ್ಷ, ಖಾಲಿಯಾಗಿ ಬೇರೆ ಹಿಂದಿರುಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿಕೊಂಡು ಯುದ್ಧಕ್ಕೆ ಹೋಗತಕ್ಕ ವರು) ಅಸಂಖ್ಯಾತರಾಗಿ ಹೇಗೆ ಸುತ್ತಿಕೊಂಡರೋ ಹಾಗೆ ಸುತ್ತಿಕೊಂಡರು. ಆಗ ರಾಮಾನುಜಾಚಾರ್ಯರು, ಒಬ್ಬರೇ ಅನೇಕ ಜನಗಳೊಡನೆ ಏಕಕಾಲದಲ್ಲಿ ವಾದಮಾಡುವುದಕ್ಕಾಗದ ಕಾರಣ "ಸೋತುಹೋದರು" ಎಂಬ ಅಪವಾದ ವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಸುತ್ತಲೂ ತೆರೆಯನ್ನು ಕಟ್ಟಿಸಿ ಒಳಗೆ ಒಬ್ಬರೇ ತಾವು ಕುಳಿತುಕೊಂಡು ಅವರೆಲ್ಲರನ್ನೂ ತೆರೆಯ ಹೊರಗೆ ಸುತ್ತಲೂ

ಎಳ್ಳಿರಿಸಿ, ಸಹಸ್ರಮುಖನಾದ ಆದಿಶೇಷನ ರೂಪವನ್ನು ಪರಿಗ್ರಹಿಸಿ ಪ್ರತಿಯೊಬ್ಬ ಗೂ ಪ್ರತ್ಯುತ್ತರ ಹೇಳಿ ಅವರ ಮತವನ್ನೆಲ್ಲಾ ಖಂಡಿಸಿ ಸೋಲಿಸಿ ಆ ಬೆಟ್ಟಿಲ ೀವನ ವೈಷ್ಣವತ್ವವನ್ನು ಸ್ಥಾಪನೆ ಮಾಡಿದರು.

---

## ಶ್ರೀ ರಾಮಾನುಜಾಚಾರ್ಯರು ಸ್ವಪ್ನ ಕಂಡದ್ದು.

---

ಶ್ಲೋ || ಪುಂಡ್ರಾರ್ಥಾ ಶ್ವೇತಮೃತ್ಸ್ನಾ ಕ್ಷಯಮಿಹ ತು ಗತಾ ಕಿಂ ನು ಕರ್ತ
೯೧ ವ್ಯ ಮಸ್ಮಾದಿತ್ಯೇವಂ ಚಿಂತಯ್ಯೈನಂ ಕಬಳಿತಮನಸಂ ಸಂಚಕರ್ಷಾಧ
ನಿದ್ರಾ | ತಾವತ್ಸ್ವಪ್ನೇತ್ರ ಶೈಲೇ ಖಗಪತಿ ನಿಹಿತಾ ಶ್ವೇತಮೃತ್ಸ್ನಾಽಕ್ಷ
ಯಾಸ್ತೇ ಕಲ್ಯಾಣಂ ತೀರ್ಥಮೇತತ್ತಟಗತಮಿಹ ಮಾಮುದ್ಧರೇತ್ಯಾಹ
ವಿಷ್ಣುಃ ||

ಟೀ|| ಶ್ರೀರಾಮಾನುಜಾಚಾರ್ಯರು ಹೀಗೆ ಆ ತೊಂಡನೂರಿನಲ್ಲಿ ದಯಮಾಡಿ ಸಿರುವಾಗ ಒಂದು ದಿವಸ ಊರ್ಧ್ವಪುಂಡ್ರಕ್ಕಾಗಿ ಧರಿಸುವ ಶ್ವೇತಮೃತ್ತಿಕೆಯು (ಬಿಳೀನಾಮದ ಮಣ್ಣು) ಮುಗಿದುಹೋಗಲು, “ಎಲ್ಲಿ ಸಂಪಾದಿಸುವುದೆಂದು ಚಿಂತಾಕ್ರಾಂತರಾಗಿ ಮಲಗಲು, ರಾತ್ರಿ ಸ್ವಪ್ನದಲ್ಲಿ ಮೇಲುಕೋಟೆ ತಿರುನಾರಾ ಯಣಸ್ವಾಮಿಯವರು ಬಂದು “ಈ ಯಾದವಗಿರಿಯಲ್ಲಿ ನನ್ನ ಅಪ್ಪಣೇಪ್ರಕಾರ ಗರುಡನು ಶ್ವೇತದ್ವೀಪದಿಂದ ತಂದು ಸ್ಥಾಪಿಸಿರುವ ಅಕ್ಷಯವಾದ ಶ್ವೇತಮೃತ್ತಿ ಕೆಯು ಇದೆ. ಅದನ್ನು ತೆಗೆದು ಉಪಯೋಗಿಸಿರಿ, ಈ ಕಲ್ಯಾಣೀ ತೀರವಾಸಿ ಯಾದ ನನ್ನನ್ನೂ ಜೀರ್ಣೋದ್ಧಾರಮಾಡಿರಿ” ಎಂದು ಹೇಳಿದರು.

ಶ್ಲೋ || ಉತ್ಥಾಯ ಸ್ವಪ್ನಮೇತಂ ಸ ತು ನರಪತಯೇ ಶಿಷ್ಯವರ್ಗಾಯ ಚೋ
೯೨ ಕ್ತ್ವಾ ವಿಸ್ಮೇರಶ್ಚೋತ್ತರಾಂತಾಂ ಹರಿತಮನುಸೃತಶ್ಶೈಲಮಾರುಹ್ಯ
ದುರ್ಗಮ್ | ಸ್ನಾತ್ವಾ ವೇದಾಖ್ಯತೀರ್ಥೇ ದೃಷದಿ ಚ ಪರಿಧಾನಾಭಿ
ಧಾಯಾಂ ಗೃಹೀತ್ವಾ ದಂಡಂ ಕಾಷಾಯವಾಸೋ ಹರಿಮಥ ಯತಿರಾ
ಟ್ತಂ ವಿಚಿನ್ವನ್ನಲೇಭೇ ||

ಟೀ || ಬೆಳಿಗ್ಯೆ ಎದ್ದು ಈ ಸ್ವಪ್ನವೃತ್ತಾಂತವನ್ನು ಆ ರಾಜನಿಗೂ ತಮ್ಮ ಶಿಷ್ಯರಿಗೂ ಹೇಳಿ ಅತ್ಯಾಶ್ಚರ್ಯಪಡುತ್ತಾ ಶಿಷ್ಯರೊಡನೆ ಅಲ್ಲಿಂದ ಉತ್ತರಕ್ಕೆ

ಹೊರಟು ದುರ್ಗಮವಾದ ಆ ಯಾದವಾದ್ರಿಯನ್ನು ಏರಿ, ವೇದಪುಷ್ಕರಿಣೀ ತೀರ್ಥದಲ್ಲಿ ಸ್ನಾನಮಾಡಿ ಅಲ್ಲಿನ ಪರಿಧಾನಶಿಲೆಯಲ್ಲಿ ತ್ರಿದಂಡ ಕಾಷಾಯಗಳನ್ನು ಪುನಃ ಪರಿಗ್ರಹಿಸಿ, ಸ್ವಪ್ನದಲ್ಲಿ ಹೇಳಿದ ನಾರಾಯಣನನ್ನು ಹುಡುಕಿದರೂ ಇರುವ ಸ್ಥಲವು ಗೊತ್ತಾಗಲಿಲ್ಲ.

ಶ್ಲೋ || ಚಿಂತಾವಿಷ್ಟೋಽಥ ಸೋಽಯಂ ಪುನರಭಿಜಗದೇ ತೇನ ನಾರಾಯಣೇನ
೯೩ ಪ್ರತ್ಯಕ್ಷಾಕಾರವಾಣ್ಯಾ ತುಲಸಿತತಿಕೃತಂ ಚಿಹ್ನಮಾಯಾಹಿ ಲಬ್ಧ್ವಾ |
ಕಲ್ಯಾಣೀತೀರ್ಥತೋಽಸ್ಮಾನ್ನಿಋತಿದಿಶಿ ಮಾಂ ತುಂಗವಲ್ಮೀಕಗೂಢಂ
ವೃಕ್ಷಸ್ಯಾಧಸ್ತುಲಸ್ಯಾಃ ಕೃತವಸತಿಮಿಹಾಲೋಕಯೋತ್ತಿಷ್ಠ ಚೇತಿ ||

ಟೀ || ಆದುದರಿಂದ ಚಿಂತಾಕ್ರಾಂತರಾಗಿ ಧ್ಯಾನಿಸುತ್ತಿರುವಾಗ ಇವರ ಕಿವಿಯಲ್ಲಿ "ಏತಕ್ಕೆ ಯೋಚನೆ ಮಾಡುವಿರಿ? ಇಲ್ಲಿಂದ ತುಲಸೀಗಿಡಗಳ ಸಾಲಿನ ಗುರುತಿನ ಮೇಲೆ ಉತ್ತರದಿಕ್ಕಿಗೆ ಬನ್ನಿರಿ. ಕಲ್ಯಾಣಿಯ ಸ್ವಲ್ಪದೂರದಲ್ಲಿ ನೈಋತ್ಯ ದಿಕ್ಕಿನಲ್ಲಿ ದೊಡ್ಡದಾದ ಒಂದು ಹುತ್ತವಿರುವುದು. ಅದರ ಮೇಲೆ ಒಂದು ದೊಡ್ಡ ತುಲಸೀಗಿಡವಿರುವುದು. ಆ ಹುತ್ತದೊಳಗೆ ನಾನಿರುವೆನು. ಈ ಕಲ್ಯಾಣಿಯ ಪಶ್ಚಿಮದಲ್ಲಿ ಶ್ವೇತಮೃತ್ತಿಕೆ ಇರುವುದು. ಚಿಂತೆಯನ್ನು ಬಿಟ್ಟುಏಳಿರಿ" ಎಂದು ಹೇಳಿದಂತಾಯಿತು.

ಶ್ಲೋ || ಸ್ನಾತ್ವಾ ಕಲ್ಯಾಣತೀರ್ಥೇ ಮೃದಮಪಿ ಧವಳಾಮೂರ್ಧ್ವಪುಂಡ್ರಾಣಿ
೯೪ ಧೃತ್ವಾ ಗತ್ವಾ ವಲ್ಮೀಕಸಂಸ್ಥಂ ತುಲಸಿತರುಮಧೋ ಖಾನಯಿತ್ವಾಶು
ತತ್ರ | ದೃಷ್ಟ್ವಾನಂದಂ ವಿಮಾನಂ ತದುದರಗೃಹಗಂ ದಿವ್ಯಮೂರ್ತಿಂ
ಚ ಮೋದಕ್ಷೀರಾಂಭೋಽಥೌ ನಿಮಗ್ನಸ್ಸ್ವಯಮಥ ತಮಪಿ ಕ್ಷೀರ
ಕುಂಭೈರ್ನ್ಯಷಿಂಚತ್ ||

ಟೀ || ಅನಂತರ ಅದೇ ರೀತಿಯಲ್ಲಿ ಉತ್ತರಕ್ಕೆ ಹೊರಟು, ತುಲಸೀಗಿಡಗಳ ಸಾಲಿನ ಗುರುತು ಹಿಡಿದುಕೊಂಡು ಹೋಗಿ ಕಲ್ಯಾಣೀತೀರ್ಥದಲ್ಲಿ ಸ್ನಾನಮಾಡಿ, ಆ ಕಲ್ಯಾಣಿಯ ಪಶ್ಚಿಮದಲ್ಲಿರುವ ತಾರ್ಕ್ಷ್ಯಕ್ಷೇತ್ರದಲ್ಲಿ ಶ್ವೇತಮೃತ್ತಿಕೆಯನ್ನು ಸ್ವೀಕರಿಸಿ, ದ್ವಾದಶೋರ್ಧ್ವಪುಂಡ್ರಗಳನ್ನು ಧರಿಸಿ, ಕಲ್ಯಾಣಿಯ ನೈಋತ್ಯದಿಕ್ಕಿನಲ್ಲಿ ಸ್ವಲ್ಪದೂರದಲ್ಲಿ ದೊಡ್ಡ ಹುತ್ತವನ್ನೂ ಅದರ ಮೇಲೆ ದೊಡ್ಡ ತುಲಸೀಗಿಡ

ವನ್ನೂ ನೋಡಿ, ಬಹಳ ಸಂತೋಷದಿಂದ ಆ ಹುತ್ತವನ್ನು ಗುದ್ದಲಿಗಳಿಂದ ಕಡಿಸಿ ಅದರೊಳಗೆ ಆನಂದಮಯದಿವ್ಯವಿಮಾನವನ್ನೂ ಅದರ ಗರ್ಭಗೃಹದ ಮಧ್ಯದಲ್ಲಿ ಶ್ರೀಮನ್ನಾರಾಯಣಮೂರ್ತಿಯನ್ನೂ ದರ್ಶನಮಾಡಿ ಆನಂದವೆಂಬ ಕ್ಷೀರಸಮುದ್ರದಲ್ಲಿ ತಾವು ಮುಳುಗಿದವರಾಗಿ ತಮ್ಮಂತೆಯೇ ಅವರನ್ನೂ ಮುಳುಗಿಸಬೇಕೆಂದು ಅನೇಕ ಕಲಶಪೂರಿತವಾದ ಕ್ಷೀರಗಳಿಂದ ಅಭಿಷೇಕಮಾಡಿದರು.

ಶ್ಲೋ|| ಗಾಥಾಸಾಹಸ್ರಮಧ್ಯದ್ವಿಯುಗಮಿತಶತೀ ಪ್ರಾಗ್ಭವಾನಾಂ ದಶಾನಾಂ
೯೫ ಪದ್ಯಾನಾಂ ವಾಚ್ಯಭೂತಂ ಶಠರಿಪುಹೃದಯಾದ್ಯಾಜ್ಞಾ ಸದ್ಯಸ್ತ್ಯ್ವ ವಿದಿತ್ವಾ | ಐಶ್ವರ್ಯಾತ್ಮಾನುಭೂತೀ ತ್ಯಜ ಭಜ ಚರಣಾವಸ್ಯ ನಾರಾಯಣಸ್ಯೇತ್ಯರ್ಥಾರ್ಥ ಶ್ಲೋಕಾನಯೆಚ್ಛತ್ಸ್ವಿತುರಿವ ತನುಭೂರರ್ಥಮಾಚಾರ್ಯವರ್ಯಃ ||

ಟೀ|| ಹೀಗೆ ಕ್ಷೀರಾಭಿಷೇಕ ಮಾಡಿ ಆ ದಿವ್ಯಸುಂದರದಿವ್ಯಮೂರ್ತಿಯನ್ನು ದರ್ಶನ ಮಾಡಿ ಪರಮಾನಂದಭರಿತರಾಗಿ ಪರವಶರಾಗಿರಲು, ಶ್ರೀಪರಾಂಕುಶಮುನಿಗಳು (ನಮ್ಮಾಳ್ವಾರ್) "ನಾನು ಹೇಳಿರುವ, 'ಒರುನಾಯಕ' ಎಂಬ ತಿರುವಾಯ್ಮೊಳಿಯನ್ನು ನೀವು ನಾರಾಯಣನಿಗೆ ಸಮರ್ಪಣೆ ಮಾಡಿರಿ" ಎಂದು ಮಾನಸಸಾಕ್ಷಾತ್ಕಾರವಾಗಿ ಅಪ್ಪಣೆ ಕೊಡಿಸಲು ತಿರುವಾಯ್ಮೊಳಿ ಎಂಬ ಸಾವಿರ ಪದ್ಯಗಳ ಮಧ್ಯದಲ್ಲಿ ನಾಲ್ಕನೆಯ ಶತಕದ ಮೊದಲನೆಯ ಹತ್ತು ಪದ್ಯಗಳನ್ನು, ಪಿತ್ರಾರ್ಜಿತವಾದ ಸ್ವತ್ತನ್ನು ಮಗನು ಉಪಯೋಗಿಸುವಂತೆ ತಿರುನಾರಾಯಣಸ್ವಾಮಿಗೆ ಸಮರ್ಪಿಸಿದರು. ಆ ಹತ್ತು ಪದ್ಯಗಳಲ್ಲಿ "ಐಶ್ವರ್ಯವು ಅಲ್ಪಾಸ್ಥಿರತ್ವಾದಿ ದೋಷಗಳಿಂದಲೂ, ಕೈವಲ್ಯವು ನಿತ್ಯಾಲ್ಪಸುಖವಾದುದರಿಂದಲೂ, ತ್ಯಾಜ್ಯಗಳು. ಆದುದರಿಂದ ತಿರುನಾರಾಯಣನ ಪಾದಾರವಿಂದ ಸ್ಮರಣಮಾಡಿ ಧನ್ಯರಾಗಿರಿ" ಎಂದು ಹೇಳಲ್ಪಡುತ್ತದೆ.

---

## ಪೂಜೆಗೆ ಶ್ರೀರಂಗದಿಂದ ಅರ್ಚಕರನ್ನು ಕರೆಸಿದ್ದು.

ಶ್ಲೋ|| ಆರಾಧ್ಯ ತ್ರೀಣ್ಯಹಾನಿ ಸ್ವಕರಕಮಲತಸ್ತ್ವೇಷ ರಾಮಾನುಜಾರ್ಯಃ
೯೬ ಶ್ರೀರಂಗಾದ್ರಂಗಭಟ್ಟಾರಕಮತಿನಿಪುಣಂ ಪಾಂಚರಾತ್ರೇ ಚ ತಂತ್ರೇ| ಆನಾಯ್ಯಾಸ್ಥಾಪಯತ್ತಂ ವಿಧಿವದತಿಮುದಾ ಸಾತ್ವತಪ್ರೋಕ್ತರಿತ್ಯಾ ಯಾತ್ರಾಬಿಂಬಾರ್ಥ ಚಿಂತಾತ್ವಮುಮಥ ನಜಹಾವುತ್ಸವಾರ್ಥೇ ತಥಾಪಿ ||

ಟೀ|| ಅನಂತರದಲ್ಲಿ ಶ್ರೀ ರಾಮಾನುಜಾಚಾರ್ಯ್ಯರು ಮೂರುದಿವಸಗಳವರಿಗೆ ನಾರಾಯಣಸ್ವಾಮಿಯವರಿಗೆ ತಮ್ಮ ಕೈಯಿಂದಲೇ ಆರಾಧನಮಾಡಿ ಅನಂತರ ನಿತ್ಯವೂ ಆರಾಧನ ಮಾಡುವುದಕ್ಕಾಗಿ ಶ್ರೀರಂಗದಿಂದ ಪಾಂಚರಾತ್ರಾದಿ ಸಕಲ ಶಾಸ್ತ್ರಪ್ರವೀಣರಾದ ಶ್ರೀರಂಗರಾಜಭಟ್ಟರೆಂಬ ಅರ್ಚಕರನ್ನು ಕರತರಿಸಿ ಸಾತ್ವತ ಸಂಹಿತೋಕ್ತಪ್ರಕಾರ ಪ್ರತಿಷ್ಠಾದಿಗಳನ್ನು ಮಾಡಿಸಿ ನಿತ್ಯಾರಾಧನಮಾಡಿಸುತ್ತಿದ್ದರು. ಹಾಗಾದರೂ " ಈ ನಾರಾಯಣಸ್ವಾಮಿಗೆ ಅನುರೂಪವಾದ ಉತ್ಸವ ಮೂರ್ತಿಯು ಎಲ್ಲಿರುವರೊ " ಎಂಬ ಚಿಂತೆಯು ಇವರನ್ನು ಬಿಡಲಿಲ್ಲ.

ಶ್ಲೋ|| ಯಾತ್ರಾಬಿಂಬಂ ಮಮಾಸ್ತೇ ತದುಪನಯ ಮಹಾವೀರಢಿಲ್ಲೀಶಗೇಹೇ
೯೭ ಭೂಯಶ್ಚೈವಂ ನಿಯುಕ್ತಃ ಪರಮಪುರುಷತಃ ಪ್ರಾಪಢಿಲ್ಲೀಶಮಾಶು |
ಪೃಷ್ಟಸ್ತೇನಾಪಿ ಹೇತುಂ ಸಮುಕಥಯದಥ ಸ್ವಾಗಮೋ ಪೂಜಿತಸ್ಸ-
ಸ್ತೇನೈವಾಸೌ ವಿಚಿನ್ವನ್ನಲಭತ ನಹಿ ತಂ ತತ್ರ ರಾಮಪ್ರಿಯಾಖ್ಯಮ್ ||

ಟೀ|| ಹೀಗೆ ಚಿಂತಿಸುತ್ತಿರುವಲ್ಲಿ. ತಿರುನಾರಾಯಣಸ್ವಾಮಿಯವರು ಸ್ವಪ್ನದಲ್ಲಿ "ನಮ್ಮ ಉತ್ಸವಮೂರ್ತಿಯು ಢಿಲ್ಲೀ ಪಾದುಷಾಹನ ಮನೆಯಲ್ಲಿದೆ ಆ ಮೂರ್ತಿಯನ್ನು ಬಿಜಮಾಡಿಸಿಕ್ಕೊಂಡು ಬನ್ನಿರಿ " ಎಂದು ಹೇಳಲು, ರಾಮಾನುಜಾಚಾರ್ಯ್ಯರು ಢಿಲ್ಲಿಗೆ ದಯಮಾಡಿಸಿ, ಬಂದ ಕಾರಣವನ್ನು ಪಾದುಷಾಹನು ಕೇಳಲು ಹೇಳಿ ಅವನ ಅಜ್ಞಾಪ್ರಕಾರ ತಾವೇ ಹೋಗಿ. ಅನೇಕಕಡೆಯ ವಿಗ್ರಹಗಳು ರಾಶಿ ರಾಶಿಯಾಗಿ ಇಡಲ್ಪಟ್ಟಿದ್ದ ಜಾಗದಲ್ಲಿ ಹುಡುಕಿದಾಗ್ಯೂ ರಾಮಪ್ರಿಯರೆಂಬ ಚಲುವರಾಯಸ್ವಾಮಿಯು ದೊರಕಲಿಲ್ಲ.

ಶ್ಲೋ|| ಚಿಂತಾಮಗ್ನಸ್ಸಚಾಯಂ ಪುನರಪಿ ಜಗದೇ ತೇನ ರಾಮಪ್ರಿಯೇಣ
೯೮ ಪ್ರಾಸಾದಾಂತಃಪುರೇಹಂ ನೃಪದುಹಿತೃಭವಂ ಭೋಗಮಾಸೇವಮಾನಃ |
ವರ್ತೇ ಚಾಹೂಯ ಮಾಂ ತ್ವಂ ನಯ ಸವಿಧಮಿತಿ ಪ್ರಾಹ ಚಾಸೌ
ಯತೀನ್ದ್ರೋ ರಾಜಾನಂ ತಂ ತ್ವದಂತಃಪುರಕೃತವಸತಿಂ ದೇಹಿ ರಾಮ
ಪ್ರಿಯಂ ನಃ ||

ಟೀ|| ಆಗ ಪುನಃ ಚಿಂತಾಕ್ರಾಂತರಾಗಿ ಮಲಗಿರಲು, ಸ್ವಪ್ನದಲ್ಲಿ ಚಲುವರಾಯಸ್ವಾಮಿಯು " ನಾನು ರಾಜನ ಅಂತಃಪುರದಲ್ಲಿ ರಾಜಪುತ್ರಿಯ ಭೋಗದಲ್ಲಿದ್ದೇನೆ. ನನ್ನನ್ನು ನಿಮ್ಮ ಸಮೀಪಕ್ಕೆ ಕೂಗಿ ಕರದುಕ್ಕೊಳ್ಳಿರಿ" ಎಂದು ಅಪ್ಪಣೆ ಕೊಡಿಸಿದರು. ಅನಂತರ ರಾಮಾನುಜಾಚಾರ್ಯ್ಯರು ಆ ರಾಜನೊಡನೆ " ನನ್ನ ದೇವರು

ನಿಮ್ಮ ಅಂತಃಪುರದಲ್ಲಿಧಾರೆ. ಅವರನ್ನು ನನಗೆ ಕೊಡಿಸಬೇಕು" ಎಂದು ಕೇಳಿದರು

ಶ್ಲೋ|| ಇತ್ಯುಕ್ತಸ್ಸೋಪಿ ನೀತ್ವಾ ಯತಿಪತಿಮವದತ್ತತ್ರ ಶುದ್ಧಾಂತಭೂಮಿಂ
೯೯ ಯದ್ಯೇವಂ ತರ್ಹಿ ರಾಮಪ್ರಿಯಮಿಹ ಸ ಭವಾನಾಹ್ವಯ ತಿತ್ಯ ಸೌ
ಚ | ಭೋಭೋ ರಾಮಪ್ರಿಯೈಹೀ ತ್ಯತಿಮುದಿತ ಉಪಾಜುಹ್ವದೇಷೋ
ಪಿ ಬಾಲೋ ಝುಂ ಕುರ್ವತ್ಕಿಂಕಿಣೀಕ ಸ್ಸ್ಖಲಿತಮೃದುಪದೋ ಮುಗ್ಧ
ಭಾಷೀ ತಕ್ಷೇತಿ ||

ಶ್ಲೋ|| ಆಗತ್ಯಾಸ್ಯಾಂಕಮಧ್ಯೇ ನ್ಯವಿಶತ ಯತಿರಾಟ್ಪ್ರಾಹ ಸಂಪತ್ಕುಮಾರೇ
೧೦೦ ತ್ಯಾಲಿಂಗಸ್ಮೂರ್ಧ್ನ್ಯಜಿಘ್ರತ್ಪ್ರಮದಸಲಿಲಧೌ ಪಾರಶೂನ್ಯೇ ಮಮಜ್ಜ|
ರಾಜಾ ವಿಸ್ಮೇರಚೇತಾ ಬಹುತರವಿಭವೈರರ್ಚ್ಚಿತಂ ಪ್ರಾಹಿಣೋತ್ತಂ
ಸಂಪತ್ಪುತ್ರಂ ಯತೀಂದ್ರಂ ದುಹಿತರಮಪಿ ತತ್ಸಂಗ ವಿಚ್ಛೇದಭೀರುಮ್ ||

ಟೀ|| ಅವರು ಹೀಗೆ ಕೇಳಲು ರಾಜನು ಇವರನ್ನು ಅಂತಃಪುರಕ್ಕೆ ಕರೆದುಕ್ಕೊಂಡು ಹೋಗಿ "ನಿಮ್ಮ ದೇವರು ಇಲ್ಲಿದ್ದ ಪಕ್ಷದಲ್ಲಿ ಕೂಗಿ ಕರದುಕ್ಕೊಳ್ಳಿರಿ" ಎಂದು ಹೇಳಲು, ರಾಮಾನುಜಾಚಾರ್ಯರು "ನನ್ನ ರಾಮಪ್ರಿಯನೇ ಬಾ" ಎಂದು ಕೂಗಿ ಕರೆಯಲು ಆ ರಾಮಪ್ರಿಯನು ಸುಮಾರು ಎರಡು ಮೂರು ವಯಸ್ಸುಳ್ಳ ಮಗುವಾಗಿ ಸರ್ವಾಭರಣಭೂಷಿತನಾಗಿ ಕಾಲುಗೆಜ್ಜೆಗಳನ್ನು ಸದ್ದುಮಾಡಿಕ್ಕೊಂಡು ಎಡವುತ್ತಾ 'ಏನು ತಂದೆ' ಎಂದು ಗೊಣಗುಟ್ಟುತ್ತಾ ಓಡಿಬಂದು ಇವರ ತೊಡೆಯ ಮೇಲೆ ಕುಳಿತುಕ್ಕೊಳ್ಳಲು ರಾಮಾನುಜಾಚಾರ್ಯರು 'ನನ್ನ ಸಂಪತ್ಕುಮಾರನೇ (ಶಲ್ವಪ್ಪಿಳ್ಳೈ) ' ಎಂದು ಹೇಳಿ ತಬ್ಬಿಕಟ್ಟಿಕ್ಕೊಂಡು ಪ್ರೀತಿಯಿಂದ ತಲೆಯ ಮೇಲೆ ಮೂಸಿನೋಡುತ್ತಾ ಅಪಾರವಾದ ಆನಂದಸಮುದ್ರದಲ್ಲಿ ಮುಳುಗಿಹೋದರು. ಇದನ್ನೆಲ್ಲವನ್ನೂ ಪ್ರತ್ಯಕ್ಷದಲ್ಲಿ ನೋಡುತ್ತಿದ್ದ ಪಾದುಷಹನು ಬಹಳ ಆಶ್ಚರ್ಯಯುಕ್ತನಾಗಿ ಛತ್ರಚಾಮರಾಂದೋಳಿಕಾ ವಸ್ತ್ರಾಭರಣಗಂಧಪುಷ್ಪ ಫಲಧೂಪದೀಪಾದಿ ಸಕಲ ವಿಧೋಪಚಾರಗಳಿಂದಲೂ ಚಲುವರಾಯಸ್ವಾಮಿಯನ್ನು ಪಚರಿಸಿ ಪಾಲಕಿಯಲ್ಲಿ ಬಿಜಮಾಡಿಸಿ, ರಾಮಾನುಜಾಚಾರ್ಯರನ್ನೂ ಬಹಳ ಮರ್ಯಾದೆಗಳಿಂದ ಪೂಜಿಸಿ, ಅವರ ಸಂಗಡ ಸಕಲ ವಾದ್ಯಾದಿ ಬಿರುದುಗಳೊಡನೆ ಕಳುಹಿಸಿಕೊಡಲು ಆ ರಾಜಪುತ್ರಿಯು ಈ ಚಲುವರಾಯಸ್ವಾಮಿಯನ್ನು ಬಿಟ್ಟಿರಲಾರದೆ ತಾನೂ ಹೊರಟಳು.

ಶ್ಲೋ|| ಆಸೀಯ್ಯೈನಂ ಸ ರಾಮಪ್ರಿಯಮತಿವಿಭವೈರುತ್ಸವಾನ್ಸಾಕ್ಕಾರಯಿತ್ವಾ
೧೧೧ ಸಾಮ್ನಾ ಸ್ವೇನೈವ ಕಂಚಿನ್ಮಠಮಪಿ ರುಚಿರಂ ಕಾರಯಿತ್ವಾಥ ತತ್ರ|
ಶ್ರೀಭಾಷ್ಯಾದಿಪ್ರಬಂಧಾಮೃತಮನುದಿವಸಂ ಪಾಯಯನ್ಭೂಮಿದೇವಾ-
ವರ್ಷಾಣಿ ದ್ವಾದಶಾಸೀದವಿದಿತವಿರಹೋ ರಂಗನೇತುಸ್ಸ್ವಭರ್ತುಃ ||

ಟೀ|| ಈ ರೀತಿಯಲ್ಲಿ ರಾಮಾನುಜಾಚಾರ್ಯರು ಯತಿರಾಜಸಂಪತ್ಕುಮಾರನನ್ನು ಬಹಳ ವಿಜೃಂಭಣೆಯಿಂದ ಬಿಜಮಾಡಿಸಿಕೊಂಡು ಬಂದು, ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವ ಬ್ರಹ್ಮೋತ್ಸವಾದಿಗಳನ್ನು ನಡಿಸುತ್ತಾ "ಯತಿರಾಜಮಠ" ವೆಂಬ ಒಂದು ಮಠವನ್ನೂ ಕಟ್ಟಿಸಿ ಅಲ್ಲಿ ಶ್ರೀಭಾಷ್ಯಾದಿ ಪ್ರಬಂಧಾಮೃತವನ್ನು ನಿತ್ಯವೂ ಬ್ರಾಹ್ಮಣರುಗಳಿಗೆ ಪಾನಮಾಡಿಸುತ್ತಾ ತಿರುನಾರಾಯಣ, ಚಲುವರಾಯಸ್ವಾಮಿಗಳವರ ಸರ್ವವಿಧ ಕೈಂಕರ್ಯಗಳನ್ನೂ ಸರ್ವಕಾಲಗಳಲ್ಲಿಯೂ ನಡಿಸುತ್ತಾ, ತಮ್ಮ ಸ್ವಾಮಿಯಾದ ಶ್ರೀರಂಗನಾಥನ ವಿರಹವನ್ನು ಮರೆತು, ಹನ್ನೆರಡುವರ್ಷಕಾಲ ಈ ಯಾದವಗಿರಿಯಲ್ಲೇ ವಾಸಮಾಡಿಕೊಂಡಿದ್ದರು.

---

## ಚೋಳಭೂಪನು ಸತ್ತುಹೋದದ್ದನ್ನು ಕೇಳಿದುದು.

ಶ್ಲೋ || ತಾವಜ್ಞಾತ್ವೇಷತೀರ್ಥೇ ಕಪಟಕಿಟಿತನೂಸಂಭವೇ ಸ್ನಾತುಕಾಮೋ
೧೦೨ ಗತ್ವಾ ಶುಶ್ರಾವ ತತ್ರ ಕ್ರಿಮಿಜಟಿಲಗಳಶ್ಚೋಳಭೂಪೋ ಮಮಾರ |
ನೇತ್ರೇ ಯೇನಾಪಲುಪ್ತೇ ಪ್ರಥಿತತರಮಹಾಪೂರ್ಣಕೂರಾಧಿನೇತ್ರೋಃ
ಇತ್ಯೇವಂ ರಂಗಭೂಮೇಸ್ಸಮುಪಗತವತೋ ಮಾರುತೇ ಸ್ಸೂರಿವರ್ಯಾತ್||

ಶ್ಲೋ|| ನಾಮ್ನಾ ಕಲ್ಯಾಣಮೇತತ್ಸಪದಿ ಸಮಭವತ್ಸ್ವಾರ್ಥ ತೋಯ್ಯೇ ವ
೧೦೩ ಮುಕ್ತ್ವಾ ಸ್ನಾತ್ವಾ ಗತ್ವಾದ್ರಿಶೃಂಗಂ ನರಹರಿಮಥ ತಂ ಪ್ರಾಹ ಚಾ
ರೂಢಯೋಗಮ್ | ಯೋಗಂ ಜಹ್ಯೇನ ಮಾಕರ್ಣಯ ಮಮ ವಚನಂ
ಯತ್ಪುರಾ ಪ್ರಾರ್ಥಿತಂ ಮೇ ಸಾಲಗ್ರಾಮೇ ತ್ವಯೀದಂ ಸಫಲಮಿಹ ದ
ಯಾನೀರಧೌ ದೀನಬಂಧೌ ||

ಟೀ|| ಹೀಗಿರುವಲ್ಲಿ ಒಂದುದಿವಸ ಕಲ್ಯಾಣಿಯಲ್ಲಿ ಸ್ನಾನಕ್ಕೋಸ್ಕರ ರಾಮಾನುಜಾಚಾರ್ಯರು ದಯಮಾಡಿಸಿದ್ದಾಗ್ಗೆ, ಶ್ರೀರಂಗದಿಂದ ದಯಮಾಡಿಸಿದ

" ಮಾರುತಿಚ್ಚಿರಿಯಾಂಡಾನ್ " ಎಂಬವರು ಬಂದು ರಾಮಾನುಜಾಚಾರ್ಯರಿಗೆ ನಮಸ್ಕಾರಮಾಡಿ " ತಾವು ಶ್ರೀರಂಗದಿಂದ ಈ ಕಡೆಗೆ ದಯಮಾಡಿಸಿದ ಮೇಲೆ ನಿಮ್ಮ ಶಿಷ್ಯರಾದ ಕೂರತ್ತಾಳ್ವಾನಿಗೂ ನಿಮ್ಮ ಆಚಾರ್ಯರಾದ ಪೆರಿಯ ನಂಬಿಗಳವರ್ಗಿಗೂ ಯಾವ ಪಾಪಿಯು ಕಣ್ಣುಗಳನ್ನು ಕೀಳಿಸಿದನೋ, ಆ ಚೋಳನ ಕತ್ತಿನಲ್ಲಿ ಯಾವುದೋ ಹುಣ್ಣಾಗಿ ಅದರಲ್ಲಿ ಹುಳುಬಿದ್ದು ಅದರಿಂದ ಬಹಳ ಹಿಂಸೆಯನ್ನನುಭವಿಸಿ ಕೊನೆಗೆ ಅದರಿಂದಲೇ ಸತ್ತನು, ಎಂದು ವಿಜ್ಞಾಪಿಸಿದರು. ಆಗ ರಾಮಾನುಜಾಚಾರ್ಯರು ಆ ಮಾತನ್ನು ಕೇಳಿ, ಈ ತೀರ್ಥಕ್ಕೆ " ಕಲ್ಯಾಣ " ಎಂಬ ಹೆಸರು ಇದುವರಿವಿಗೂ ರೂಢನಾಮಮಾತ್ರವಾಗಿತ್ತು. ಈಗ ಯೌಗಿಕವಾಗಿಯೂ ಆಯಿತು. ಅಂದರೆ ಇಲ್ಲಿ ಶುಭಸಮಾಚಾರವನ್ನು ಕೇಳಿದುದರಿಂದ, ಇದು ಕಲ್ಯಾಣಿಯೇ ಸರಿ. " ಕಲ್ಯಾಣ " ಅಂದರೆ ಮಂಗಳ ಎಂದು ಹೇಳಿ ಸ್ನಾನಮಾಡಿ ಅಲ್ಲಿಂದ ನೃಸಿಂಹಸ್ವಾಮಿಯ ಬೆಟ್ಟಕ್ಕೆ ದಯಮಾಡಿಸಿ, ನೃಸಿಂಹಸ್ವಾಮಿಯೊಡನೆ " ಸ್ವಾಮಿಾ, ಯೋಗಾನೃಸಿಂಹನೇ ? ನಿಮ್ಮ ಯೋಗಾಭ್ಯಾಸವನ್ನು ಕೊಂಚ ನಿಲ್ಲಿಸಿ, ಈ ನನ್ನ ವಿಜ್ಞಾಪನೆಯನ್ನು ಲಾಲಿಸಿ ಕೇಳಿರಿ. ನಾನು ಸಾಲಿಗ್ರಾಮದಲ್ಲಿದ್ದಾಗ ಚೋಳನ ವಿಷಯವಾಗಿ ನಿಮ್ಮಲ್ಲಿ ಪ್ರಾರ್ಥಿಸಿದುದು, ಪರಮದಯಾಳುವಾಗಿಯೂ ದೀನಬಂಧುವಾಗಿಯೂ ಇರುವ ನಿಮ್ಮಿಂದ ಈಗ ಸಫಲಮಾಡಲ್ಪಟ್ಟಿತು " ಎಂದು ವಿಜ್ಞಾಪಿಸಿದರು.

---

### ದೇವಸ್ಥಾನ ಮೊದಲಾದ್ದನ್ನು ಕಟ್ಟಿಸಿದುದು.

ಶ್ಲೋ|| ಆನಂದಾಖ್ಯಂ ವಿಮಾನಂ ವ್ಯರಚಯದಭಿತೋ ಮಂದಿರಂ ರಮ್ಯರೂಪಂ
೧೦೪ ಸೇವಾಯೈ ಪಂಚನಿಘ್ನಾನ್ದಶ ತತ ಉಪರಿದಾಸ್ವ ಚ ವಿಪ್ರಾನ್ನ್ಯಯುಙ್ಕ್ತ |
ಪ್ರತ್ಯೇಕಂ ದಾಸ್ಯನಾಮಾನ್ಯಥ ಚ ವಸತಯೇ ವೇಶ್ಮ ತೇಭ್ಯೋಽಪಿ ದತ್ವಾ
ನ್ಯಾಸಂ ಸಂಪತ್ಕುಮಾರಂ ಪ್ರಹಿತಟಶಿಶುಮಿತ್ಯುಚಿವಾನ್ಸಪ್ತಶ್ಯಕೇತಿ ||

ಟೀ|| ಅನಂತರ ರಾಮಾನುಜಾಚಾರ್ಯರು ಆ ಆನಂದಮಯದಿವ್ಯವಿಮಾನದ ಸುತ್ತಲೂ ರಮ್ಯವಾದ ದೇವಸ್ಥಾನವನ್ನು ಕಟ್ಟಿಸಿದರು (ವಿಮಾನವೆಂದರೆ ಗರ್ಭಗುಡಿ, ಅದರ ಈಚೆಯ ಶುಕನಾಸ, ಇವೆರಡು ಕಟ್ಟಿಸಿದ ದೇವಸ್ಥಾನವೆಂದರೆ ನವರಂಗ, ಚಿನ್ನದಬಾಗಲಿನವರಿಗೂ ಇರುವ ಸನ್ನಿವೇಶ.) ಅನಂತರ ಛತ್ರ, ಚಾಮರ,

ಬೀಸಣಿಗೆ, (ಪೀಕ್‌ದಾನಿ, ಹಡಪ) ಕಳಾಚಿಕಾ, ತಾಂಬೂಲಕರಂಡ, ಕನ್ನಡಿ, ಕರಗ ಇವೇ ಮೊದಲಾದ ಸಕಲವಿಧ ಕೈಂಕರ್ಯಗಳನ್ನೂ ಮಾಡುವದಕ್ಕೋಸ್ಕರ ಆಳ್ವಾರ್ ತಿರುನಹರಿಯಕಡೆಯಿಂದ ಚೋಳಿಯವರನ್ನು (ಪುರಶ್ಯೈಖಿಗಳನ್ನು) ಕರತರಿಸಿ ಅವರ ಸಮುದಾಯಕ್ಕೆ "ಐಂಬತ್ತಿರುವರ್" ಎಂಬ ಹೆಸರು ಕೊಟ್ಟರು "ಐಂಬತ್ತಿರುವರ್" ಅಂದರೆ ೫೨ ಜನ ಎಂದರ್ಥ. ಆಗ ಇದ್ದವರು ೫೨ ಜನ ಅಥವಾ ೫೨ ಊಳಿಗಗಳನ್ನು (ಕೈಂಕರ್ಯಗಳನ್ನು) ಮಾಡತಕ್ಕವರು ಎಂದಭಿಪ್ರಾಯ. ಅವರಲ್ಲಿಯೂ ೧, ೨, ೩, ೪ ನೇ ಸ್ವಾಮ್ಯಗಳೆಂದು ನಾಲ್ಕು ಪಂಗಡ ಮಾಡಿ ಅವರಿಗೆ ಕ್ರಮವಾಗಿ "ತಿರುವನಂದಪುರದಾಸರ್" "ತಿರುಮಾಲೈದಾಸರ್" "ತಿರುಕ್ಕುರುಂಕುಡಿದಾಸರ್" "ಯತಿರಾಜದಾಸರ್" ಎಂಬ ಪ್ರತ್ಯೇಕ ದಾಸ್ಯನಾಮಗಳನ್ನೂ ಕೊಟ್ಟು ಅವರಿಗೆಲ್ಲಾ ಮನೆಗಳನ್ನೂ ಕಟ್ಟಿಸಿಕೊಟ್ಟು ಜ್ಞಾನೋಪದೇಶವನ್ನೂ ಮಾಡಿ "ಚಲುವರಾಯಸ್ವಾಮಿಯನ್ನು ಭಾವಿಯ ತಡಿಯಲ್ಲಿರುವ ಮೊಗುವನ್ನು ಕಂಡಂತೆ, ಭಯಭಕ್ತಿಗಳಿಂದ ಸದಾ ಜಾಗರೂಕತೆಯಿಂದ ನೋಡಿಕ್ಕೊಂಡು ಮಂಗಳಾಶಾಸನಪರರಾಗಿರಿ" ಎಂದು ಹೇಳಿ, ತಮ್ಮ ಆಸ್ತಿಯನ್ನು ಮತ್ತೊಬ್ಬರ ಕೈಯಲ್ಲಿ, ಕೇಳಿದಾಗ ಕೊಡುವಹಾಗೆ ಹೇಳಿ ಕೊಡುವಂತೆ ಕೊಟ್ಟರು

---

### ಶ್ರೀರಂಗಕ್ಕೆ ಹೋಗಬೇಕೆಂದು ಯೋಚನೆ ಮಾಡಿದುದು ಅದಕ್ಕೆ ಅಡ್ಡಿಯಾದುದು, ಅದಕ್ಕೆ ಪರಿಹಾರ ಸಹಾ.

ಶ್ಲೋ|| ಇತ್ಥಂ ನಾರಾಯಣಂ ತಂ ಯತಿಪತಿರತಸೋತ್ಸರ್ವತೋಭದ್ರಮಂತಃ
೧೦೫ ಸ್ಮೃತ್ವಾಜ್ಞಾಂ ರಂಗನೇತು ಸ್ಸಪದಿ ಜಿಗಮಿಷುಸ್ತಂ ಯಯಾಚೇಥ ಗಂ
ತುಮ್ | ಸೋಽರಕ್ಷನ್ನಾತ್ಮನಮುದ್ರಾಂ ಸುತರತಿರಪಿ ತಂ ಪ್ರತ್ಯಬಧ್ನಾದ್ದ್ವಿ
ಪಂಚಾಶದ್ವಿಪ್ರಾಃ ಪ್ರಾಹುರೇತಚ್ಚರಣಸರಸಿಜೇ ಸರ್ವಏವಾವಗೃಹ್ಯ ||

ಶ್ಲೋ|| ತ್ವದ್ದೈವಂ ತ್ವಂ ತುಪಶ್ಯೇರ್ವಯಮಿಹ ಭವತಾ ತತ್ರನೇಯಾ ಯತಸ್ತ್ವಂ
೧೦೬ ಪ್ರೋಕ್ತಸ್ತ್ವೇವಂ ಸ ಚಿಂತಾಂ ವ್ಯತನುತ ಬಹುಧಾ ನಿರ್ಣಯಂ ಚಾಧ್ಯ
ಗಚ್ಛತ್ | ಅನ್ಯೂನಂ ನಾತಿರಿಕ್ತಂ ಬಹುಕುತುಕಕರಂ ಕಾರಯಿತ್ವಾ ಸ್ವೆ
ಬಿಂಬಂ ತತ್ರಾವಿಶ್ಯ ಸ್ವಶಕ್ತ್ಯಾ ಸಕಲಜನಮುದೇ ನಿತ್ಯವಾಸಂ ಪ್ರಚಕ್ರೇ||

ಟೀ|| ಹೀಗೆ ರಾಮಾನುಜಾಚಾರ್ಯರು, ತಿರುನಾರಾಯಣಸ್ವಾಮಿಯವರಿಗೂ ಶ್ರೀಸಂಪತ್ಕುಮಾರನಿಗೂ, ಯಾವ ಭಾಗದಲ್ಲಿಯೂ, ಯಾವ ಕೊರತೆಯೂ ಇಲ್ಲದಂತೆ ಎಲ್ಲಾ ಏರ್ಪಾಡುಗಳನ್ನೂ ಮಾಡಿದರು. ಅನಂತರ ತಮಗೂ, ಶ್ರೀರಂಗನಾಥನಿಗೂ "ಶರಣಾಗತಿಗದ್ಯ" ರೂಪವಾದ ಸಂವಾದ ನಡೆದಾಗ "ಯಾವಚ್ಛರೀರಪಾತಮತ್ರೈವ ಶ್ರೀರಂಗೇ ಸುಖಮಾಸ್ವ" (ಈ ಶರೀರವಿರುವವರಿಗೂ ಈ ಶ್ರೀರಂಗದಲ್ಲಿಯೇ ನಿತ್ಯವಾಸಮಾಡಿಕ್ಕೊಂಡಿರಿ) ಎಂದು ಶ್ರೀರಂಗನಾಥನು ಅಪ್ಪಣೆಕೊಡಿಸಿದ್ದು ಜ್ಞಾಪಕಕ್ಕೆ ಬರಲು, ಚೋಳನ ಬಾಧೆಯೂ ತಪ್ಪಲಿಕ್ಕಾಗಿ, ಇಲ್ಲಿಯೂ ಅವಶ್ಯಕವಾಗಿ ಮಾಡಬೇಕಾದ ಕೆಲಸಗಳೂ, ಇಲ್ಲದಿರಲು, ತಾವು ಶ್ರೀರಂಗಕ್ಕೆ ಪ್ರಯಾಣಮಾಡಲು ಉದ್ದೇಶಿಸಿ ಶ್ರೀ ತಿರುನಾರಾಯಣಸ್ವಾಮಿಯವರನ್ನು ಅಪ್ಪಣೆ ಕೇಳಲು, ಅವರಿಗೆ ಇಷ್ಟವಿಲ್ಲದ್ದರಿಂದ ಪ್ರತ್ಯುತ್ತರ ಹೇಳದೇ ಸುಮ್ಮನಿದ್ದರು. ಇವರಿಗೂ ಚಲುವರಾಯಸ್ವಾಮಿಯಲ್ಲಿದ್ದ ಪುತ್ರವಾತ್ಸಲ್ಯವು ಪ್ರಯಾಣಕ್ಕೆ ತಡೆ ಮಾಡಿತು. ಐಂಬತ್ತಿರುವರೂ ಕೂಡ ಈ ರಾಮಾನುಜಾಚಾರ್ಯರ ಪಾದಾರವಿಂದಗಳನ್ನು ಹಿಡಿದುಕ್ಕೊಂಡು "ಆಚಾರ್ಯರೇ? ಚಲುವರಾಯಸ್ವಾಮಿಯು ನಿಮ್ಮ ದೇವರು. ನಿಮ್ಮ ದೇವರನ್ನು ನೋಡಿಕೊಳ್ಳುವ ಕೆಲಸ ನಿಮ್ಮದು. ನಮ್ಮ ದೇವರು ನೀವು. ನೀವು ಎಲ್ಲಿಗೆ ಹೋಗುತ್ತೀರೋ ಅಲ್ಲಿಗೇನೇ ನಾವು ಬರತಕ್ಕವರೇ ಹೊರತು ನಮಗೆ ಇಲ್ಲೇನು ಕೆಲಸ?" ಎಂದು ವಿಜ್ಞಾಪಿಸಿದರು. ಈ ಮೂರು ವಿಧವಾದ ಅಡ್ಡಿಗಳು ಬರಲು ರಾಮಾನುಜಾಚಾರ್ಯರು, "ಆಕಡೆ ಶ್ರೀರಂಗನಾಥನ ಅಪ್ಪಣೆ ಈಕಡೆ ತಿರುನಾರಾಯಣನ ಅಪ್ಪಣೆ. ನನಿಗೂ ಬಿಟ್ಟು ಹೋಗುವುದಕ್ಕೆ ಸಮಾಧಾನವಿಲ್ಲ. ಐಂಬತ್ತಿರುವರು ನಮ್ಮನ್ನು ಬಿಟ್ಟಿರುವುದಿಲ್ಲ. ಅವರು ಹೊರಟು ಹೋದಮೇಲೆ ಇಲ್ಲಿ ನಾವು ಇಷ್ಟು ಮಾಡಿದ್ದೂ ಏನಾಗುವುದು" ಎಂದು ಬಹಳ ವಿಧವಾಗಿ ಯೋಚನೆಮಾಡಿ, ಪರಿಹಾರಕ್ರಮವನ್ನೂ ನಾನಾವಿಧವಾಗಿ ಯೋಚಿಸಿದಾಗ್ಯೂ ಸರಿಹೋಗದೇ, ಕೊನೆಗೆ ಎರಡು ಕಡೆಗಳಲ್ಲೂ ನಾವಿದ್ದೇತೀರಬೇಕೆಂದು ತೀರ್ಮಾನ ಮಾಡಿಕ್ಕೊಂಡು, ಬಹಳ ಬುದ್ಧಿವಂತನಾದ ಶಿಲ್ಪಿಯನ್ನು ಕರಸಿ, ತಮ್ಮ ಅಂಗಪ್ರತ್ಯಂಗಗಳಲ್ಲಿ ಯಾವುದರಲ್ಲಿಯೂ ಸ್ವಲ್ಪವೂ ವ್ಯತ್ಯಾಸಬಾರದಂತೆ, ತಮ್ಮ ಹಾಗೆಯೇ ಇರುವ ಒಂದು ವಿಗ್ರಹವನ್ನು ಮಾಡಿಸಿ ಅದಕ್ಕೆ ಪಾಂಚರಾತ್ರಶಾಸ್ತ್ರದ ಭಕ್ತವಿಗ್ರಹ ಪ್ರತಿಷ್ಠಾಕ್ರಮದಂತೆ ಪ್ರತಿಷ್ಠೆಮಾಡಿಸಿ ಪ್ರಾಣಪ್ರತಿಷ್ಠೆ ಮಾಡುವ ಸಂದರ್ಭದಲ್ಲಿ ತಾವೇ ತಮ್ಮ ಯೋಗಶಕ್ತಿಯಿಂದ ಆ ವಿಗ್ರಹದೊಳಗೆ ಸಾಂನಿಧ್ಯಮಾಡಿ, ಆ ಐಂಬತ್ತಿರುವರ ನಂಬಿಕೆಗಾಗಿ ತಾವು

ಹೊರಗೆ ನಿಂತು ತೆರೆಯೊಳಗೆ ಇರುವ ಆ ವಿಗ್ರಹದ ಮೂಲಕ ಅವರೊಡನೆ ಮಾತ ನಾಡಿ "ಇನ್ನುಮೇಲೆ ನಾವು ಇಲ್ಲಿ ವಿಭವಾವತಾರದಿಂದಲೇ ಇದ್ದೇವೆಂದು ಭಾವಿಸಿ, ನಿಮ್ಮ ನಿಮ್ಮ ಭಗವತ್ಕೈಂಕರ್ಯದಲ್ಲಿ ನಿರತರಾಗಿರಿ" ಎಂದು ಅಪ್ಪಣೆಮಾಡಿ ಎಲ್ಲರಿಗೂ (ತಿರುನಾರಾಯಣ, ತಾವು, ಐಂಬತ್ತಿರುವರು, ಸಮ್ಮಂಧವರು) ಸಂತೋ ಷವುಂಟಾಗುವುದಕ್ಕೋಸ್ಕರ ಅಲ್ಲಿಯೇ ನಿತ್ಯವಾಸವನ್ನು ಮಾಡುತ್ತಿದ್ದರು.

---

ಆಗ ಅವರ ಕಾಲದಲ್ಲಿ ಮಾತ್ರ ಹಾಗೆ ವಿಭವಾವತಾರದಂತೆ ಬಿಜಮಾಡಿಸಿದ್ದರೇ ಹೊರತು ಈಗ ಹಾಗಿಧಾರೆಯೋ ? ಅಂದರೆ

ಶ್ಲೋ|| ಅದ್ಯಾಪ್ಯಾಸ್ತೇ ಸಪರ್ಯಾಮನುದಿವಸಮಸೌ ತತ್ರ ರಾಮಾನುಜಾರ್ಯ
೧೧೦೭ ಸ್ಸಂಪತ್ಪುತ್ರಾಯ ಕುರ್ವನ್ಕಲಿಬಲಕಲಿತಂ ಕಲ್ಮಷಂ ಘಾತಯನ್ನಃ |
ಕಾಲೇಕಾಲೇ ಸ್ವಶಕ್ತಿಂ ಬಹುಕುತುಕಕರೀಂ ಭೋಜಯನ್ಸ್ವಭಕ್ತಾನ್
ಅಂತಸ್ಸ್ವಾನಂದಸಾಂದ್ರಸ್ಸ್ಮಿತರುಚಿರಮುಖಸ್ಸುಪ್ರಸನ್ನೋಗಭೀರಃ ||

ಟೀ|| ಈಗಲೂ ಪ್ರತಿದಿವಸವೂ ತಿರುನಾರಾಯಣಸ್ವಾಮಿಯವರಿಗೂ ಚಲುವ ರಾಯಸ್ವಾಮಿಯವರಿಗೂ ಸರ್ವವಿಧವಾದ ಸೇವೆಗಳನ್ನೂ ತಾವೇ ಮಾಡುತ್ತಿರುವರಾ ಗಿಯೂ, ದೃಢವಾದ ನಂಬಿಕೆಯುಳ್ಳ ಭಕ್ತರುಗಳಿಗೆ ತಮ್ಮ ವಿಚಿತ್ರವಾದ ಶಕ್ತಿಯನ್ನು ಅನುಭವಕ್ಕೆ ಕೊಡುತ್ತಿರುವರಾಗಿಯೂ, ಕಲಿಯ ಮಹಿಮೆಯಿಂದ ನಮ್ಮಲ್ಲಿ ದೋಷ ಗಳು ಸಂಭವಿಸಿದರೂ ಅದನ್ನು ಪರಿಹರಿಸುತ್ತಲೂ ಬಿಜಮಾಡಿಸಿದ್ದಾರೆ. ಇದು ಹ್ಯಾಗೆ ತಿಳಿಯುವುದು ಅಂದರೆ ಆ ರಾಮಾನುಜಾಚಾರ್ಯರ ದಿವ್ಯಮಂಗಳವಿಗ್ರ ಹವನ್ನು ದರ್ಶನಮಾಡಿದರೇನೇ ಗೊತ್ತಾಗುವುದು. ಆ ವಿಗ್ರಹದಲ್ಲಿ ಹ್ಯಾಗೆ ದರ್ಶನ ಕೊಡುವರು ಅಂದರೆ, ಭಗವಂತನ ಸರ್ವವಿಧಾನುಭವದಿಂದಲೂ ಉಂಟಾದ ಪರಮಾನಂದದಿಂದ ಪೂರ್ಣರಾಗಿಯೂ, ಆದರಪರೀವಾಹ ರೂಪವಾದ ಮಂದಸ್ಮಿ ತವುಳ್ಳವರಾಗಿಯೂ, ಅದರಿಂದಲೇ ತೃಣೀಕೃತಜಗತ್ತ್ರಯರೆಂದು ಹೇಳುವ ಮಹಾ ಗಾಂಭೀರ್ಯವುಳ್ಳವರಾಗಿಯೂ, ಹಾಗಿದ್ದರೂ ಲೋಕವೆಲ್ಲವೂ ಉಜ್ಜೀವಿಸಬೇಕೆಂಬ ಕೃಪಾಮಾತ್ರಪ್ರಸನ್ನಾಚಾರ್ಯತ್ವವನ್ನು ತೋರಿಸುವ ಮುಖಪ್ರಸಾದವುಳ್ಳವರಾ ಗಿಯೂ, ಜ್ವಲಿಸುವ ಅಗ್ನಿಯಂತೆ ಮಹಾತೇಜಸ್ವಿಗಳಾಗಿಯೂ, ಪರತ್ವಸೌ ಲಭ್ಯಗಳನ್ನು ಪ್ರತ್ಯಕ್ಷದಲ್ಲಿ ದರ್ಶನಕೊಡುವರು. ಆದುದರಿಂದ ಈಗಲೂ ಈ ಯಾದವಗಿರಿಯಲ್ಲಿ ಶ್ರೀ ರಾಮಾನುಜಾಚಾರ್ಯರು ವಿಭವಾವತಾರದಿಂದಲೇ ಇದ್ದು ಶ್ರೀಮನ್ನಾರಾಯಣನ ನಿತ್ಯಕೈಂಕರ್ಯವನ್ನು ನಡಿಸುತ್ತಿರುವರು.

ಶ್ರೀ ರಾಮಾನುಜಾಚಾರ್ಯರ ಚರಿತ್ರವನ್ನು ಬಹಳಭಾಗ ಬಿಟ್ಟುಬಿಟ್ಟು
ಪ್ರಕೃತೋಚಿತವಾದ ಸ್ವಲ್ಪಭಾಗವನ್ನೇ ಹೇಳಿಧೇನೆ.

ಶ್ಲೋ|| ಜ್ಞಾತುಂ ವಕ್ತುಂಚ ಶಕ್ಯೋ ಯತಿಪತಿಮಹಿಮಾ ಕಿಂ ನು ಯಾವಾನ್ಯಥಾ
೧೦೮ ವನ್ಮಾಹಾತ್ಮ್ಯಂ ಯಾದವಾದ್ರೇಃ ಕಥಯಿತುಮಿಹ ತದ್ವೃತ್ತಮುಕ್ತಂತು ಕಿಂಚಿತ್ | ಯದ್ಯೇವಂನಾಗಮಿಷ್ಯದ್ಯದುಗಿರಿ ಮಹಿರಾಡಂಶಭೂತೋ ಯತೀಂದ್ರೋ ನಾಜ್ಞಾಸ್ಯತ್ಕೋಪಿ ವೈನಂ ಗಿರಿಮಥ ಚ ಹರಿಂ ನಾಗ ಮಿಷ್ಯಚ್ಚ ಕೋಪಿ ||

ಟೀ|| ಶ್ರೀರಾಮಾನುಜಾಚಾರ್ಯರ ಮಹಿಮೆಯು ಎಷ್ಟಿದೆಯೋ ? ಅಷ್ಟನ್ನೂ ಇದ್ದಂತೆಯೇ ತಿಳಿಯುವುದಕ್ಕೂ ಹೇಳುವುದಕ್ಕೂ ಯಾರಿಗಾದರೂ ಶಕ್ತಿಯು ಇಧೆಯೋ ? ಏನು ? ಆದರೆ ಯಾದವಗಿರಿ ಮಹಾತ್ಮ್ಯವನ್ನು ಹೇಳುವುದು ಉದ್ದೇಶ್ಯವಾದುದರಿಂದ ಅದಕ್ಕೆ ಬೇಕಾಗುವಷ್ಟು ಕಥೆಗಳನ್ನು ಮಾತ್ರ ಸಂಗ್ರಹವಾಗಿ ಹೇಳಿಧೇನೆ. ಯಾದವಗಿರಿ ಮಹಾತ್ಮ್ಯಕ್ಕೆ ಶ್ರೀರಾಮಾನುಜಾಚಾರ್ಯರ ಚರಿತ್ರವು ಅಪೇಕ್ಷಿತವಾದುದು ಹ್ಯಾಗಂದರೆ, ಶ್ರೀ ರಾಮಾನುಜಾಚಾರ್ಯರು ಈ ದಿವ್ಯ ಕ್ಷೇತ್ರಕ್ಕೆ ದಯಮಾಡಿಸಿ ಹುತ್ತವನ್ನು ತೆಗೆದು ಹಿಂದೆ ಹೇಳಿದಂತೆ ಜೀರ್ಣೋದ್ಧಾರ ಮಾಡದೇ ಇದ್ದ ಪಕ್ಷದಲ್ಲಿ “ ಇದೊಂದು ಕ್ಷೇತ್ರ ” “ ಇಲ್ಲಿ ನಾರಾಯಣಸ್ವಾಮಿಯು ಇಧಾರೆ ’ ಎಂಬದಾಗಿ ಯಾರಿಗೆ ತಿಳಿಯುತ್ತಿತ್ತು. ಇಲ್ಲಿಗೆ ಯಾರುತಾನೆ ಬರುತ್ತಿದ್ದರು. ಆದ್ದರಿಂದ ಅವರ ಕಥೆ ಆವಶ್ಯಕವಾಯಿತು.

---

ಗ್ರಂಥಕರ್ತೃನು ಹೀಗೆ ಯಾದವಗಿರಿ ಮಹಾತ್ಮ್ಯವನ್ನು ಹೇಳಿ
ದೇಶಾಧಿಪತಿಯ ಮಂಗಳಾಶಾಸನವನ್ನು ಹೇಳುವನು.

ಶ್ಲೋ|| ಸರ್ವಜ್ಞೋಪ್ಯಜ್ಞತುಲ್ಯ ಸ್ವವಶಜಗದಪಿ ಸ್ವಾಸ್ಯತಂತ್ರಾಶನಾದಿಃ
೧೦೯ ಸ್ವಾಮಿಸ್ವತ್ವಂ ಗತೋಯಸ್ಸಕಲಮಪಿ ಫಲಂ ಭಕ್ತಿಮಾತ್ರೇಣ ದತ್ತೇ | ಸೋಯಂ.ಯದ್ವದ್ರಿನಾಥೋ ಯದುಕುಲವಿವಶಸ್ತ್ವದ್ಭಪಾತ್ಕೃಷ್ಣಭೂಪಾತ್ಸರ್ವಾನ್ಭೋಗಾನವಾಪ್ನೋತ್ವನುದಿವಸಮಮುಂ ಪಾಲಯತ್ವಾರ್ಕ ಚಂದ್ರಮ್ ||

ಟೀ|| ಸಕಲ ವೇದಾಂತಗಳಲ್ಲಿಯೂ ಎಲ್ಲವನ್ನೂ ತಿಳಿದವನೆಂದು ಹೇಳಲ್ಪಡುತ್ತಿದ್ದಾಗ್ಯೂ ಏನೂ ತಿಳಿಯದವನಂತೆಯೂ, ಸರ್ವಜಗತ್ತನ್ನೂ ಸ್ವಾಧೀನದಲ್ಲಿಟ್ಟು

ಕ್ಕೊಂಡಿರುವ ಸರ್ವಸ್ವತಂತ್ರನೆನಿಸಿಕ್ಕೊಂಡಿದ್ದಾಗ್ಯೂ ಪರಾಧೀನವಾದ ತನ್ನ ಸ್ಥಿತಿಗತಿಶಯನಸ್ನಾನಾಹಾರಾದಿ ವ್ಯಾಪಾರವುಳ್ಳವನಾಗಿಯೂ, ಆದುದರಿಂದಲೇ ಸರ್ವಶಕ್ತನಾಗಿದ್ದಾಗ್ಯೂ ಸರ್ವಾಶಕ್ತನಂತೆಯೂ, " ಸರ್ವಸ್ವಾಮಿ " ಎನಿಸಿಕೊಂಡಿದ್ದಾಗ್ಯೂ " ನಮ್ಮ ಚಲುವರಾಯಸ್ವಾಮಿ " ಎಂದು, ತನ್ನ ಭಕ್ತರ ಸ್ವತ್ತಾಗಿಯೂ ತನ್ನಲ್ಲಿ ಭಕ್ತಿಮಾಡಿದ ಮಾತ್ರದಿಂದ ಭಕ್ತರ ಸರ್ವಾಭೀಷ್ಟವನ್ನೂ ಕೊಡತಕ್ಕವನಾಗಿಯೂ ಇರುವ ಶ್ರೀಯಾದವಗಿರಿನಾಯಕನಾದ ಶ್ರೀಚಲುವರಾಯಸ್ವಾಮಿಯು ಶ್ರೀ ಕೃಷ್ಣನ ತಂದೆಯಾದ ವಸುದೇವರಿಗಿಂತಲೂ ಎಷ್ಟೋ ಹಿಂದಲಿಂದಲೇ ಯದುವಂಶದ ಧೊರೆಗಳಿಗೆ ಮನೆದೇವರಾಗಿದ್ದು, ಅವರವರ ಧರ್ಮಬುದ್ಧಿಗೂ ಐಶ್ವರ್ಯಕ್ಕೂ ಭಕ್ತಿಗೂ ತಕ್ಕಂತೆ ಅವರುಗಳಿಂದ ಸರ್ವೋಪಚಾರಗಳನ್ನೂ ಅನುಭವಿಸಿ, ಅದರ ರುಚಿಯನ್ನು ಕಂಡಿರುವುದರಿಂದ ಈಗಲೂ ಅದೇ ವಂಶದಲ್ಲಿ ಜನಿಸಿರುವ ಶ್ರೀ ನಾಲ್ವಡಿಕೃಷ್ಣರಾಜವೊಡೆಯರವರಿಂದಲೂ ಇತೋಪ್ಯತಿಶಯಿತವಾದ ಔಪಚಾರಿಕ, ಸಾಂಸ್ಪರ್ಶಿಕ, ಆಭ್ಯವಹಾರಿಕಾದಿ ಸರ್ವೋಪಚಾರಗಳನ್ನೂ ಅನುಭವಿಸಲಿ. ಹೀಗೆ ಆರಾಧಿಸುವ ಈ ದೇಶಾಧಿಪತಿಯಾದ ನಾಲ್ವಡಿ ಕೃಷ್ಣರಾಜವೊಡೆಯರವರನ್ನು ಸರ್ವಪರಿವಾರಗಳೊಡನೆ ಸರ್ವಶ್ರೇಯಸ್ಸುಗಳನ್ನೂ ಕೊಟ್ಟು ಆಚಂದ್ರಾರ್ಕವಾಗಿ ಕಾಪಾಡಲಿ.

ಕವಿಯು ಸ್ವಾಹಂಕಾರಪರಿಹಾರಪೂರ್ವಕವಾಗಿ, ತನ್ನ ಗೋತ್ರ ಹೆಸರು
ಯೋಗ್ಯತೆಗಳನ್ನು ಹೇಳಿ ಇದರಿಂದ ಭಗವಂತನ ಮುಖೋಲ್ಲಾಸ
ವಾದರೆ ಸಾಕು ಎಂದು ಹೇಳುತ್ತಾನೆ.

ಶ್ಲೋ|| ವಕ್ಷ್ಯತ್ಯಸ್ಮದ್ಗೋತ್ರಕರ್ತುಃ ಕುಶಿಕತನುಭುವಸ್ಸೃಷ್ಟಿರಿತ್ಯೈಲೀತಿ ಕಿಂನು
೧೧೦ ಸ್ವೇಚ್ಛಾಕ್ಲೃಪ್ತಿಪ್ರಸಕ್ತಿರ್ಬುಧಪದಮಿತಿ ಜ್ಞತ್ವದುರ್ಮಾನಮೋಹಃ |
ಕಿಂವಕ್ಷ್ಯೇ ವೆಂಕಟಾರ್ಯಸ್ತ್ವಿತಿ ನ ಹಿ ವದಿತುಂ ಯುಕ್ತರೂಪಂಸ್ವನಾಮ
ವ್ಯಕ್ತಿಜ್ಞಾನಂ ತು ಕಸ್ಮಾದಿತಿ ಯದಿ ಕುತುಕಂ ತತ್ತು ಸರ್ವಜ್ಞವೇದ್ಯಮ್|

ಟೀ|| ಈಗ ನಾನು ಮಾಡಿರುವ ಈ ಕಾವ್ಯನಿರ್ಮಾಣವು ನಮ್ಮ ಗೋತ್ರಪ್ರವರ್ತಕರಾದ ಕೌಶಿಕರ ಸೃಷ್ಟಿಯಂತೆ ಆಶ್ಚರ್ಯಕರವೆಂದು ಹೇಳೋಣವೆಂದರೆ, ಅನೂಚಾನವಾಗಿ ಬಂದದ್ದಲ್ಲದೆ ತನ್ನ ಮನಸ್ಸಿಗೆ ಬಂದಂತೆ ಮಾಡಿದ ಕೆಲಸವೆಂದರ್ಥವಾಗುವುದು. (ಈಗಲೂ ಜನರು " ವಿಶ್ವಾಮಿತ್ರಸೃಷ್ಟಿ " ಎನ್ನುವದಿಲ್ಲವೇ) " ಅನೇಕ ವಿಷಯಗಳನ್ನು ತಿಳಿದವನು ನಾನು " ಎಂದು ಹೇಳಿಕ್ಕೊಂಡರೆ ದುರಹಂ

ಕಾರದಿಂದ ಹೇಳಿದ ಅಜ್ಞಾನದ ಮಾತಾಗುವುದು. "ವೆಂಕಟಾಚಾರ್ಯನಾದ ನಾನು" ಗ್ರಂಥವನ್ನು ಮಾಡಿದೆನು ಎಂದು ಹೇಳಿದರೆ, "ಆತ್ಮನಾಮ ಗುರೋರ್ನಾಮ" ಎಂಬಂತೆ ಹೇಳಬಾರದ ತನ್ನ ಹೆಸರನ್ನು ಹೇಳಿದ ದೋಷಕ್ಕೆ ಗುರಿಯಾಗಬೇಕಾಗುವುದು. ಇದು ಯಾವುದೂ ಹೇಳದಿದ್ದರೆ, "ಈ ಗ್ರಂಥವನ್ನು ಮಾಡಿದವರು ಯಾರು?" ಎಂಬ ಜನಗಳ ಜಿಜ್ಞಾಸೆಗೆ ಸಮಾಧಾನ ಬೇಕೋ? ಬೇಡವೋ? ಅಂದರೆ, ಅದು ಸರ್ವಜ್ಞ ಚಿತ್ತಕ್ಕೆ ವೇದ್ಯವಾದರೆ ಸಾಕು.

---

ಈ ಗ್ರಂಥಕರ್ತನು ತನ್ನ ಹೆಸರನ್ನೇ ಹೇಳದಷ್ಟು ವೈರಾಗ್ಯವುಳ್ಳವನಾದರೆ,
ಅಂಥವನಿಗೆ ಈ ಗ್ರಂಥರಚನೆಯಿಂದೇನು ಪ್ರಯೋಜನ? ಆದುದರಿಂದ
ಏನೋ ಪ್ರಯೋಜನವಿರಬೇಕು.

ಶ್ಲೋ|| ಖ್ಯಾತಿರ್ಲಾಭಶ್ಚ ಪೂಜಾ ಸ ಹಿ ಫಲಮಿತರತ್ಕಿಂಚಿದಸ್ಯಾಸ್ಯ ಬಂಧಸ್ಯಾ
೧೧೧ ಚಾರ್ಯಾಣಾಂ ತು ಸೂಕ್ತಿಸ್ರಗಭಿವಹನಜಃ ಕಂಠತೋ ಗಂಧ ಏಷಃ |
ಕಿಂಚಾಸ್ಮತ್ತಾತಪಾದಾರ್ಚಿತ ಹಯವದನಾ ಕೇಕರಾದಕ್ಷ್ಣೋಯಂ
ವಾಸಸ್ಥಾನಾಭಿಮಾನೋ ಯದುಗಿರಿವಸತೇ ಸ್ತಸ್ಯ ರಾಮಾನುಜಸ್ಯ ||

ಟೀ|| ಕೀರ್ತಿ, ದ್ರವ್ಯಲಾಭ, ಪುರಸ್ಕಾರ ಮುಂತಾದ ದೃಷ್ಟಾದೃಷ್ಟಪ್ರಯೋಜನಗಳು ಯಾವವೂ ಈ ಗ್ರಂಥರಚನೆಗೆ ಉದ್ದೇಶ್ಯವಲ್ಲ. ಉದ್ದೇಶ್ಯವಿಲ್ಲದಮೇಲೆ ಗ್ರಂಥ ಹ್ಯಾಗೆ ಹುಟ್ಟಿತು? ಅಂದರೆ, ಪೂರ್ವಾಚಾರ್ಯರುಗಳ ಶ್ರೀಸೂಕ್ತಿಗಳೆಂಬ ಹೂವಿನಮಾಲಿಕೆಗಳನ್ನು ಕಂಠದಲ್ಲಿ ಧರಿಸಿಕೊಂಡಿದ್ದದ್ದರ ವಾಸನೆ. ಅಂದರೆ ವಾಸನಾಕಾರ್ಯವಾಗಿ ಪ್ರಯತ್ನವಿಲ್ಲದೆ ತಾನಾಗಿ ಹೊರಟದ್ದು ಮತ್ತು ನಮ್ಮ ತಂದೆಯಾದ ಜಗ್ಗು ಶಿಂಗರಯ್ಯಂಗಾರ್ಯರೆಂಬವರಿಂದ ಉಪಾಸನೆ ಮಾಡಲ್ಪಟ್ಟ ಲಕ್ಷ್ಮೀಹಯವದನನ ಚತುರವಾದ ಬಲಗಡೆಯ ಕಟಾಕ್ಷ. ಅಂದರೆ, ಎಡತೊಡೆಯಮೇಲೆ ಕುಳಿತಿರುವ ಲಕ್ಷ್ಮೀದೇವಿಯಲ್ಲಿ ಎಡಗಡೆಯ ಕಟಾಕ್ಷವೂ ನನ್ನಲ್ಲಿ ಬಲಗಡೆಯ ಕಟಾಕ್ಷವೂ ಇರುವುದರಿಂದ ಲಕ್ಷ್ಮಿಯಂತೆ ನನ್ನನ್ನೂ ಪ್ರೀತಿಸುವ ಹಯಗ್ರೀವನ ಅನುಗ್ರಹದಿಂದ ಇದು ಉಂಟಾಯಿತು. "ಕಾವ್ಯವನ್ನು ಮಾಡಬೇಕಾದರೆ ಎಷ್ಟೋ ವಿಷಯಗಳು ಇಲ್ಲವೇ? ಯಾದವಗಿರಿ ಮಾಹಾತ್ಮ್ಯವನ್ನು ಏತಕ್ಕೆ ಹೇಳಬೇಕು?" ಅಂದರೆ ನಮ್ಮ ಮತೋದ್ಧಾರಕಾಚಾರ್ಯರಾದ ಶ್ರೀರಾಮಾನುಜಾಚಾರ್ಯರಿಗೆ ಈ ಯಾದವಗಿರಿಯಲ್ಲಿರುವ "ತಮ್ಮ ನಿತ್ಯವಾಸಸ್ಥಾನ"

ಎಂಬ ಅಭಿಮಾನ. ಅಂದರೆ, ಆಚಾರ್ಯಾಭಿಮಾನವಿಷಯವಾದದ್ದೇ ಸರ್ವದಾ ಅನುಸಂಧೇಯವೆಂದಭಿಪ್ರಾಯ.

ಮತ್ತು ಈ ಗ್ರಂಥಕರ್ತನು ಅಹಂಕಾರಪಡುವುದಕ್ಕೇನೇ ಅವಕಾಶವಿಲ್ಲ.

ಶ್ಲೋ|| ಕ್ವಾಹಂ ಮಂದಃ ಕ್ವ ಚಿತ್ರಂ ಚರಿತಮಿದಮಹೋ ಸ್ರಗ್ಧರಾಃ ಕ್ವಾಪಿ
೧೨೨ ಶೈಲೀ ನಿಷ್ಕೋಶೀಭೂತ ಪಕ್ವಪ್ರರಸಕದಳಿಕಾಖಂಡತುಲ್ಯಾ ಪದಾ
ನಾಮ್ | ಸೋಽಯಂ ರಾಮಾನುಜಾರ್ಯೋ ಹೃದಯಸರಸಿಜೇ ಬದ್ಧಪ
ದ್ಮಾಸನೋಮೇ ಸರ್ವಂ ನಿರ್ಮಾಯ ವೋಽದಂ ಸ್ವಯಮಿಹ ಲಭತೇ
ಸ್ವಾಂತರಂಗಸ್ಥವಿಶ್ವಃ ||

ಟೀ|| ಮೂಢಬುದ್ಧಿಯಾದ ನಾನು ಎಲ್ಲಿ ? ಅತ್ಯಾಶ್ಚರ್ಯಕರವಾದ ಮಹಾನುಭಾವರ ಚರಿತ್ರವೆಲ್ಲಿ ? ಈ ಒರಟಾದ ಸ್ರಗ್ಧರಾವೃತ್ತಗಳೆಲ್ಲಿ ಕಳಿತಿರುವ ಸುಲಿದ ರಸಬಾಳೆಯಹಣ್ಣಿನ ಚೂರುಗಳಂತಿರುವ ಲಲಿತವಾದ ಪದಗಳ ಶೈಲಿಯು ಎಲ್ಲಿ ? ಸದಾ ಭಗವದ್ಧ್ಯಾನೈಕನಿರತರಾದ ಶ್ರೀ ರಾಮಾನುಜಾಚಾರ್ಯರು ನನ್ನ ಹೃದಯ ಕಮಲದಲ್ಲಿ ಪದ್ಮಾಸನವನ್ನು ಹಾಕಿಕೊಂಡು ಕುಳಿತು ತಾವೇ ಮಾಡಿ ನನ್ನ ಬಾಯಿಂದ ಹೊರಡಿಸಿ ಕೇಳಿ ತಾವೇ ಸಂತೋಷವನ್ನು ಅನುಭವಿಸುತ್ತಾರೆ. ಮತ್ತೊಬ್ಬರು ಹೇಳಿಕೊಟ್ಟದ್ದನ್ನು ಹೇಳಿದರೆ ಆದರದೇನುಹೆಮ್ಮೆ.

ಶಾಲಿವಾಹಶಕಾಬ್ದೇಷು ರಸಾಬ್ಧೀಭೇಂದ. ಸಂಮಿತೇ |
ರುಧಿರೋದ್ಗಾರಿ ನಾಮ್ನ್ಯಬ್ದೇ ಮಾಸಿಜ್ಯೇಷ್ಠೇಥ ಶುಕ್ಲಕೇ ||೧||
ಪಕ್ಷೇ ತಿಥೌ ಚ ಸಪ್ತಮ್ಯಾಂ ಭೌಮವಾರೇತ್ವಿಯಂಕೃತಿಃ |
ಸಂಪೂರ್ಣಾಯದುಶೈಲಸ್ಥ ಯತಿರಾಜ ದಯಾವಶಾತ್ ||೨||

ಇತಿ ಶ್ರೀ ಯದುಗಿರಿ ವಾಧೂಲಮಹಾರ್ಯ ಪೌತ್ರ ಶ್ರೀನಾರಾಯಣ ಗುರುಚರ
ಣಾಂಬುಜ ಷಟ್ಚರಣಸ್ಯ, ಐಂಬತ್ತಿರುವರಾ ಸ್ವಾನೀಕಂ ಪಂಡಿತರತ್ನಂ
ಕುಪ್ಪಣ್ಣಾಸ್ವಾಮಿನಾಂ ಪ್ರಸಾದಾದಧಿಗತಜ್ಞಾನಸ್ಯ, ಸಾಹಿತ್ಯಾಲಂ
ಕಾರ ಸಾಂಖ್ಯ ಯೋಗ ವಿಶಿಷ್ಟಾದ್ವೈತವೇದಾಂತ ದ್ರಾವಿಡ
ವೇದಾಂತವಿದುಷಃ, ಕಲ್ಕತ್ತಾರಾಜಧಾನೀಸಮಾಸಾದಿತ
ಸಾಂಖ್ಯತೀರ್ಥೋಪಾಧ್ಯಸ್ಯ, ಶ್ರೀ ಯದುಗಿರಿ
ಸಂಸ್ಕೃತಮಹಾಪಾಠಶಾಲಾಧ್ಯಾಪಕಸ್ಯ.
ಶ್ರೀಮನ್ಮಹೀಶೂರ ಸಂಸ್ಥಾನಾಧಿಪತಿ
ಶ್ರೀಕೃಷ್ಣಭೂಪಾಸ್ಥಾನೀವಿದುಷಃ
ಶ್ರೀಯದುಗಿರಿ ನಿತ್ಯವಾಸಿನಃ
ಜಗ್ಗು ವೆಂಕಟಾಚಾರ್ಯಸ್ಯ ಕೃತಿಷು
ಶ್ರೀ ಯಾದವಗಿರಿ ಮಾಹಾತ್ಮ್ಯ ಸಂಗ್ರಹಸ್ಸಮಾಪ್ತಃ.

---

ಈ ಪುಸ್ತಕದ ೧೧ ನೇ ಪುಟದಲಾಗಾಯಿತು ೭೪ ನೆಯ ಪುಟದವರೆಗೆ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿದೆ.